# www.karunaduexams.com

ಪ್ರಚಲಿತ ವಿದ್ಯಮಾನಗಳು- ಜನವರಿ, 2017

## Contents


ಅಂತರ್ ರಾಷ್ಟ್ರೀಯ .......... 2

ಪ್ರಶಸ್ತಿಗಳು .......... 11

ಪರಿಸರ .......... 18

ಸುದ್ದಿಯಲ್ಲಿರುವ ವ್ಯಕ್ತಿಗಳು .......... 19

ವ್ಯವಹಾರ .......... 22

ರಾಜ್ಯ .......... 37

ರಾಷ್ಟ್ರೀಯ .......... 49

ವಿಜ್ಞಾನ-ತಂತ್ರಜ್ಞಾನ .......... 68

ಕ್ರೀಡೆ .......... 76


ಹೆಚ್ಚಿನ ಮಾಹಿತಿಗಾಗಿ,

ನೀಮಗೆ ಯಾವುದೇ ಸಹಾಯದ ಅಗತ್ಯವಿದ್ದರೆ, WhatsApp ಮತ್ತು ಸಂದೇಶವನ್ನು ಮಾಡಿ, ದಯವಿಟ್ಟು ಕರೆ ಮಾಡಬೇಡಿ


Mobile: +91- 98805 33259 (Content related queries)

Mobile: +91-9844915689 (Technical and Marketing related queries)

Mobile:+91-9972355744(Management related queries)

## ಅಂತರ್ ರಾಷ್ಟ್ರೀಯ

**ಪರಮಾಣು ನೆಲೆ ಮತ್ತು ಸೌಲಭ್ಯಗಳ ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಂಡ ಭಾರತ-ಪಾಕಿಸ್ತಾನ**



ಭಾರತ ಮತ್ತು ಪಾಕಿಸ್ತಾನ ತಮ್ಮ ಪರಮಾಣು ನೆಲೆ ಮತ್ತು ಸೌಲಭ್ಯಗಳ ಮಾಹಿತಿಯನ್ನು ಪರಸ್ಪರ ವಿನಿಮಯ ಮಾಡಿಕೊಂಡವು. ಉಭಯ ದೇಶಗಳ ನಡುವಿನ ಪರಮಾಣು ನೆಲೆ ಮೇಲೆ ದಾಳಿ ತಡೆಯುವ ಒಪ್ಪಂದದ ಅನ್ವಯ ಈ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲಾಗುತ್ತಿದೆ. ಜನವರಿ 1, 1992 ರಿಂದ ಮಾಹಿತಿ ವಿನಿಮಯವನ್ನು ಮಾಡಿಕೊಳ್ಳಲಾಗುತ್ತಿದ್ದು, ಈ ವರ್ಷ 26ನೇ ಬಾರಿಗೆ ವಿನಿಮಯ ಮಾಡಿಕೊಳ್ಳಲಾಯಿತು. ಅಲ್ಲದೇ ಎರಡು ದೇಶಗಳು ಉಭಯ ದೇಶಗಳ ಜೈಲಿನಲ್ಲಿರುವ ತಮ್ಮ ನಾಗರಿಕರ (ಮೀನುಗಾರರು ಮತ್ತು ಖೈದಿಗಳು) ಬಗ್ಗೆ ಮಾಹಿತಿಯನ್ನು ದೂತವಾಸ ಪ್ರವೇಶ ಒಪ್ಪಂದ (Agreement on Consular access) ಸಹ ವಿನಿಮಯ ಮಾಡಿಕೊಂಡವು.


**ಏನಿದು ಒಪ್ಪಂದ**:

- ಉಭಯ ದೇಶಗಳ ನಡುವೆ ಪರಮಾಣು ನೆಲೆ ಮತ್ತು ಸೌಲಭ್ಯಗಳ ಮೇಲೆ ನಡೆಯಬಹುದಾದ ಹಠಾತ್ ದಾಳಿಯನ್ನು ತಡೆಯಲು ಈ ದ್ವಿಪಕ್ಷೀಯ ಒಪ್ಪಂದದಕ್ಕೆ ಸಹಿ ಹಾಕಲಾಗಿದೆ.
- ಈ ಒಪ್ಪಂದದ ಅನ್ವಯ ಪ್ರತಿ ವರ್ಷ ಜನವರಿ 1 ರಂದು ಎರಡು ದೇಶಗಳಲ್ಲಿರುವ ಪರಮಾಣು ನೆಲೆ ಮತ್ತು ಸೌಲಭ್ಯದ ಮಾಹಿತಿಯನ್ನು ಹಂಚಿಕೊಳ್ಳಬೇಕು.
- ಈ ಒಪ್ಪಂದಕ್ಕೆ ಡಿಸೆಂಬರ್ 31, 1988 ರಲ್ಲಿ ಸಹಿ ಹಾಕಲಾಗಿದ್ದು, ಜನವರಿ 27, 1991 ರಿಂದ ಜಾರಿಗೆ ಬಂದಿದೆ. ಅಂದಿನ ಭಾರತದ ಪ್ರಧಾನಿ ರಾಜೀವ್ ಗಾಂಧಿ ಮತ್ತು ಪಾಕಿಸ್ತಾನದ ಪ್ರತಿನಿಧಿ ಬೆನಝೀರ್ ಭುಟ್ಟೋರವರ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.

**ದೂತವಾಸ ಪ್ರವೇಶ ಒಪ್ಪಂದ**:

- ಈ ಒಪ್ಪಂದಕ್ಕೆ ಮೇ 21, 2008ರಲ್ಲಿ ಸಹಿಹಾಕಲಾಯಿತು. ಈ ಒಪ್ಪಂದದ ಪ್ರಕಾರ ಎರಡು ದೇಶಗಳ ಜೈಲಿನಲ್ಲಿರುವ ನಾಗರಿಕರ ಬಗ್ಗೆ ವರ್ಷದಲ್ಲಿ ಎರಡು ಬಾರಿ ಅಂದರೆ ಜನವರಿ 1 ಮತ್ತು ಜುಲೈ 1 ರಂದು ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಬೇಕು.

**ಜನವರಿ 4: ವಿಶ್ವ ಬ್ರೈಲಿ ಲಿಪಿ ದಿನ**




ಪ್ರತಿ ವರ್ಷ ಜನವರಿ 4 ರಂದು ವಿಶ್ವ ಬ್ರೈಲಿ ಲಿಪಿಯನ್ನು ಆಚರಿಸಲಾಗುತ್ತದೆ. ಬ್ರೈಲಿ ಲಿಪಿ ಅಥವಾ ಬ್ರೈಲಿ ಕೋಡ್ ಅನ್ವೇಷಣಕಾರ ಲೂಯಿಸ್ ಬ್ರೈಲಿ ರವರ ಜನ್ಮದಿನವನ್ನು ಬ್ರೈಲಿ ಲಿಪಿ ದಿನವನ್ನಾಗಿ ಆಚರಿಸಲಾಗುತ್ತಿದೆ.

- ಬ್ರೈಲಿ ಭಾಷೆಯ ಮಹತ್ವವನ್ನು ಸಾರುವುದು ಹಾಗೂ ದೃಷ್ಠಿ ಮಾಂದ್ಯರಿಗೆ ಅನುಕೂಲವಾಗುವಂತೆ ಬ್ರೈಲಿ ಲಿಪಿಯಲ್ಲಿ ಹೆಚ್ಚೆಚ್ಚು ಅನ್ವೇಷಣಾ ಕೆಲಸವನ್ನು ಕೈಗೊಳ್ಳುವಂತೆ ಪ್ರೇರೇಪಿಸುವುದು ಈ ದಿನದ ಮಹತ್ವ.

- ಈ ದಿನಚರಣೆಯ ಅಂಗವಾಗಿ ವಿವಿಧ NGO ಗಳು ಹಾಗೂ ಸಂಸ್ಥೆಗಳು ಒಂದೆಡೆ ಸೇರಿ ದೃಷ್ಟಿ ಮಾಂದ್ಯರ ಬಗ್ಗೆ ಜನರಲ್ಲಿರುವ ಧೋರಣೆಯನ್ನು ನಿವಾರಿಸಿ ಇತರರಂತೆ ಸಮಾನತೆ ಕಾಪಾಡಲು ಶ್ರಮಿಸುತ್ತವೆ.

**ಲೂಯಿಸ್ ಬ್ರೈಲಿ**:

- ಅಂಧರು ಓದಲು ಮತ್ತು ಬರೆಯಲು ಅನುಕೂಲವಾಗುವ ಬ್ರೈಲಿ ಲಿಪಿಯನ್ನು ಸಂಶೋಧಿಸಿದ ಕೀರ್ತಿ ಲೂಯಿಸ್ ಬ್ರೈಲಿ ಅವರಿಗೆ ಸಲ್ಲುತ್ತದೆ.
- ಬ್ರೈಲಿ ರವರು ಫ್ರಾನ್ಸ್ ನಲ್ಲಿ ಜನವರಿ 4, 1809 ರಲ್ಲಿ ಜನಿಸಿದ್ದರು. ತಮ್ಮ ಮೂರನೇ ವಯಸ್ಸಿನಲ್ಲಿಯೇ ಅಪಘಾತವೊಂದರಲ್ಲಿ ಕಣ್ಣುಗಳನ್ನು ಕಳೆದುಕೊಂಡು ಅಂಧರಾದರು.
- ಇವರು ಸಂಶೋಧಿಸಿದ ಬ್ರೈಲಿ ಲಿಪಿ ಇವತ್ತು ಲಕ್ಷಾಂತರ ಅಂಧರಿಗೆ ಓದಲು ಮತ್ತು ಬರೆಯಲು ಅವಕಾಶ ಕಲ್ಪಿಸಿಕೊಟ್ಟಿದೆ.

**<u>ದ್ವಿತೆರಿಗೆ ಒಪ್ಪಂದವನ್ನು ತಿದ್ದುಪಡಿ ಮಾಡಲು ಭಾರತ-ಕಜಖಸ್ತಾನ ನಿರ್ಧಾರ</u>**



ದ್ವಿತೆರಿಗೆ (ಎರಡೂ ಕಡೆ ತೆರಿಗೆ ಪಾವತಿ(DTAA))ಯನ್ನು ತಪ್ಪಿಸಲು ಭಾರತ-ಖಜಕಿಸ್ತಾನ ಒಡಂಬಡಿಕೆಯ ತಿದ್ದುಪಡಿ ಮಾಡಲು ನಿರ್ಧರಿಸಿವೆ. ಭಾರತ-ಖಜಕಿಸ್ತಾನ, (ಡಬಲ್ ಟ್ಯಾಕ್ಸೇಶನ್ ಅವಾಯ್ಡೆನ್ಸ್ ಕನ್ವೆನ್ಷನ್-ಡಿಟಿಎಸಿ) ಗೆ ತಿದ್ದುಪಡಿ ತರುವುದಕ್ಕೆ ಒಪ್ಪಿಗೆ ಸೂಚಿಸಿದ್ದು, ಒಪ್ಪಂದದ ತಿದ್ದುಪಡಿಯಿಂದ ತೆರಿಗೆ ಮಾಹಿತಿಯನ್ನು ಪರಿಣಾಮಕಾರಿಯಾಗಿ ಹಂಚಿಕೊಳ್ಳಬಹುದಾಗಿದೆ ಎಂದು ಹಣಕಾಸು ಸಚಿವಾಲಯ ಹೇಳಿಕೆ ಬಿಡುಗಡೆ ಮಾಡಿದೆ. ಪರಸ್ಪರ ತೆರಿಗೆ ವಿಷಯಕ್ಕೆ ಸಂಬಂಧಿಸಿದಂತೆ ಮಾಹಿತಿ ಹಂಚಿಕೊಳ್ಳಲು ಭಾರತ-ಖಜಕಿಸ್ತಾನ 1996ರ ಡಿ.9 ರಂದು ಡಿಟಿಎಸಿಗೆ ಸಹಿ ಹಾಕಿದ್ದವು.

**ಪ್ರಮುಖಾಂಶಗಳು**:

- ಅಂತಾರಾಷ್ಟ್ರೀಯ ಅಂಗೀಕೃತ ಮಾನದಂಡಗಳಲ್ಲಿ ತೆರಿಗೆ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಪರಿಣಾಮಕಾರಿಯಾಗಿ ವಿನಿಮಯ ಮಾಡಿಕೊಳ್ಳಲು ಒಪ್ಪಂದದಡಿ ಅವಕಾಶವನ್ನು ದೊರೆಯಲಿದೆ.
- ದ್ವಿತೆರಿಗೆ ಒಪ್ಪಂದವನ್ನು ದುರ್ಬಳಕೆ ಮಾಡಿಕೊಳ್ಳುವುದನ್ನು ತಪ್ಪಿಸುವುದು ಹಾಗೂ ತೆರಿಗೆ ಪಾವತಿಯನ್ನು ತಪ್ಪಿಸಿಕೊಳ್ಳುವುದನ್ನು ತಡೆಯಲು ಒಪ್ಪಂದದಡಿ "ಲಿಮಿಟೇಶನ್ ಆಫ್ ಬೆನಿಫಿಟ್ ಆಫ್ ಆರ್ಟಿಕಲ್" ಅನ್ನು ಸೇರಿಸಲಾಗಿದೆ.
- ಇದೊಂದು ತೆರಿಗೆದಾರ ಸ್ನೇಹಿ ಒಪ್ಪಂದವಾಗಿದ್ದು, ದೇಶದ ಬೇಸ್ ಎರೋಶನ್ ಅಂಡ್ ಪ್ರಾಫಿಟ್ ಶಿಫ್ಟಿಂಗ್ ಯೋಜನೆಯ ಮಾದರಿಯಲ್ಲಿ ರೂಪಿಸಲಾಗಿದೆ.

**<u>ಬಾಬರ್-III ಕ್ಷಿಪಣಿ ಯಶಸ್ವಿಯಾಗಿ ಪರೀಕ್ಷೆ ನಡೆಸಿದ ಪಾಕಿಸ್ತಾನ</u>**




ಪಾಕಿಸ್ತಾನ ಇದೇ ಮೊದಲ ಬಾರಿಗೆ ಜಲಂತರ್ಗಾಮಿಯಿಂದ ಬಾಬರ್-III ಕ್ಷಿಪಣಿಯನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ. ಈ ಪ್ರಯೋಗದಿಂದ ಪಾಕಿಸ್ತಾನಕ್ಕೆ ಅತಿ ಅಗತ್ಯವಾಗಿ ಬೇಕಿದ್ದ ಕ್ಷಿಪಣಿ ಶಕ್ತಿ ದೊರೆತಾಂಗಿದೆ ಎಂದು ಹೇಳಲಾಗಿದೆ. ಬಾಬರ್-III ಕ್ಷಿಪಣಿಯನ್ನು ಹಿಂದೂ ಮಹಾಸಾಗರದಲ್ಲಿ ಗೌಪ್ಯ ಸ್ಥಳದಿಂದ ಉಡಾವಣೆ ಮಾಡಲಾಗಿದೆ.

**ಪ್ರಮುಖಾಂಶಗಳು**:

- ಬಾಬರ್-3 ಕ್ಷಿಪಣಿ ಬಾಬರ್-2 ರ ಮುಂದುವರಿದ ಭಾಗವಾಗಿದ್ದು, ಸಮುದ್ರ, ಭೂಮಿ ಮತ್ತು ಆಗಸದಿಂದ ಎದುರಾಗುವ ಪರಮಾಣು ದಾಳಿ ಎದುರಿಸುವ ಸಾಮರ್ಥ್ಯ ಹೊಂದಿದೆ. ಈ ಕ್ಷಿಪಣಿಗೆ ಮೊಘಲ್ ಸಾಮ್ರಾಜ್ಯದ ಮೊದಲ ದೊರೆ "ಝುಯೀರ್-ಉದ್-ದಿನ್-ಬಾಬರ್" ಹೆಸರನ್ನು ಇಡಲಾಗಿದೆ.
- ವರದಿಯ ಪ್ರಕಾರ ಅಣ್ವಸ್ತ್ರ ಸಿಡಿತಲೆ ಹೊತ್ತೊಯ್ಯುವ ಸಾಮರ್ಥ್ಯವಿರುವ ಕ್ರೂಸ್ ಕ್ಷಿಪಣಿ (ಎಸ್‌ಎಲ್ ಸಿಎಂ) ಬಾಬರ್-3 450 ಕಿಮೀ ಸಾಗುವ ಸಾಮರ್ಥ್ಯ ಹೊಂದಿದೆ.
- ಭೂಮಿಯ ಮೂಲಕ ಎದುರಾಗುವ ಪರಮಾಣು ದಾಳಿಯನ್ನು ಎದುರಿಸುವ ಸಾಮರ್ಥ್ಯಹೊಂದಿರುವ ಬಾಬರ್-2 ಕ್ಷಿಪಣಿಯನ್ನು ಕಳೆದ ವರ್ಷ ಪಾಕಿಸ್ತಾನ ಯಶಸ್ವಿಯಾಗಿ ಉಡಾವಣೆ ಮಾಡಿತ್ತು.
- ಈ ಮೂಲಕ ಸಮುದ್ರ, ಭೂಮಿ ಮತ್ತು ಆಗಸದಿಂದ ಎದುರಾಗುವ ಪರಮಾಣು ದಾಳಿ ಎದುರಿಸುವ ಸಾಮರ್ಥ್ಯವನ್ನು ಹೊಂದಿರುವ ರಾಷ್ಟ್ರಗಳ ಪಟ್ಟಿಗೆ ಪಾಕಿಸ್ತಾನವು ಸೇರ್ಪಡೆಯಾಗಿದೆ.

**ಮಳೆ ನೀರು ಕೊಯ್ಲು ವ್ಯವಸ್ಥೆ ಅಳವಡಿಸಲು ಭಾರತ ಮತ್ತು ಶ್ರೀಲಂಕಾ ಒಪ್ಪಂದ**



ಶ್ರೀಲಂಕಾದ ರಿನ್ ಜಫ್ನಾ ಜಿಲ್ಲೆಯಲ್ಲಿ ಮೂರು ಸಾವಿರ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಲು ಶ್ರೀಲಂಕಾ ಸರ್ಕಾರದೊಂದಿಗೆ ಭಾರತ ಒಡಂಬಡಿಕೆ ಒಪ್ಪಂದಕ್ಕೆ ಸಹಿಹಾಕಿದೆ. ಈ ಯೋಜನೆಯ ಮೊತ್ತ 300 ಮಿಲಿಯನ್ ರೂಪಾಯಿ (ಶ್ರೀಲಂಕಾ). ಇದರಡಿ ರಿನ್ ಜಾಫ್ನಾ ಜಿಲ್ಲೆಯ ಆಯ್ದಾ ವಿಭಾಗದಲ್ಲಿ 3000 ಕುಟುಂಬಗಳಿಗೆ 3000 ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಅಳವಡಿಸಲಾಗುವುದು.

**ಪ್ರಮುಖಾಂಶಗಳು:**

- ಯೋಜನೆಯಡಿ ರಿನ್ ಜಾಫ್ನಾ ಜಿಲ್ಲೆಯಲ್ಲಿ ಸುಧಾರಿತ ಮಳೆ ನೀರು ಕೊಯ್ಲು ವ್ಯವಸ್ಥೆಯನ್ನು ಒದಗಿಸಿ ಆಂತರಿಕವಾಗಿ ಸ್ಥಳಾಂತರಿಸಲ್ಪಟ್ಟ ಕುಟುಂಬಗಳ ಪುನರ್ ವಸತಿ ಪ್ರಯತ್ನಕ್ಕೆ ಶ್ರಮಿಸಲಾಗುವುದು.
- ಒಪ್ಪಂದದಡಿ ಮಳೆ ನೀರು ಕೊಯ್ಲು ವ್ಯವಸ್ಥೆಗಳ ಕಾರ್ಯಾಚರಣೆ ಹಾಗೂ ನಿರ್ವಹಣೆ ಬಗ್ಗೆ ಕುಟುಂಬಗಳಿಗೆ ತರಬೇತಿ ನೀಡಲಾಗುವುದು. ಇದರಿಂದ ಶ್ರೀಲಂಕಾದಲ್ಲಿ ಉದ್ಯೋಗವಕಾಶಗಳು ಸೃಷ್ಟಿಯಾಗಲಿವೆ.
- ಯೋಜನೆಯ ಫಲಾನುಭವಿಗಳನ್ನು ಭಾರತ ಸರ್ಕಾರದೊಂದಿಗೆ ಸಮಾಲೋಚಿಸಿ ಶ್ರೀಲಂಕಾ ಸರ್ಕಾರ ಗುರುತಿಸಲಿದೆ. ಮಹಿಳಾ ನೇತೃತ್ವದ ಕುಟುಂಬಗಳು ಹಾಗೂ ಇತ್ತೀಚೆಗೆ ಪುನರ್ ವಸತಿ ಕಲ್ಪಿಸಲಾದ ಕುಟುಂಬಗಳಿಗೆ ಮೊದಲ ಆದ್ಯತೆಯನ್ನು ನೀಡಲಾಗುವುದು.
- ಶ್ರೀಲಂಕಾ ಸರ್ಕಾರದ ಕೋರಿಕೆ ಮೇರೆಗೆ ಭಾರತ ಈ ಯೋಜನೆಯನ್ನು ಕೈಗೆತ್ತಿಕೊಂಡಿದೆ.

## <u>ಭಾರತ ಮತ್ತು ಪೋರ್ಚುಗಲ್ ಮಧ್ಯೆ ಆರು ಒಪ್ಪಂದಕ್ಕೆ ಸಹಿ</u>



ಭಾರತ ಮತ್ತು ಪೋರ್ಚುಗಲ್ ಆರು ಪ್ರಮುಖ ಒಪ್ಪಂದಗಳಿಗೆ ಸಹಿ ಮಾಡಿವೆ. ಪ್ರಧಾನಿ ನರೇಂದ್ರ ಮೋದಿ ಮತ್ತು ಪೋರ್ಚುಗಲ್ ಪ್ರಧಾನಿ ಆಂಟೋನಿಯೊ ಕೋಸ್ಟ ಅವರ ನಡುವೆ ನಡೆದ ದ್ವಿಪಕ್ಷೀಯ ಮಾತುಕತೆಯ ನಂತರ ಈ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ಸಹಿ ಹಾಕಲಾದ ಒಪ್ಪಂದಗಳು:

- ರಕ್ಷಣಾ ಸಹಕಾರ ಕುರಿತಾಗಿ ಉಭಯ ದೇಶಗಳ ನಡುವೆ ಒಪ್ಪಂದಕ್ಕೆ ಸಹಿಹಾಕಲಾಗಿದೆ.
- ಸಹಕಾರ, ವಾಣಿಜ್ಯ, ಬಂಡವಾಳ ಹೂಡಿಕೆ, ವ್ಯಾವಹಾರಿಕ ಸಹಭಾಗಿತ್ವ, ಮಾಹಿತಿ ತಂತ್ರಜ್ಞಾನ ಮತ್ತು ನವೀಕರಿಸಬಹುದಾದ ಶಕ್ತಿ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರಕ್ಕಾಗಿ ಎರಡೂ ದೇಶಗಳು ಒಪ್ಪಂದಕ್ಕೆ ಸಹಿ ಮಾಡಿವೆ. ಭಯೋತ್ಪಾದನೆ ನಿಗ್ರಹ, ಮಸೂದ್ ಅಜರ್‌ನನ್ನು ಉಗ್ರರ ಪಟ್ಟಿಗೆ ಸೇರಿಸುವಲ್ಲಿ ಚೀನಾ

ಅಡ್ಡಗಾಲು ಹಾಕುತ್ತಿರುವ ಬಗ್ಗೆ ಮಾತುಕತೆ ವೇಳೆ ಚರ್ಚಿಸಲಾಗಿದೆ ಎಂದು ಅವರು ತಿಳಿಸಿದರು. 'ಭಯೋತ್ಪಾದನೆಯನ್ನು ನಿಗ್ರಹಿಸಲು ಜಾಗತಿಕ ಸಮುದಾಯವು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ '1267 ಸಮಿತಿ'ಯ ನಿಯಮಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು' ಎಂದು ಮೋದಿ ಮತ್ತು ಕೋಸ್ಟಾ ಅವರು ಹೊರಡಿಸಿದ ಜಂಟಿ ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

'ಭಾರತವು ಕ್ಷಿಪಣಿ ತಂತ್ರಜ್ಞಾನ ನಿಯಂತ್ರಣ ವ್ಯವಸ್ಥೆಗೆ ಸೇರಲು ಬೆಂಬಲ ನೀಡಿದ್ದಕ್ಕಾಗಿ ಹಾಗೂ ಭಾರತ ಪರಮಾಣು ಪೂರೈಕೆದಾರರ ಗುಂಪನ್ನು ಸೇರಲು ಬೆಂಬಲ ನೀಡುತ್ತಿರುವುದಕ್ಕಾಗಿ ಪೋರ್ಚುಗಲ್ಗೆ ಧನ್ಯವಾದಗಳು' ಎಂದು ಪ್ರಧಾನಿ ಮೋದಿ ಹೇಳಿದರು.

## ಚೀನಾದಿಂದ ಪಾಕಿಸ್ತಾನಕ್ಕೆ ಎರಡು ಗಸ್ತು ನೌಕೆಗಳ ಹಸ್ತಾಂತರ



ಮಹತ್ವಕಾಂಕ್ಷಿ ಚೀನಾ-ಪಾಕಿಸ್ತಾನ ಎಕಾನಮಿಕ್ ಕಾರಿಡಾರ್ ಮಾರ್ಗದಲ್ಲಿ ಗಸ್ತು ಕಾಯಲು ಮತ್ತು ಪಾಕಿಸ್ತಾನದ ಗ್ವದಾರ್ ಬಂದರಿಗೆ ಭದ್ರತೆ ಒದಗಿಸಲು ಚೀನಾ ಎರಡು ನೌಕೆಗಳನ್ನು ಪಾಕಿಸ್ತಾನಕ್ಕೆ ಹಸ್ತಾಂತರಿಸಿದೆ. ಈ ಎರಡು ನೌಕೆಗಳಿಗೆ ಗ್ವದಾರ್ ಬಂದರಿನ ಬಳಿ ಇರುವ ಎರಡು ನದಿಗಳಾದ ಹಿಂಗೋಲ್ ಮತ್ತು ಬಾಸೋಲ್ ಹೆಸರನ್ನು ಇಡಲಾಗಿದೆ. ಈ ನೌಕೆಗಳು ಪಾಕಿಸ್ತಾನದ ನೌಕಪಡೆಯ ಭಾಗವಾಗಿ ಕಾರ್ಯನಿರ್ವಹಿಸಲಿದ್ದು, ಅತ್ಯಾಧುನಿಕ ತಂತ್ರಜ್ಞಾನದ ಗನ್ ಗಳನ್ನು ಅಳವಡಿಸಲಾಗಿದೆ. ಇದಲ್ಲದೇ ಇನ್ನೆರಡು ನೌಕೆಗಳನ್ನು ಚೀನಾ ಪಾಕಿಸ್ತಾನಕ್ಕೆ ಹಸ್ತಾಂತರಿಸಲಿದೆ. ಬಲೋಚಿಸ್ತಾನದ ಎರಡು ಜಿಲ್ಲೆಗಳ ಹೆಸರಾದ Zhob ಮತ್ತು Dasht ಎಂದು ಹೆಸರಿಡಲಾಗಿದೆ.

**ಹಿನ್ನಲೆ**:

ಇತ್ತೀಚೆಗೆ ಚೀನಾ ದೇಶ ಪಾಕಿಸ್ತಾನಕ್ಕೆ ಚೀನಾ-ಪಾಕಿಸ್ತಾನ ಎಕಾನಮಿಕ್ ಕಾರಿಡಾರ್ ಮಾರ್ಗದಲ್ಲಿ ಸೂಕ್ತ ಭದ್ರತೆ ಒದಗಿಸಲು ಸಕ್ರಿಯವಾಗಿ ತನ್ನ ಸಹಕಾರ ಮತ್ತು ಸಹಾಯ ನೀಡಲು ಮುಂಚೂಣಿಯಲ್ಲಿದೆ. ಗ್ವದಾರ್ ಬಂದರು ಮತ್ತು ಸಿಪಿಇಸಿ ಉದ್ದಗಲ ಭದ್ರತೆ ಒದಗಿಸಲು ಈಗಾಗಲೇ ಪಾಕಿಸ್ತಾನ ಪ್ರತ್ಯೇಕ ಸೇನಾ ವಿಭಾಗವನ್ನು ತೆರೆದಿದೆ. ಗ್ವದಾರ್ ನಗರಕ್ಕೆ ರಕ್ಷಣೆಯನ್ನು ಸಹ ಈ ಸೇನಾ ವಿಭಾಗವೇ ನೋಡಿಕೊಳ್ಳಲಿದೆ.

**ಗ್ವದಾರ್ ಬಂದರು**:

ಗ್ವದಾರ್ ಬಂದರು ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ರದಲ್ಲಿದೆ. ಈ ಬಂದರನ್ನು ಸಿಪಿಇಸಿಯಡಿ ಅಭಿವೃದ್ಧಿಪಡಿಸಲಾಗುತ್ತಿದ್ದು, ಪಶ್ಚಿಮ ಚೀನಾವನ್ನು ಪಾಕಿಸ್ತಾನ ಮೂಲಕ ಮಧ್ಯ ಪ್ರಾಚ್ಯ, ಆಫ್ರಿಕಾ ಮತ್ತು ಯುರೋಪ್ ನೊಂದಿಗೆ ಸಂಪರ್ಕ ಕಲ್ಪಿಸಲಿದೆ. 2016 ನವೆಂಬರ್ ನಲ್ಲಿ ಈ ಬಂದರು ಅಧಿಕೃತವಾಗಿ ಕಾರ್ಯರಂಭ ಮಾಡಿತು.

## ಅಂತಾರಾಷ್ಟ್ರೀಯ ಲಸಿಕೆ ಸಂಸ್ಥೆಯಲ್ಲಿ ಭಾರತದ ಸದಸ್ಯತ್ವಕ್ಕೆ ಕೇಂದ್ರ ಸರ್ಕಾರ ಒಪ್ಪಿಗೆ



ಅಂತಾರಾಷ್ಟ್ರೀಯ ಲಸಿಕೆ ಸಂಸ್ಥೆ(International Vaccine Institute)ಯ ಆಡಳಿತ ಮಂಡಳಿಯಲ್ಲಿ ಪೂರ್ಣ ಸದಸ್ಯತ್ವ ಪಡೆದುಕೊಳ್ಳುವ ಭಾರತದ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಈ ನಿರ್ಣಯದ ಮೂಲಕ ಭಾರತ ಪ್ರತಿ ವರ್ಷ 50,000 ಅಮೆರಿಕನ್ ಡಾಲರ್ ಅನ್ನು ಸಂಸ್ಥೆಗೆ ದೇಣಿಗೆಯಾಗಿ ನೀಡಲಿದೆ. ಅಂತಾರಾಷ್ಟ್ರೀಯ ಲಸಿಕೆ ಸಂಸ್ಥೆಯ ಕೇಂದ್ರ ಕಚೇರಿ ಸಿಯೊಲ್, ದಕ್ಷಿಣ ಕೊರಿಯಾದಲ್ಲಿದೆ.

**ಹಿನ್ನಲೆ**:

ಕೇಂದ್ರ ಸಚಿವ ಸಂಪುಟದ ಅನುಮೋದನೆಯ ಮೇರೆಗೆ ಭಾರತ 2007ರಲ್ಲಿ ಐವಿಐಗೆ ಸೇರ್ಪಡೆಗೊಂಡಿತು. ಅಂದಿನಿಂದ ಭಾರತ ಐವಿಐನ ಪ್ರಮುಖ ಪಾಲುದಾರಿಕೆ ದೇಶವಾಗಿದೆ. 2012 ರಲ್ಲಿ ಐವಿಐನ "ಬೋರ್ಡ್ ಆಫ್ ಟ್ರಸ್ಟಿ" ಹೊಸ ಆಡಳಿತ ಮಂಡಳಿ ರಚನೆಗೆ ಅಂಗೀಕರಿಸಿತ್ತು. ಹೊಸ ಆಡಳಿತ ಮಂಡಳಿಯ ನಿಯಮದಂತೆ ಸದಸ್ಯ ರಾಷ್ಟ್ರವು ಸಂಸ್ಥೆಯ ವಾರ್ಷಿಕ ಬಜೆಟ್ ಸ್ವಲ್ಪ ಭಾಗವನ್ನು ಭರಿಸಬೇಕು. ಅದರಂತೆ ಭಾರತ ಗ್ರೂಪ್-1 ಸದಸ್ಯ ರಾಷ್ಟ್ರವಾಗಿರುವ ಕಾರಣ ವಾರ್ಷಿಕ 50,000 ಅಮೆರಿಕನ್ ಡಾಲರ್ ಅನ್ನು ನೀಡಬೇಕಿದೆ.

**ಅಂತಾರಾಷ್ಟ್ರೀಯ ಲಸಿಕೆ ಸಂಸ್ಥೆ:**

- ಅಂತಾರಾಷ್ಟ್ರೀಯ ಲಸಿಕೆ ಸಂಸ್ಥೆ ಒಂದು ಅಂತಾರಾಷ್ಟ್ರೀಯ ಲಾಭದಾಯಕವಲ್ಲದ ಸಂಸ್ಥೆಯಾಗಿದ್ದು, ಹೊಸ ಹಾಗೂ ಸುಧಾರಿತ ಲಸಿಕೆಗಳನ್ನು ಸಂಶೋಧಿಸುವ ಮೂಲಕ ಜನರನ್ನು ರಕ್ಷಿಸುವುದು ಅದರಲ್ಲೂ ಮಕ್ಕಳನ್ನು ಮಾರಕ ರೋಗಗಳಿಂದ ರಕ್ಷಿಸುವುದು ಇದರ ಉದ್ದೇಶ.
- ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ 1997ರಲ್ಲಿ ಐವಿಐ ಅನ್ನು ಸ್ಥಾಪಿಸಲಾಗಿದೆ.
- ಪ್ರಸ್ತುತ ಅಂತಾರಾಷ್ಟ್ರೀಯ ಲಸಿಕೆ ಸಂಸ್ಥೆ 40 ಸದಸ್ಯ ರಾಷ್ಟ್ರಗಳನ್ನು ಒಳಗೊಂಡಿದೆ.

**"ಒಟ್ಟಾರೆ ಅಭಿವೃದ್ಧಿ ಸೂಚ್ಯಂಕ (Inclusive Development Index)"ದಲ್ಲಿ ಭಾರತಕ್ಕೆ 60ನೇ ಸ್ಥಾನ**




ವಿಶ್ವ ಆರ್ಥಿಕ ವೇದಿಕೆ ಬಿಡುಗಡೆಗೊಳಿಸಿರುವ ಒಟ್ಟಾರೆ ಬೆಳವಣಿಗೆ ಮತ್ತು ಅಭಿವೃದ್ಧಿ ವರದಿಯಲ್ಲಿ 2017 ಒಟ್ಟಾರೆ ಅಭಿವೃದ್ಧಿ ಸೂಚ್ಯಂಕದಲ್ಲಿ 79 ರಾಷ್ಟ್ರಗಳ ಪೈಕಿ ಭಾರತ 60ನೇ ಸ್ಥಾನವನ್ನು ಪಡೆದುಕೊಂಡಿದೆ. ಸೂಚ್ಯಂಕವನ್ನು ಒಟ್ಟು 12 ಸಾಧಕ ಮಾನದಂಡಗಳನ್ನು ಆಧರಿಸಿ ಬಿಡುಗಡೆಗೊಳಿಸಲಾಗಿದ್ದು, 1 ರಿಂದ 7 ಅಂಕಗಳ ಮಾಪವನ್ನು ಆಧರಸಿ ಸೂಚ್ಯಂಕದಲ್ಲಿ ದೇಶಗಳಿಗೆ ಶ್ರೇಯಾಂಕವನ್ನು ನೀಡಲಾಗಿದೆ.

**ವರದಿಯ ಪ್ರಮುಖಾಂಶಗಳು:**

- **2017 ಟಾಪ್ ಹತ್ತು ಅಭಿವೃದ್ದಿ ಹೊಂದುತ್ತಿರುವ ರಾಷ್ಟ್ರಗಳು:** ಲಿಥುಯಾನಿಯ (1), ಅಜರ್ಬೈಜನ್ (2), ಹಂಗೇರಿ (3), ಪೋಲ್ಯಾಂಡ್ (4), ರೊಮಾನಿಯ (5), ಉರುಗ್ವೆ (6), ಲಾಟ್ವಿಯ (7), ಪನಮಾ (8), ಕೊಸ್ಟ ರಿಕ (9) ಮತ್ತು ಚಿಲಿ (10).
- **2017 ಟಾಪ್ ಹತ್ತು ಸುಧಾರಿತ ಆರ್ಥಿಕತೆ ರಾಷ್ಟ್ರಗಳು:** ನಾರ್ವೆ (1), ಲಕ್ಸಂಬರ್ಗ್ (2), ಸ್ವಿಟ್ಜರ್ಲ್ಯಾಂಡ್ (3), ಐಸ್ ಲ್ಯಾಂಡ್ (4), ಡೆನ್ಮಾರ್ಕ್ (5), ಫ್ರಾನ್ಸ್ (6), ನೆದರ್ಲ್ಯಾಂಡ್ (7), ಆಸ್ಟ್ರೇಲಿಯಾ (8), ನ್ಯೂಜಿಲ್ಯಾಂಡ್ (9) ಮತ್ತು ಆಸ್ಟ್ರೀಯಾ (10).
- **ಬ್ರಿಕ್ಸ್ ರಾಷ್ಟ್ರಗಳು:** ರಷ್ಯಾ (13), ಚೀನಾ (30) ಮತ್ತು ಬ್ರೆಜಿಲ್ (30).
- **ಭಾರತದ ನೆರೆಹೊರೆ ರಾಷ್ಟ್ರಗಳು:** ಭಾರತದ ನೆರೆಹೊರೆ ರಾಷ್ಟ್ರಗಳ ಪೈಕಿ ಚೀನಾ (15), ನೇಪಾಳ (27), ಬಾಂಗ್ಲದೇಶ (36) ಮತ್ತು ಪಾಕಿಸ್ತಾನ (52) ಸ್ಥಾನದಲ್ಲಿವೆ.
- ಸೂಚ್ಯಂಕದಲ್ಲಿ ಭಾರತ 3.38 ಅಂಕಗಳನ್ನು ಪಡೆದುಕೊಂಡಿದೆ. ಆ ಮೂಲಕ 79 ಅಭಿವೃದ್ದಿ ಹೊಂದುತ್ತಿರುವ ರಾಷ್ಟ್ರಗಳ ಪೈಕಿ ಕಳಪೆ ಸಾಧನೆ ಮಾಡಿದೆ. ಆದರೆ ವ್ಯವಹಾರ ಅಭಿವೃದ್ಧಿಗೆ ಹಣಕಾಸಿನ ನೆರವು ಮತ್ತು ನೈತಿಕ ಆರ್ಥಿಕ ಬಂಡವಾಳದಲ್ಲಿ ಉತ್ತಮ ಸಾಧನೆ ಮಾಡಿದೆ.

## ವಿಶ್ವದ ಕ್ರಿಯಾಶೀಲ ನಗರಗಳ ಪಟ್ಟಿಯಲ್ಲಿ ಬೆಂಗಳೂರಿಗೆ ಮೊದಲ ಸ್ಥಾನ



ವಿಶ್ವದ ಕ್ರಿಯಾಶೀಲ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಅಗ್ರಸ್ಥಾನ ಪಡೆದಿದೆ. ಜಿಎಲ್‌ಎಲ್ ಗ್ಲೋಬಲ್ ರಿಸರ್ಚ್ ಕಂಪನಿ ನಡೆಸಿದ ಸಮೀಕ್ಷೆಯ ಆಧಾರದಲ್ಲಿ ಈ ಪಟ್ಟಿಯನ್ನು ತಯಾರಿಸಲಾಗಿದೆ. ಶಿಕ್ಷಣ, ಮೂಲಸೌಕರ್ಯ, ಅಗಾಧವಾಗಿ ಬೆಳೆಯುತ್ತಿರುವ ಜನಸಂಖ್ಯೆಗೆ ಹೊಂದಿಕೊಳ್ಳುವುದು ಸೇರಿದಂತೆ ದೇಶದ ಪ್ರಗತಿಗೆ ತಮ್ಮ ಕಾಣಿಕೆಯನ್ನೂ ನೀಡುತ್ತಿರುವ ವಿಚಾರಗಳನ್ನಾಧರಿಸಿ ಜಗತ್ತಿನ ಮೂವತ್ತು ನಗರಗಳನ್ನು ಗುರುತಿಸಲಾಗಿದೆ. ಭಾರತದ ನಗರಗಳು ಸೇರಿದಂತೆ ಚೀನಾ, ವಿಯೆಟ್ನಾಂ ಮತ್ತು ಅಮೆರಿಕದ ಹಲವು ನಗರಗಳು ಈ ಪಟ್ಟಿಯಲ್ಲಿ ಸ್ಥಾನ ಪಡೆದುಕೊಂಡಿವೆ. ಪ್ರಸ್ತುತ ಪಟ್ಟಿಯಲ್ಲಿ ಬೆಂಗಳೂರು ಅಗ್ರ ಸ್ಥಾನ ಪಡೆದಿದ್ದು, ಭಾರತದ ಇತರ ನಗರಗಳಾದ ಹೈದರಾಬಾದ್ ( 5ನೇ ಸ್ಥಾನ), ಪುಣೆ (13), ಚೆನ್ನೈ(18) ದೆಹಲಿ (23) ಮತ್ತು ಮುಂಬೈ 25 ನೇ ಸ್ಥಾನದಲ್ಲಿದೆ.

- **ಪಟ್ಟಿಯಲ್ಲಿ ಟಾಪ್ 10 ಸ್ಥಾನದಲ್ಲಿರುವ ನಗರಗಳು:**
- ಬೆಂಗಳೂರು, ಹೋ ಚಿ ಮಿನಾ ಸಿಟಿ, ಸಿಲಿಕಾನ್ ವ್ಯಾಲಿ, ಶಾಂಘೈ, ಹೈದ್ರಾಬಾದ್, ಲಂಡನ್, ಆಸ್ಟಿನ್, ಹನೋಯಿ, ಬೋಸ್ಟನ್, ನೈರೋಬಿ

## ಭಾರತದ ರಷ್ಯಾ ರಾಯಭಾರಿ ಅಲೆಕ್ಸಾಂಡರ್ ಕಡಕಿನ್ ನಿಧನ



ಭಾರತದ ರಷ್ಯಾ ರಾಯಭಾರಿ ಅಲೆಕ್ಸಾಂಡರ್ ಕಡಕಿನ್ ಅವರು ಗುರುವಾರ ತೀವ್ರ ಹೃದಯಾಘಾತಕ್ಕೊಳಗಾಗಿ ನಿಧನರಾಗಿದ್ದಾರೆ ಎಂದು ತಿಳಿದುಬಂದಿದೆ.

67 ವರ್ಷದ ಅಲೆಕ್ಸಾಂಡರ್ ಕಡಕಿನ್ ಅವರು ಇಂದು ಬೆಳಗ್ಗೆ ಬರವಣಿಗೆಯಲ್ಲಿ ತೊಡಗಿದ್ದಾಗಲೇ ಅವರಿಗೆ ಹೃದಯಾಘಾತವಾಗಿದೆ ಎಂದು ತಿಳಿದುಬಂದಿದೆ. ಪ್ರಸ್ತುತ ಅವರ ಸಾವಿನ ಕುರಿತಂತೆ ಅವರ ಕಚೇರಿ ಮೂಲಗಳು ಯಾವುದೇ ಮಾಹಿತಿ ನೀಡಿಲ್ಲ. ಈ ಹಿಂದೆಯೂ ಕೂಡ ಕಡಕಿನ್ ಅವರು ಸಾಕಷ್ಟು ಬಾರಿ ಹೃದಯ ಸಂಬಂಧಿ ಸಮಸ್ಯೆಗಳಿಂದಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಎಂದು ತಿಳಿದುಬಂದಿದೆ. ಹೆಚ್ಚಿನ ಮಾಹಿತಿಗಾಗಿ ನಿರೀಕ್ಷಿಸಲಾಗುತ್ತಿದೆ.

ಈ ಹಿಂದೆ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಭಾರತೀಯ ಪಡೆಗಳು ಸರ್ಜಿಕಲ್ ಸ್ಟ್ರೈಕ್ ನಡೆಸಿದಾಗ ಅದನ್ನು ರಷ್ಯಾ ಪರವಾಗಿ ಸಮರ್ಥಿಸಿಕೊಂಡಿದ್ದ ಕಡಕಿನ್ ಅವರು, ಯಾವುದೇ ದೇಶಕ್ಕೆ ತನ್ನ ಬಾಹ್ಯ ಬೆದರಿಕೆಗಳನ್ನು ನಿರ್ವಹಿಸುವ ಅಥವಾ ನಿಗ್ರಹಿಸುವ ಹಕ್ಕಿದೆ ಎಂದು ಹೇಳಿದ್ದರು. ಅಂತೆಯೇ ಭಾರತದಲ್ಲಿ ನಡೆಯುತ್ತಿರುವ ಬಹುತೇಕ ಉಗ್ರ ದಾಳಿಗಳಿಗೆ ಪಾಕಿಸ್ತಾನ ಮೂಲದ ಉಗ್ರರೇ ಕಾರಣ ಎಂದು ಹೇಳಿದ್ದರು. ಅಂತೆಯೇ ಈ ಹಿಂದೆ ರಷ್ಯಾ ದೇಶ ಪಾಕಿಸ್ತಾನ ಸೇನೆಯೊಂದಿಗೆ ಸಮರಾಭ್ಯಾಸ ನಡೆಸಿದ್ದಾಗ ಭಾರತ ತನ್ನ ಅಸಮಾಧಾನ ವ್ಯಕ್ತಪಡಿಸಿತ್ತು. ಆಗ ಭಾರತವನ್ನು ತಮ್ಮದೇ ಆದ ವಿಶಿಷ್ಠ ರೀತಿಯಲ್ಲಿಯಲ್ಲಿ ಸಮಾಧಾನ ಪಡಿಸಿದ್ದ ಕಡಕಿನ್ ಅವರು, ರಷ್ಯಾ ಮತ್ತು ಪಾಕಿಸ್ತಾನ ಜಂಟಿ

## ಟ್ರಾನ್ಸ್-ಫೆಸಿಫಿಕ್ ಪಾರ್ಟನರ್ ಶಿಪ್ ನಿಂದ ಹೊರ ನಡೆದ ಅಮೆರಿಕ



ಅಮೆರಿಕ ಅಧ್ಯಕ್ಷ ಡೋನಾಲ್ಡ್ ಟ್ರಂಪ್ ಅವರು ಮಹತ್ವಕಾಂಕ್ಷಿ "ಟ್ರಾನ್ಸ್-ಫೆಸಿಫಿಕ್ ಪಾರ್ಟನರ್ ಶಿಪ್ (Trans-Pacific Partnership)" ಮಾತುಕತೆಯಿಂದ ಅಮೆರಿಕ ಹಿಂದೆ ಸರಿಯುವುದಾಗಿ ಘೋಷಿಸಿದ್ದಾರೆ. ಈ ಬಗ್ಗೆ ಅಧಿಕೃತ ಘೋಷಣೆಯನ್ನು ಸಹ ಹೊರಡಿಸಲಾಗಿದೆ. ಟ್ರಾನ್ಸ್-ಫೆಸಿಫಿಕ್ ಪಾರ್ಟನರ್ ಶಿಪ್ 12 ಫೆಸಿಫಿಕ್ ರಿಮ್ ರಾಷ್ಟ್ರಗಳ ನಡುವಿನ

ಮಹತ್ವಕಾಂಕ್ಷಿ ವ್ಯಾಪಾರ ಒಪ್ಪಂದವಾಗಿದೆ. ಟಿಪಿಪಿ ಅಮೆರಿಕದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದ ಬರಾಕ್ ಒಬಾಮ ರವರ ಆಡಳಿತದಲ್ಲಿ ಕೈಗೊಳ್ಳಲಾದ ಪ್ರಮುಖ ನಿರ್ಧಾರವಾಗಿದ್ದು, ವೇಗವಾಗಿ ಬೆಳೆಯುತ್ತಿರುವ ಚೀನಾ ಆರ್ಥಿಕತೆಯನ್ನು ಹತ್ತಿಕ್ಕಲು ಅಮೆರಿಕಾ ವಿಶ್ವದ ಇತರೆ ರಾಷ್ಟ್ರಗಳೊಂದಿಗೆ ಕೈಜೋಡಿಸುವ ನಿರ್ಣಯವಾಗಿದೆ. ಅಮೆರಿಕದ ಅಧ್ಯಕ್ಷೀಯ ಚುನಾವಣ ಪ್ರಚಾರ ವೇಳೆ ಡೋನಾಲ್ಡ್ ಟ್ರಂಪ್ ಅವರು ಟಿಪಿಪಿಗೆ ಅಮೆರಿಕ ನೀಡಿರುವ ಬೆಂಬಲವನ್ನು ಹಿಂಪಡೆಯುವುದಾಗಿ ಹೇಳಿದ್ದರು. ಈ ಒಪ್ಪಂದಿಂದ ದೇಶದ ಉದ್ಯೋಗ ಮತ್ತು ಉತ್ಪಾದನ ವಲಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದೆ ಎಂದು ಟ್ರಂಪ್ ಹೇಳಿದ್ದರು.

**ಟ್ರಾನ್ಸ್-ಫೆಸಿಫಿಕ್ ಪಾರ್ಟನರ್ ಶಿಪ್ ಬಗ್ಗೆ:**

- ಟ್ರಾನ್ಸ್-ಫೆಸಿಫಿಕ್ ಪಾರ್ಟನರ್ ಶಿಪ್ ಒಪ್ಪಂದ ಫೆಸಿಫಿಕ್ ರಿಮ್ ನ 12 ರಾಷ್ಟ್ರಗಳ ನಡುವಿನ ಮಹತ್ವಕಾಂಕ್ಷಿ ವ್ಯಾಪಾರ ಒಪ್ಪಂದವಾಗಿದ್ದು, ಮಾತುಕತೆ ಹಂತದಲ್ಲಿದೆ. ಈ 12 ರಾಷ್ಟ್ರಗಳು ವಿಶ್ವದ ಶೇ 40% ಆರ್ಥಿಕತೆಯನ್ನು ಒಳಗೊಂಡಿವೆ. 2015 ರಲ್ಲಿ ಅಮೆರಿಕ ಈ ಒಪ್ಪಂದವನ್ನು ಪ್ರೋತ್ಸಾಹಿಸುವ ಮೂಲಕ 12 ರಾಷ್ಟ್ರಗಳು ಒಪ್ಪಂದಕ್ಕೆ ಸಹಿ ಹಾಕಿದವು.
- ಆಸ್ಟ್ರೇಲಿಯಾ, ಬ್ರೂನಿ, ಚಿಲೆ, ಕೆನಡಾ, ಜಪಾನ್, ಮಲೇಷಿಯಾ, ಮೆಕ್ಸಿಕೊ, ನ್ಯೂಜಿಲ್ಯಾಂಡ್, ಪೆರು, ಸಿಂಗಾಪುರ, ಅಮೆರಿಕ ಮತ್ತು ವಿಯೆಟ್ನಾಂ ಈ 12 ರಾಷ್ಟ್ರಗಳಾಗಿವೆ. ಭಾರತ ಈ ಒಪ್ಪಂದದ ಸದಸ್ಯ ರಾಷ್ಟ್ರವಲ್ಲ.
- ಸದಸ್ಯ ರಾಷ್ಟ್ರಗಳಲ್ಲಿ ಸುಗುಮವಾಗಿ ವಸ್ತುಗಳ ಸಾಗಾಟ, ಸೇವೆ ಹಾಗೂ ಬಂಡವಾಳ ಹೂಡಿಕೆ ಉತ್ತೇಜನ ನೀಡುವುದು ಅಲ್ಲದೇ 21ನೇ ಶತಮಾನದಲ್ಲಿ ವ್ಯಾಪಾರ ನಿಯಮವನ್ನು ರೂಪಿಸುವುದು ಇದರ ಮುಖ್ಯ ಉದ್ದೇಶ.
- ಫೆಸಿಫಿಕ್ ರಿಮ್ ವಲಯದಲ್ಲಿ ಅತಿ ದೊಡ್ಡ ಆರ್ಥಿಕ ದೇಶವಾಗಿ ಬೆಳೆಯುತ್ತಿರುವ ಚೀನಾ ದೇಶದ ಪ್ರಭಾವವನ್ನು ಹತ್ತಿಕ್ಕುವುದು ಸಹ ಒಪ್ಪಂದದ ಉದ್ದೇಶವಾಗಿದೆ.

**ಟಿಪಿಪಿ ಭಾರತದ ಮೇಲೆ ಬೀರಲಿರುವ ಪರಿಣಾಮ:**

- ಟಿಪಿಪಿ ಯಿಂದ ಭಾರತಕ್ಕೆ ಉಪಯೋಗಕ್ಕಿಂತ ಅನಾನುಕೂಲಗಳು ಜಾಸ್ತಿ. ಭಾರತದ ರಫ್ತು ಮಾರುಕಟ್ಟೆಯ ಮೇಲೆ ಈ ಒಪ್ಪಂದ ಋಣಾತ್ಮಕ ಪರಿಣಾಮ ಬೀರಲಿದೆ. ಭಾರತದ ಪ್ರಮುಖ ರಫ್ತು ಸರಕುಗಳಾದ ಚರ್ಮ, ಜವಳಿ, ಪ್ಲಾಸ್ಟಿಕ್, ಹತ್ತಿ ಮತ್ತು ಉಣ್ಣೆ ಬೇಡಿಕೆ ಕಡಿಮೆಯಾಗಲಿದೆ. ಅಲ್ಲದೇ ಭಾರತದ ಔಷಧಿ ವಲಯದ ಮೇಲೂ ಪರಿಣಾಮ ಬೀರಲಿದೆ.

## <u>ವಿಶ್ವದ ಅತ್ಯಂತ ಪ್ರಭಾವೀ ಪಾಸ್ ಪೋರ್ಟ್ ಪಟ್ಟಿಯಲ್ಲಿ ಭಾರತಕ್ಕೆ 78ನೇ ಸ್ಥಾನ</u>



ವಿಶ್ವದ ಅತ್ಯಂತ ಪ್ರಭಾವೀ ಪಾಸ್ಪೋರ್ಟ್ಗಳ ಪಟ್ಟಿಯಲ್ಲಿ ಭಾರತಕ್ಕೆ 78ನೇ ಸ್ಥಾನ ಲಭಿಸಿದೆ. ಪಟ್ಟಿಯಲ್ಲಿ ಜರ್ಮನಿ 157 ಮುಕ್ತ ವಿಸಾ ಅಂಕದೊಂದಿಗೆ ಅಗ್ರಸ್ಥಾನ ಪಡೆದುಕೊಂಡಿದೆ. ಏಷ್ಯಾ ರಾಷ್ಟ್ರಗಳ ಪೈಕಿ ಸಿಂಗಾಪುರ ಅಗ್ರಸ್ಥಾನವನ್ನು ಪಡೆದುಕೊಂಡಿದೆ.

**ಪ್ರಮುಖಾಂಶಗಳು:**

- ಭಾರತವು 46 ಮುಕ್ತ ವಿಸಾ ಅಂಕದೊಂದಿಗೆ 78ನೇ ಸ್ಥಾನದಲ್ಲಿದೆ. ಆ ಮೂಲಕ ಚೀನಾ ಮತ್ತು ಪಾಕಿಸ್ತಾನವನ್ನು ಹಿಂದಿಕ್ಕಿದೆ.

- ಅಫಘಾನಿಸ್ತಾನವು ಕೇವಲ 23 ಅಂಕದೊಂದಿಗೆ ಈ ಪಟ್ಟಿಯಲ್ಲಿ ಅಂತಿಮ ಸ್ಥಾನದಲ್ಲಿದೆ.

**ಸೂಚ್ಯಂಕದ ಬಗ್ಗೆ:**

ಪ್ರಭಾವಿ ಪಾಸ್ ಪೋರ್ಟ್ ಸೂಚ್ಯಂಕವನ್ನು ಜನಪ್ರಿಯ ಅಂತರ್ಜಾಲ ಸಂಸ್ಥೆ "ಆರ್ಟನ್ ಕ್ಯಾಪಿಟಲ್"' ಹೊರತರುತ್ತಿದೆ. ರಾಷ್ಟ್ರೀಯ ಪಾಸ್ಪೋರ್ಟ್ ಬಳಸಿ ಇನ್ನೊಂದು ದೇಶಕ್ಕೆ ನಡೆಸುವ ಪ್ರಯಾಣದ ಪ್ರಮಾಣದ ಆಧಾರದಲ್ಲಿ ಈ ಸೂಚ್ಯಾಂಕವನ್ನು ತಯಾರಿಸಿದೆ. ಒಬ್ಬ ವ್ಯಕ್ತಿ ತನ್ನ ದೇಶದ ಪಾಸ್ಪೋರ್ಟ್ ಬಳಸಿಕೊಂಡು ಮುಕ್ತ ವಿಸಾ ಅಥವಾ ಆಗಮನ ಸಂದರ್ಭದ ವಿಸಾದ ಮೂಲಕ ಒಂದು ವರ್ಷದಲ್ಲಿ ಭೇಟಿ ನೀಡಿದ ರಾಷ್ಟ್ರಗಳ ಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು ಈ ಸೂಚ್ಯಾಂಕವನ್ನು ಸಿದ್ಧಪಡಿಸಲಾಗುತ್ತದೆ.

## <u>ಕಚ್ಚಾ ತೈಲ ಸಂಗ್ರಹಕ್ಕೆ ಭಾರತ ಮತ್ತು ಯುಎಇ ಒಪ್ಪಂದ</u>



ಭಾರತದ ಇಂಧನ ಸುರಕ್ಷತೆ ಹಾಗೂ ಮಹತ್ವಕಾಂಕ್ಷಿ ಕಚ್ಚಾ ತೈಲ ಸಂಗ್ರಹಕ್ಕೆ ಭಾರತ ಮತ್ತು ಯುಎಇ ಒಪ್ಪಂದಕ್ಕೆ ಸಹಿ ಹಾಕಿವೆ. ಒಪ್ಪಂದದ ಅನ್ವಯ ಯುಎಇ ನ ಅಬುದಾಬಿ ನ್ಯಾಷನಲ್ ಆಯಿಲ್ ಕಂಪನಿ ಕರ್ನಾಟಕದ ಮಂಗಳೂರಿನಲ್ಲಿರುವ ಕಚ್ಚಾ ತೈಲ ಸಂಗ್ರಹಾಗಾರದ ಒಟ್ಟು ಸಾಮರ್ಥ್ಯದಲ್ಲಿ ಶೇಕಡ 50 ರಷ್ಟು ಭರ್ತಿ ಮಾಡಲು ಕಚ್ಚಾ ತೈಲವನ್ನು ಪೂರೈಸಲಿದೆ. ಈಗಾಗಲೇ ಮಂಗಳೂರಿನ ಕಚ್ಚಾ ತೈಲ ಸಂಗ್ರಹಗಾರ ಶೇ 50% (6 ಬಿಲಿಯನ್) ರಷ್ಟನ್ನು ಇರಾನ್ ನಿಂದ ಆಮದು ಮಾಡಿಕೊಳ್ಳಲಾದ ಇಂಧನವನ್ನು ಶೇಖರಿಡಿಸಲಾಗಿದೆ. ಅಲ್ಲದೇ ಆಂಧ್ರಪ್ರದೇಶದ ವಿಝಾಗ್ ಕಚ್ಚಾ ತೈಲ ಸಂಗ್ರಹಾಗಾರದಲ್ಲೂ ಸಹ ಇರಾನಿನ 7.55 ಮಿಲಿಯನ್ ಬ್ಯಾರೆಲ್ ತೈಲವನ್ನು ಸಂಗ್ರಹ ಮಾಡಲಾಗಿದೆ.

**ಹಿನ್ನಲೆ**:

- ವಿಶ್ವದಲ್ಲಿ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ರಾಷ್ಟ್ರಗಳಲ್ಲಿ ಒಂದಾಗಿರುವ ಹಾಗೂ ಜಗತ್ತಿನ ಮೂರನೇ ಅತಿ ಹೆಚ್ಚು ತೈಲವನ್ನು ಬಳಸುವ ದೇಶ ಭಾರತ, ಅಂದಾಜು 10 ದಿನಗಳಿಗೆ ಸಾಕಾಗುವಷ್ಟು ಅಂದರೆ 36.87 ಮಿಲಿಯನ್ ಬ್ಯಾರೆಲ್ ಕಚ್ಚಾ ತೈಲವನ್ನು ಸಂಗ್ರಹಿಸಿ ಇಟ್ಟುಕೊಳ್ಳುವ ಸಲುವಾಗಿ ಭೂಮಿಯೊಳಗೆ ಕಚ್ಚಾ ತೈಲವನ್ನು ಸಂಗ್ರಹಿಸಿಡಲು ಯೋಜನೆ ರೂಪಿಸಿದೆ. ತುರ್ತು ಸಂದರ್ಭದಲ್ಲಿ ತೈಲವನ್ನು ಪೂರೈಸಲು ಇದು ಸಹಾಯವಾಗಲಿದೆ.

## <u>ಭಾರತ ಮತ್ತು ಯುನೈಟೆಡ್ ಅರಭ್ ಎಮಿರೇಟ್ಸ್ (ಯುಎಇ) ನಡುವೆ 14 ಒಪ್ಪಂದಗಳಿಗೆ ಸಹಿ</u>



ಭಾರತ ಮತ್ತು ಯುಎಇ ನಡುವಿನ ದ್ವಿಪಕ್ಷೀಯ ಸಹಕಾರ ಸಂಬಂಧವನ್ನು ಮತ್ತಷ್ಟು ಉತ್ತಮಗೊಳಿಸಲು ಉಭಯ ದೇಶಗಳ ನಡುವೆ ವಿವಿಧ ಕ್ಷೇತ್ರಗಳಲ್ಲಿ 14 ಒಪ್ಪಂದಗಳಿಗೆ ಸಹಿ ಹಾಕಲಾಯಿತು. ಪ್ರಧಾನಿ ನರೇಂದ್ರ ಮೋದಿ ಹಾಗೂ 68ನೇ ಗಣರಾಜ್ಯೋತ್ಸವದ ಅತಿಥಿಯಾಗಿರುವ ಶೇಖ್ ಮೊಹಮ್ಮದ್ ಬಿನ್ ಝಯೇದ್ ಅಲ್ ನಹ್ಯಾನ್ ರವರ ನಡುವೆ ನಡೆದ ಉನ್ನತ ಮಟ್ಟದ ಮಾತುಕತೆ ವೇಳೆ ಒಪ್ಪಂದಗಳಿಗೆ ಸಹಿ ಹಾಕಲಾಯಿತು.

**ಸಹಿ ಹಾಕಲಾದ ಒಪ್ಪಂದಗಳು:**

- ಕೃಷಿ ಮತ್ತು ಕೃಷಿ ಸಂಬಂಧಿತ ಕ್ಷೇತ್ರಗಳಲ್ಲಿ ಒಪ್ಪಂದಕ್ಕೆ ಸಹಿ
- ತೈಲ ಸಂಗ್ರಹ ಮತ್ತು ನಿರ್ವಹಣೆಗೆ ಒಪ್ಪಂದ
- ಕಾರ್ಯಕ್ರಮ ವಿನಿಮಯ ಒಡಂಬಡಿಕೆಗೆ ಸಹಿ
- ರಕ್ಷಣಾ ಕೈಗಾರಿಕೆ ಕ್ಷೇತ್ರದಲ್ಲಿ ಒಪ್ಪಂದಕ್ಕೆ ಸಹಿ

- ಸಮಗ್ರ ಪಾಲುದಾರಿಕೆ ಒಪ್ಪಂದಕ್ಕೆ ಸಹಿ
- ನೌಕ ಸಾರಿಗೆ ಕ್ಷೇತ್ರದಲ್ಲಿ ಒಪ್ಪಂದಕ್ಕೆ ಸಹಿ
- ಮಾನವ ಕಳ್ಳಸಾಗಣೆ ಹಾಗೂ ತಡೆ ಸಹಕಾರಕ್ಕೆ ಒಪ್ಪಂದ
- ಪರಸ್ಪರ ಇತಾಸಕ್ತಿ ಇರುವ ಕ್ಷೇತ್ರಗಳಲ್ಲಿ ಸಹಕಾರ ಉತ್ತೇಜನಕ್ಕೆ ಒಪ್ಪಂದ
- ಸಣ್ಣ ಮತ್ತು ಮಧ್ಯಮ ಉದ್ದಿಮೆ ಹಾಗೂ ನಾವೀನ್ಯ ಕ್ಷೇತ್ರದಲ್ಲಿ ಸಹಕಾರಕ್ಕೆ ಒಪ್ಪಂದ
- ಉಭಯ ದೇಶಗಳಲ್ಲಿ ರಾಜತಾಂತ್ರಿಕರು, ವಿಶೇಷ ಮತ್ತು ಅಧಿಕೃತ ಪಾಸ್ ಪೋರ್ಟ್ ಹೊಂದಿರುವವರಿಗೆ ವೀಸಾ ಮುಕ್ತ ಪ್ರವೇಶಕ್ಕೆ ಒಪ್ಪಂದ.
- ರಸ್ತೆ ಸಾರಿಗೆ ಮತ್ತು ಹೆದ್ದಾರಿ ವಲಯದಲ್ಲಿ ದ್ವಿಪಕ್ಷೀಯ ಸಹಕಾರ ಒಪ್ಪಂದಕ್ಕೆ ಸಹಿ.

**ಬಿಇಪಿಎಸ್ ಒಪ್ಪಂದಕ್ಕೆ ಹೊಸದಾಗಿ ಏಳು ರಾಷ್ಟ್ರಗಳು ಸೇರ್ಪಡೆ**



ತೆರಿಗೆ ಮಾಹಿತಿಯನ್ನು ಹಂಚಿಕೊಳ್ಳುವ ಮಲ್ಟಿಲ್ಯಾಟರಲ್ ಕಾಂಪಿಟೆಂಟ್ ಆಥಾರಿಟಿ ಅಗ್ರಿಮೆಂಟ್ ಫಾರ್ ಕಂಟ್ರಿ-ಬೈ-ಕಂಟ್ರಿ (Multilateral Competent Authority Agreement for Country-by-Country CbC MCAA) ಒಪ್ಪಂದಕ್ಕೆ ಲಿಥುಯಾನಿಯ, ಗಬಾನ್, ಹಂಗೇರಿ, ಇಂಡೋನೇಷಿಯಾ, ಮಾಲ್ಟ, ಮಾರೀಷಸ್ ಹಾಗೂ ರಷ್ಯಾ ಸೇರ್ಪಡೆಗೊಂಡಿವೆ. ಆ ಮೂಲಕ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳ ಸಂಖ್ಯೆ 57ಕ್ಕೆ ಏರಿಕೆ ಆಗಿದೆ. ಭಾರತ ಈ ಒಪ್ಪಂದಕ್ಕೆ ಮೇ 2015 ರಲ್ಲಿ ಸಹಿ ಹಾಕಿತ್ತು. CbC MCAA ಒಂದು ತೆರಿಗೆ ಸಹಕಾರ ಒಪ್ಪಂದವಾಗಿದ್ದು, ರಾಷ್ಟ್ರ ರಾಷ್ಟ್ರಗಳ ನಡುವೆ ತೆರಿಗೆ ಮಾಹಿತಿಯನ್ನು ಹಂಚಿಕೊಳ್ಳಲು ರೂಪಿಸಲಾಗಿದೆ.

**ಪ್ರಮುಖಾಂಶಗಳು**:

- ಬಹು ರಾಷ್ಟ್ರೀಯ ಉದ್ಯಮಗಳಲ್ಲಿ ಪಾರದರ್ಶಕತೆ ತರುವ ಸಲುವಾಗಿ ಸದಸ್ಯ ರಾಷ್ಟ್ರಗಳ ನಡುವೆ ದ್ವಿಪಕ್ಷೀಯವಾಗಿ ಹಾಗೂ ಸ್ವಯಂಚಾಲಿತ ಮಾಹಿತಿ ವಿನಮಯನ್ನು ಒಪ್ಪಂದದಡಿ ಮಾಡಲಾಗುತ್ತದೆ.
- OECD ಮತ್ತು ಜಿ-20 ಸದಸ್ಯ ರಾಷ್ಟ್ರಗಳು ಅಳವಡಿಸಿಕೊಂಡಿರುವ "ಬೇಸ್ ಎರೋಷನ್ ಅಂಡ್ ಪ್ರಾಫಿಟ್ ಶಿಫ್ಟಿಂಗ್ ಆಕ್ಷನ್ ಪ್ಲಾನ್(Base Erosion and Profit Shifting Action Plan)" ರಂತೆ ಮಾಹಿತಿಯನ್ನು ವಿನಿಮಯ ಮಾಡಿಕೊಳ್ಳಲಾಗುತ್ತದೆ.

## ಪ್ರಶಸ್ತಿಗಳು

**ಭಾರತೀಯ ಮೂಲದ ಶಂಕರ್ ಬಾಲಸುಬ್ರಮಣಿಯನ್ ಗೆ ನೈಟ್ ಹುಡ್ ಗೌರವ**



ಭಾರತೀಯ ಮೂಲದ ರಸಾಯನವಿಜ್ಞಾನ ಪ್ರಾಧ್ಯಪಕ ಹಾಗೂ ಕೇಂಬ್ರಿಡ್ಜ್ ವಿಶ್ವವಿದ್ಯಾಲಯದ ಜೀವಕೋಶ ತಜ್ಞ ಶಂಕರ್ ಬಾಲಸುಬ್ರಮಣಿಯನ್ ಅವರಿಗೆ ಬ್ರಿಟನ್ ರಾಣಿ ಎರಡನೇ ಎಲಿಜಬೆತ್ ನೀಡುವ ಪ್ರತಿಷ್ಠಿತ ನೈಟ್‌ಹುಡ್ ಪುರಸ್ಕಾರ ಲಭಿಸಿದೆ. ಶಂಕರ್ ಅವರು ಹೊಸ ಪೀಳಿಗೆಯ ಡಿಎನ್‌ಎ ಕುರಿತು ಮಾಡಿರುವ ಸಂಶೋಧನೆಯನ್ನು ಪರಿಗಣಿಸಿ ಈ ಗೌರವ ನೀಡಲಾಗಿದೆ. ಈ ಸಂಶೋಧನೆ ದಶಕದಲ್ಲಿ ಜೀವಶಾಸ್ತ್ರ ಮತ್ತು ವೈದ್ಯಕೀಯ ಕ್ಷೇತ್ರದಲ್ಲಿ ಭಾರಿ ಬದಲಾವಣೆಗೆ ಕಾರಣವಾಗಲಿದೆ ಎನ್ನಲಾಗಿದೆ.

**ಶಂಕರ್ ಸುಬ್ರಮಣಿಯನ್ ಬಗ್ಗೆ:**

- ಶಂಕರ್ ಬಾಲಸುಬ್ರಮಣಿಯನ್ ರವರು 30ನೇ ಸೆಪ್ಟೆಂಬರ್ 1966ರಲ್ಲಿ ಚೆನ್ನೈನಲ್ಲಿ ಜನಿಸಿದ್ದಾರೆ. ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಿಂದ "ರಿಯಾಕ್ಷನ್ ಮೆಕಾನಿಸಂ ಆಫ್ ದಿ ಎಂಜೈಮ್ ಕೊರಿಸ್ಮೆಟ್ ಸಿಂಥೆಸ್"ವಿಷಯದ ಮೇಲೆ ಪಿಎಚ್ಡಿ ಪದವಿಯನ್ನು ಪಡೆದಿದ್ದಾರೆ.
- ನ್ಯೂಕ್ಲಿಕ್ ಆಸಿಡ್ ಕ್ಷೇತ್ರಕ್ಕೆ ನೀಡಿರುವ ಗಣನೀಯ ಕೊಡುಗೆಯಿಂದ ಪ್ರಸಿದ್ದರಾಗಿರುವ ಶಂಕರ್ ರವರು ಸೊಲೆಕ್ಸ ಮತ್ತು ಕೇಂಬ್ರಿಡ್ಜ್ ಎಪಿಜೆನೆಟಿಕ್ಸ್ ನ ವೈಜ್ಞಾನಿಕ ಸಂಸ್ಥಾಪಕರಾಗಿದ್ದಾರೆ.
- ಪ್ರಸ್ತುತ ಇವರು ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಔಷಧ ರಸಾಯನ ವಿಜ್ಞಾನ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ನೈಟ್ ಹುಡ್ ಗೌರವ**:

ನೈಟ್ ಹುಡ್ ಪ್ರಶಸ್ತಿ ಯುಕೆಯಲ್ಲಿ ವ್ಯಕ್ತಿಯೊಬ್ಬರಿಗೆ ನೀಡಲಾಗುವ ಅತ್ಯುನ್ನತ ಗೌರವವಾಗಿದೆ. ಈ ಪ್ರಶಸ್ತಿಯನ್ನು ಪಡೆದುಕೊಂಡವರು ತಮ್ಮ ಹೆಸರಿನ ಮುಂದೆ "ಸರ್" ಶೀರ್ಷಿಕೆಯನ್ನು ಸೇರಿಸಕೊಳ್ಳಲು ಅರ್ಹರಾಗಿರುತ್ತಾರೆ. ನೈಟ್ ಹುಡ್ ಪ್ರಶಸ್ತಿಯನ್ನು ಬ್ರಿಟನ್ ರಾಣಿ ಅಥವಾ ರಾಣಿಯ ಪರವಾಗಿ ರಾಯಲ್ ಕಿಂಗ್ ಕುಟುಂಬದ ಸದಸ್ಯರು ಪ್ರಧಾನ ಮಾಡುತ್ತಾರೆ.

**ಶ್ರದ್ಧಾ ಮತ್ತು ಘ್ಯಾನಶಾಮ್ ಕುಮಾರ್ ದೇವನಾಶ್ ಗೆ 2016 ಭಾರತೀಯ ಜ್ಞಾನಪೀಠ ನವಲೇಖನ ಪ್ರಶಸ್ತಿ**



ಭಾರತೀಯ ಜ್ಞಾನಪೀಠ ನವಲೇಖನ 2016ನೇ ಸಾಲಿನ ಪ್ರಶಸ್ತಿಗೆ ಹೆಸರಾಂತ ಇಬ್ಬರು ಹಿಂದಿ ಲೇಖಕರಾದ ಶ್ರದ್ಧಾ ಮತ್ತು ಘ್ಯಾನಶಾಮ್ ಕುಮಾರ್ ದೇವನಾಶ್ ರವರನ್ನು ಆಯ್ಕೆಮಾಡಲಾಗಿದೆ. ಶ್ರದ್ಧಾ ರವರ ಸಣ್ಣಕಥೆ "ಹವಾ ಮೇನ್ ಫಾದ್ವಾದತಿ ಛಿತ್ತಿ" ಮತ್ತು ದೇವನಾಶ್ ರವರ "ಆಕಾಶ್ ಮೇನ್ ದೆಹ್" ಕವಿತೆಗೆ ಪ್ರಶಸ್ತಿಯನ್ನು ನೀಡಲಾಗಿದೆ. ಪ್ರಖ್ಯಾತ ಕವಿ ವಿಷ್ಣು ನಗರ್ ನೇತೃತ್ವದ ಆಯ್ಕೆಮಂಡಳಿ ಈ ಇಬ್ಬರನ್ನು ಪ್ರಶಸ್ತಿಗೆ ಆಯ್ಕೆಮಾಡಿದೆ.

**ಜ್ಞಾನಪೀಠ ನವಲೇಖನ ಪ್ರಶಸ್ತಿ**:

- ಜ್ಞಾನಪೀಠ ನವಲೇಖನ ಪ್ರಶಸ್ತಿಯನ್ನು ಯುವ ಲೇಖಕರ ಮೊದಲ ರಚನೆಗೆ ನೀಡಲಾಗುತ್ತಿದೆ.
- ಭಾರತೀಯ ಜ್ಞಾನಪೀಠ ಟ್ರಸ್ಟ್ 2006ರಲ್ಲಿ ಪ್ರಶಸ್ತಿಯನ್ನು ಸ್ಥಾಪಿಸಿದೆ.
- ಪ್ರಶಸ್ತಿಯು ಸರಸ್ವತಿ ದೇವಿ ಪ್ರತಿಮೆ, ಫಲಕ ಹಾಗೂ ನಗದು ಬಹುಮಾನವನ್ನು ಒಳಗೊಂಡಿದೆ.

## 2016-17ನೇ ಸಾಲಿನ ಬಸವ ಕೃಷಿ ಪ್ರಶಸ್ತಿಗೆ ತ್ರಿಪುರ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಆಯ್ಕೆ



ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠದ ವತಿಯಿಂದ ನೀಡಲಾಗುವ ರಾಷ್ಟ್ರಮಟ್ಟದ ಪ್ರಸ್ತುಕ ಸಾಲಿನ ಬಸವ ಕೃಷಿ ಪ್ರಶಸ್ತಿಗೆ ತ್ರಿಪುರ ರಾಜ್ಯದ ಮುಖ್ಯಮಂತ್ರಿ ಮಾಣಿಕ್ ಸರ್ಕಾರ್ ಅವರನ್ನು ಆಯ್ಕೆಮಾಡಲಾಗಿದೆ. ಪ್ರಶಸ್ತಿಯನ್ನು ಜನವರಿ 15ರ ಸಂಕ್ರಾಂತಿಯಂದು ಕೂಡಲ ಸಂಗಮದ ಸಭಾಭವನದಲ್ಲಿ ನಡೆಯಲಿರುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು.

**ಮಾಣಿಕ್ ಸರ್ಕಾರ್:**

- ಜನವರಿ 22, 1949ರಲ್ಲಿ ಜನಿಸಿರುವ ಮಾಣಿಕ್ ಸರ್ಕಾರ್ ರವರು 11ನೇ ಮಾರ್ಚ್ 1998 ರಿಂದ ತ್ರಿಪುರದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.
- 2013 ರಲ್ಲಿ ನಾಲ್ಕನೇ ಬಾರಿಗೆ ತ್ರಿಪುರದ ಮುಖ್ಯಮಂತ್ರಿಯಾಗಿ ಆಯ್ಕೆಯಾದರು.
- ದೇಶದಲ್ಲೆ ಅತ್ಯಂತ ಸರಳವಾಗಿ ಜೀವನ ನಡೆಸುತ್ತಿರುವ ಮುಖ್ಯಮಂತ್ರಿ ಎಂಬ ಖ್ಯಾತಿ ಸರ್ಕಾರ್ ಗೆ ಸಂದಿದೆ. ಸರ್ಕಾರ್ ರವರು ಮುಖ್ಯಮಂತ್ರಿಯಾಗಿದ್ದರು ಸ್ವಂತ ಮನೆ, ಕಾರು ತಮ್ಮ ಹೆಸರಿನಲ್ಲಿ ಹೊಂದಿಲ್ಲ.
- ಕೃಷಿಕರ, ಕಾರ್ಮಿಕರ ಅಭಿವೃದ್ದಿಗೆ ಸಲ್ಲಿಸಿರುವ ಸೇವೆಯನ್ನು ಗಮನಿಸಿ ಇವರನ್ನು ಬಸವ ಕೃಷಿ ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ.

**ಬಸವಕೃಷಿ ಪ್ರಶಸ್ತಿ**:

- ಕೂಡಲ ಸಂಗಮದ ಲಿಂಗಾಯತ ಪಂಚಮಸಾಲಿ ಜಗದ್ಗುರು ಮಹಾಪೀಠದ ವತಿಯಿಂದ ಬಸವ ಕೃಷಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಪ್ರಶಸ್ತಿ 1 ಲಕ್ಷ ರೂ. ನಗದು, ತಾಮ್ರಪತ್ರ ಸ್ಮರಣಿಕೆ ಒಳಗೊಂಡಿರುತ್ತದೆ.
- ಈಗಾಗಲೇ ಈ ಪ್ರಶಸ್ತಿಯನ್ನು ಜಲತಜ್ಞ ರಾಜೇಂದ್ರಸಿಂಗ್, ಗಾಂಧಿವಾದಿ ಅಣ್ಣಾ ಹಜಾರೆ, ಪರಿಸರ ವಾದಿ ಮೇಧಾ ಪಾಟ್ಕರ್ ಹಾಗೂ ಉದ್ಯೋಗಖಾತ್ರಿ ಯೋಜನೆಯ ರೂವಾರಿ ಡಾ.ಬಾಬಾ ಅಡಾವೆ ಅವರಿಗೆ ಪ್ರದಾನ ಮಾಡಲಾಗಿದೆ.

## ಕ್ರಿಸ್ಟಿಯಾನೋ ರೊನಾಲ್ಡೊ ಗೆ ಫಿಫಾ ವರ್ಷದ ಶ್ರೇಷ್ಠ ಆಟಗಾರ ಪ್ರಶಸ್ತಿ



ಪೋರ್ಚುಗಲ್ ತಂಡದ ಆಟಗಾರ ಕ್ರಿಸ್ಟಿಯಾನೋ ರೊನಾಲ್ಡೊ ಅವರಿಗೆ 2016ನೇ ಸಾಲಿನ ಫಿಫಾ ವರ್ಷದ ಶ್ರೇಷ್ಠ ಆಟಗಾರ ಪ್ರಶಸ್ತಿಯನ್ನು ಜೂರಿಚ್, ಸ್ವಿಟ್ಜರ್ಲ್ಯಾಂಡ್ನಲ್ಲಿ ಪ್ರಧಾನ ಮಾಡಲಾಯಿತು. ರೊನಾಲ್ಡೊ ರವರು ಶೇ 34.45% ಮತವನ್ನು ಪಡೆಯುವ ಮೂಲಕ ಪ್ರಶಸ್ತಿಗೆ ಭಾಜನರಾದರು. ಬಾರ್ಸಿಲೋನದ ಲಿಯೊನೆಲ್ ಮೆಸ್ಸಿ (26.42%) ಮತ್ತು ಅಲ್ಟಿಕೊ ಮ್ಯಾಡ್ರಿಡ್ನ ಅಂಟೊನೆ ಗ್ರೈಝ್ ಮನ್ (7.53%) ರವರನ್ನು ಹಿಂದಿಕ್ಕಿ ರೊನಾಲ್ಡೊ ರವರು ಈ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

**ಇತರೆ ಪ್ರಶಸ್ತಿಗಳು**:

- **ವರ್ಷದ ಮಹಿಳಾ ಫುಟ್ಬಾಲ್ ಆಟಗಾರ್ತಿ**: ಕಾರ್ಲಿ ಲ್ಲಾಯ್ಡ್ (ಅಮೆರಿಕ)

- **ಫಿಫಾ ಅತ್ಯುತ್ತಮ ಪುರುಷರ ತಂಡದ ಕೋಚ್**: ಕ್ಲಾಡಿಯೋ ರನ್ನೈರಿ (ಇಟಲಿ)
- **ಫಿಫಾ ಅತ್ಯುತ್ತಮ ಮಹಿಳೆಯ ತಂಡದ ಕೋಚ್:** ಸಿಲ್ವಿಯಾನೀಡ್ (ಜರ್ಮನಿ)
- **ಫಿಫಾ ಫೇರ್ ಪ್ಲೇ ಪ್ರಶಸ್ತಿ:** ಅಟ್ಲಾಂಟಿಕೋ ನ್ಯಾಕನಲ್
- **ಫಿಫಾ ಔಟ್ ಸ್ಟ್ಯಾಂಡಿಂಗ್ ಕರಿಯರ್ (ಜೀವಮಾನ ಶ್ರೇಷ್ಟ ಪ್ರಶಸ್ತಿ)ಪ್ರಶಸ್ತಿ:** ಫಾಲ್ಕೋ (ಬ್ರೆಜಿಲ್).

**<u>ಏಳು ವಿಜ್ಞಾನಿಗಳಿಗೆ ಇನ್ಫೋಸಿಸ್ ಪ್ರಶಸ್ತಿ ಪ್ರಧಾನ</u>**



2016ನೇ ಸಾಲಿನ 'ಇನ್ಫೊಸಿಸ್ ವಿಜ್ಞಾನ ಪ್ರಶಸ್ತಿ'ಗೆ ಆಯ್ಕೆಯಾಗಿದ್ದ ಏಳು ವಿಜ್ಞಾನಿಗಳಿಗೆ ನೊಬೆಲ್ ಪುರಸ್ಕೃತ ಪ್ರೊ. ವೆಂಕಟರಮಣ ರಾಮಕೃಷ್ಣನ್ ಅವರು ಬೆಂಗಳೂರಿನಲ್ಲಿ ಪ್ರದಾನ ಮಾಡಿದರು. ಪ್ರಶಸ್ತಿ ₹ 65 ಲಕ್ಷ ನಗದು, ಚಿನ್ನದ ಪದಕ ಮತ್ತು ಪ್ರಮಾಣಫಲಕವನ್ನು ಒಳಗೊಂಡಿದೆ.

**ಪ್ರಶಸ್ತಿ ಪಡೆದ ವಿಜ್ಞಾನಿಗಳು**:

- ವಿ.ಕುಮಾರ್: ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಕೆಮಿಕಲ್ ಎಂಜಿನಿಯರಿಂಗ್ ವಿಭಾಗದಲ್ಲಿ ಪ್ರಾಧ್ಯಾಪಕರು.
- ಸುನೀಲ್ ಅಮೃತ್ (ಮಾನವಿಕ): ಅಮೆರಿಕದ ಹಾರ್ವರ್ಡ್ ವಿಶ್ವವಿದ್ಯಾಲಯ
- ಗಗನ್‌ದೀಪ್ ಕಂಗ್ (ಜೀವ ವಿಜ್ಞಾನ): ಫರಿದಾಬಾದ್‌ನ ಟಿಎಚ್ಎಸ್‌ಟಿಐನ
- ಅಕ್ಷಯ ವೆಂಕಟೇಶ್ (ಗಣಿತ): ಅಮೆರಿಕ ಸ್ಟಾನ್‌ಫೋರ್ಡ್ ವಿಶ್ವವಿದ್ಯಾಲಯದ
- ಅನಿಲ್ ಭಾರಧ್ವಾಜ್ (ಭೌತವಿಜ್ಞಾನ): ವಿಕ್ರಂಸಾರಾಭಾಯ್ ಬಾಹ್ಯಾಕಾಶ ಕೇಂದ್ರದ

ಕೈವನ್ ಮುನ್ಷಿ (ಸಮಾಜ ವಿಜ್ಞಾನ): ಬ್ರಿಟನ್‌ನ ಕೇಂಬ್ರಿಜ್ ವಿಶ್ವವಿದ್ಯಾಲಯದ

**<u>ಭಾರತ ಮೂಲದ ನಾಲ್ಕು ವಿಜ್ಞಾನಿಗಳಿಗೆ ಅಮೆರಿಕ ಅಧ್ಯಕ್ಷೀಯ ಪ್ರಶಸ್ತಿ</u>**



ಅಮೆರಿಕ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯುತ್ತಿರುವ ಬರಾಕ್ ಒಬಾಮ ರವರು ಭಾರತ ಮೂಲದ ನಾಲ್ಕು ವಿಜ್ಞಾನಿಗಳು ಸೇರಿದಂತೆ 102 ಸಂಶೋಧಕರನ್ನು ಪ್ರೆಸಿಡೆನ್ಷಿಯಲ್ ಅರ್ಲಿ ಕೆರಿಯರ್ ಆವಾರ್ಡ್ಸ್ ಫಾರ್ ಸೈನ್ಟಿಸ್ಟ್ ಅಂಡ್ ಇಂಜನಿಯರ್ಸ್ (Presidential Early Career Awards for Scientist and Engineers(PECASE)) ಪ್ರಶಸ್ತಿಗೆ ಆಯ್ಕೆಮಾಡಿದ್ದಾರೆ. ಈ ಪ್ರತಿಷ್ಠಿತ ಪ್ರಶಸ್ತಿಗೆ ಆಯ್ಕೆಯಾಗಿರುವ ಭಾರತೀಯ ಮೂಲದ ವಿಜ್ಞಾನಿಗಳೆಂದರೆ ಪಂಕಜ್ ಲಾಲ್, ಕೌಶಿಕ್ ಚೌಧರಿ, ಮನೀಶ್ ಅರೋರ ಮತ್ತು ಅರಾದ್ನ ತ್ರಿಪಾಠಿ.

**ಪ್ರಶಸ್ತಿ ಗೆದ್ದವರ ಬಗ್ಗೆ:**

- **ಪಂಕಜ್ ಲಾಲ್:** ಪಂಕಜ್ ಲಾಲ್ ರವರು ಮಾಂಟ್ಕ್ಲೆರ್ ಸ್ಟೇಟ್ ವಿಶ್ವವಿದ್ಯಾಲಯದ ಭೂಮಿ ಮತ್ತು ಪರಿಸರ ಅಧ್ಯಯನ ವಿಭಾಗದಲ್ಲಿ ಸಹಾಯಕ ಪ್ರಾಧ್ಯಪಕರಾಗಿದ್ದಾರೆ. ಲಾಲ್ ಅವರು ಪರಿಸರ ಅರ್ಥಶಾಸ್ತ್ರ, ಮತ್ತು ಆರ್ಥಿಕ ಭೂಗೋಳ, ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆ ಮತ್ತು ನೀತಿ ಮತ್ತು ಹವಾಮಾನ ಬದಲಾವಣೆ, ಮಾನವ ಆಯಾಮಗಳ ಪರಿಸರ ನಿರ್ವಹಣೆಯಲ್ಲಿ ಕೆಲಸ ಮಾಡಿದ್ದಾರೆ.
- **ಕೌಶಿಕ್ ಚೌಧರಿ:** ನೆಕ್ಸ್ಟ್ ಜನರೇಶನ್ ನೆಟ್ವರ್ಕ್ಸ್ ಅಂಡ್ ಸಿಸ್ಟ್ಂ ಲ್ಯಾಬ್ ನ ನಿರ್ದೇಶಕರಾಗಿರುವ ಚೌಧರಿರವರು NSF ಕೆರಿಯರ್ ಪ್ರಶಸ್ತಿ ಹಾಗೂ ಆಫೀಸ್ ಆಫ್ ನಾವಲ್ ರಿಸರ್ಚ್ ಡೈರೆಕ್ಟರ್ ಆಫ್ ರಿಸರ್ಚರ್ ಅರ್ಲಿ ಕೆರಿಯರ್ ಅವಾರ್ಡ್ ಪಡೆದುಕೊಂಡಿದ್ದಾರೆ.

- **ಮನೀಶ್ ಅರೊರ:** ಮನೀಶ್ ಅರೊರರವರು ಎನ್ವಿರಾನ್ಮೆಂಟ್ ಎಪಿಡೆಮಿಯೊಲಾಜಿಸ್ಟ ಹಾಗೂ ಜೀವಶಾಸ್ತ್ರಜ್ಞ. ಪ್ರವಸಪೂರ್ವ ಹಾಗೂ ಬಾಲ್ಯವಸ್ಥೆಯಲ್ಲಿ ರಾಸಾಯನಿಕಗಳಿಂದ ಜೀವನಾವಸ್ಥೆ ಮೇಲೆ ಆಗುವ ಪರಿಣಾಮಗಳ ಮೇಲೆ ಇವರ ಸಂಶೋಧನೆ ಕೇಂದ್ರಿಕೃತವಾಗಿದೆ.
- **ಅರಾದ್ನ ತ್ರಿಪಾಠಿ:** ಭೂಮಿ ಹೇಗೆ ಕಾರ್ಯನಿರ್ವಹಿಸುತ್ತದೆ ಎನ್ನುವುದರ ಬಗ್ಗೆ ತ್ರಿಪಾಠಿ ಅವರು ಸಂಶೋಧನೆ ನಡೆಸುತ್ತಿದ್ದಾರೆ. ಹವಾಮಾನ ಬದಲಾವಣೆ, ಇವರ ಸಂಶೋಧನಾ ಮಾದರಿಗಳು ಹವಾಮಾನ ಬದಲಾವಣೆ, ಸಾಗರಗಳು, ಮತ್ತು ಜೈವಿಕ, ವಾತಾವರಣ ನಡುವೆ ಇಂಗಾಲ ಹೇಗೆ ಪ್ರಸರಿಸುತ್ತದೆ ಎಂಬುದನ್ನ ಅರ್ಥಮಾಡಿಕೊಳ್ಳಲು ಅನುಕೂಲವಾಗಿದೆ.

**PECASE ಪ್ರಶಸ್ತಿಯ ಬಗ್ಗೆ:**

- PECASE ಪ್ರಶಸ್ತಿ ಅಮೆರಿಕ ಸರ್ಕಾರ ವಿಜ್ಞಾನ ಮತ್ತು ಎಂಜನಿಯರ್ ವೃತ್ತಿಪರರಿಗೆ ನೀಡುವ ಅತ್ಯುನ್ನತ ಪ್ರಶಸ್ತಿಯಾಗಿದೆ. ಪ್ರಶಸ್ತಿಯನ್ನು 1996ರಲ್ಲಿ ಅಂದಿನ ಅಮೆರಿಕ ಅಧ್ಯಕ್ಷ ಬಿಲ್ ಕ್ಲಿಂಟನ್ ರವರು ಸ್ಥಾಪಿಸಿದರು.
- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ನವೀನ ಸಂಶೋಧನೆ ಹಾಗೂ ತಮ್ಮ ವೈಜ್ಞಾನಿಕ ಸಂಶೋಧನೆ ಮೂಲಕ ಸಮುದಾಯ ಸೇವೆಗೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಪ್ರಶಸ್ತಿಗೆ ಆಯ್ಕೆಮಾಡಲಾಗುತ್ತದೆ.

**62ನೇ ಫಿಲ್ಮ್ ಫೇರ್ ಪ್ರಶಸ್ತಿ: ಅಮೀರ್ ಖಾನ್ಗೆ ಉತ್ತಮ ನಟ ಪ್ರಶಸ್ತಿ**



ಫಿಲ್ಮ್ ಫೇರ್ ನಿಯತಕಾಲಿಕೆಯ 62ನೇ ಜಿಯೋ ಫಿಲ್ಮ್ ಫೇರ್ ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ಮುಂಬೈನಲ್ಲಿ ವಿಜೃಂಭಣೆಯಿಂದ ನಡೆಯಿತು. 2016ರಲ್ಲಿ ತೆರೆಕಂಡ ಅತ್ಯುತ್ತಮ ಸಿನಿಮಾಗಳನ್ನು ಗುರುತಿಸುವ ಮೂಲಕ ಪ್ರಶಸ್ತಿಯನ್ನು ನೀಡಲಾಯಿತು. ಅಮೀರ್ ಖಾನ್ ಅಭಿನಯದ ದಂಗಲ್ ಚಿತ್ರ ವರ್ಷದ ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಭಾಜನವಾಯಿತು. ನೀರ್ಜಾ ಮತ್ತು ಕಪೂರ್ ಅಂಡ್ ಸನ್ಸ್ ಚಿತ್ರಗಳು ತಲಾ ಐದು ಪ್ರಶಸ್ತಿಗಳನ್ನು ಗೆದ್ದುಕೊಳ್ಳುವ ಮೂಲಕ ಅತಿ ಹೆಚ್ಚು ಪ್ರಶಸ್ತಿಗಳನ್ನು ಗೆದ್ದ ಚಿತ್ರಗಳಾಗಿ ಹೊರಹೊಮ್ಮಿದವು.

**ವಿವಿಧ ವಿಭಾಗದಲ್ಲಿ ಪ್ರಶಸ್ತಿ ಗೆದ್ದವರು**:

- **ಅತ್ಯುತ್ತಮ ನಟ:** ಅಮೀರ್ ಖಾನ್ (ದಂಗಲ್)
- **ಅತ್ಯುತ್ತಮ ನಟಿ:** ಅಲಿಯಾ ಭಟ್ (ಉಡ್ತ ಪಂಜಾಬ್)
- **ಅತ್ಯುತ್ತಮ ಚಿತ್ರ:** ದಂಗಲ್
- **ಅತ್ಯುತ್ತಮ ನಿರ್ದೇಶಕ:** ನಿತೇಶ್ ತಿವಾರಿ (ದಂಗಲ್)
- **ಜೀವಮಾನ ಸಾಧನೆ ಪ್ರಶಸ್ತಿ:** ಶತ್ರುಜ್ಞ ಸಿನ್ಹಾ
- **ಉದಯೋನ್ಮುಖ ನಿರ್ದೇಶಕ:** ಅಶ್ವಿನಿ ಅಯ್ಯರ್ ತಿವಾರಿ

**ತೀರ್ಪುಗಾರರ ಪ್ರಶಸ್ತಿ**:

- **ಅತ್ಯುತ್ತಮ ಪೋಷಕ ನಟ:** ರಿಷಿ ಕಪೂರ್ (ಕಪೂರ್ & ಸನ್ಸ್)
- **ಅತ್ಯುತ್ತಮ ಪೋಷಕ ನಟಿ:** ಶಬಾನ ಅಜ್ಮೀ (ನೀರ್ಜಾ)
- **ಉದಯೋನ್ಮುಖ ನಟ:** ದಿಲ್ಜಿತ್ ದೊಸನ್ಜ (ಉಡ್ತ ಪಂಜಾಬ್)
- **ಉದಯೋನ್ಮುಖ ನಟಿ:** ರಿತಿಕಾ ಸಿಂಗ್ (ಸಾಲ ಖದೂಸ್)

- **ಅತ್ಯುತ್ತಮ ಗಾಯಕ:** ಅರ್ಜಿತ್ ಸಿಂಗ್ (ಏ ದಿಲ್ ಹೈ ಮುಷ್ಕಿಲ್)
- **ಅತ್ಯುತ್ತಮ ಗಾಯಕಿ:** ನೇಹಾ ಬಾಸಿನ್ (ಸುಲ್ತಾನ್)
- **ಅತ್ಯುತ್ತಮ ಸಂಗೀತಾ ನಿರ್ದೇಶಕ:** ಪ್ರೀತಮ್ (ಏ ದಿಲ್ ಹೈ ಮುಷ್ಕಿಲ್)

**ಕರ್ನಾಟಕದ ಮೂಲದ ಕಿರಣ್ ಭಟ್ ಗೆ ತಾಂತ್ರಿಕ ಆಸ್ಕರ್ ಪ್ರಶಸ್ತಿ**



ಕರ್ನಾಟಕದ ಮೂಡಬಿದಿರೆ ಮೂಲದ ಕಿರಣ್ ಭಟ್ ಹಾಲಿವುಡ್ ಜಗತ್ತಿನ ಸಿನಿಮಾ ಕ್ಷೇತ್ರದಲ್ಲಿನ ವಿಶಿಷ್ಟ ತಾಂತ್ರಿಕ ಸಾಧನೆ ಗಾಗಿ ಪ್ರತಿಷ್ಠಿತ ತಾಂತ್ರಿಕ ಆಸ್ಕರ್ ಪ್ರಶಸ್ತಿಗೆ ಭಾಜನರಾಗಿದ್ದಾರೆ. ಕಿರಣ್ ಭಟ್ ರವರು ಅಭಿವೃದ್ಧಿಗೊಳಿಸಿರುವ "ಐಎಲ್ಎಂ ಫೇಸಿಯಲ್ ಪರ್ ಫಾರ್ಮೆನ್ಸ್-ಕ್ಯಾಪ್ಚರ್ ಸಾಲ್ವಿಂಗ್ ಸಿಸ್ಟಮ್'ಗಾಗಿ ಈ ಪ್ರಶಸ್ತಿ ಲಭಿಸಿದೆ. ಫೆ.11ರಂದು ಅಮೆರಿಕದಲ್ಲಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುವುದು.

**ಪ್ರಮುಖಾಂಶಗಳು**:

- ಕಿರಣ್ ಭಟ್ ಅಭಿವೃದ್ಧಿಗೊಳಿಸಿದ "ಐಎಲ್ಎಂ ಫೇಸಿಯಲ್ ಪರ್ಫಾರ್ಮೆನ್ಸ್-ಕ್ಯಾಪರ್ ಸಾಲ್ವಿಂಗ್ ಸಿಸ್ಟಮ್'ಗಾಗಿ ಆಸ್ಕರ್ ಲಭಿಸಿದೆ.
- ಇವರ ತಂತ್ರಜ್ಞಾನವನ್ನು ಸ್ಟಾರ್ವಾರ್-7, ವಾರ್ಕ್ರಾಫ್ಟ್, ಎವೆಂಜರ್, ಸ್ಟಾರ್ವಾರ್ ರೋಗ್-1 ಮುಂತಾದ ಹಾಲಿವುಡ್ ಚಿತ್ರಗಳಲ್ಲಿ ಬಳಸಲಾಗಿದೆ.
- ಈ ಸಾಧನೆಯನ್ನು ಗುರುತಿಸಿರುವ ಅಕಾಡೆಮಿ ಆಫ್ ಮೋಶನ್ ಪಿಕ್ಚರ್ ಆರ್ಟ್ಸ್ ಆಯಂಡ್ ಸೈನ್ಸ್, ಫೆ. 11ರಂದು ಬೆವೆರ್ಲಿ ವಿಲ್ಶೈರ್ನಲ್ಲಿ ಆಸ್ಕರ್ ಪ್ರಶಸ್ತಿ ಪ್ರಧಾನ ಮಾಡುತ್ತಿದೆ. ಈವರೆಗೆ 7 ಮಂದಿ ಭಾರತೀಯರು ಮಾತ್ರ ಆಸ್ಕರ್ಗೆ ಪಾತ್ರರಾಗಿದ್ದಾರೆ.

**ಕಿರಣ್ ಭಟ್ ಬಗ್ಗೆ**:

- ಕಿರಣ್ ಭಟ್ ಅವರು ಮೂಲತಃ ಕರ್ನಾಟಕದವರು. ಅವರ ತಂದೆ ಮೂಡಬಿದಿರೆ ಸಮೀಪದ ಕಡಂದಲೆ ಶ್ರೀನಿವಾಸ ಭಟ್. ತಾಯಿ ಕಲ್ಯಾಣಪುರ ಮೂಲದ ಜಯಶ್ರೀ. ಭಟ್ ಅವರ ಮೂಲ ಕುಟುಂಬ ಕಡಂದಲೆಯ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಪೂಜಾ ಕೈಂಕರ್ಯ ನಿರ್ವಹಿಸುತ್ತಿತ್ತು. ಭಟ್ ಅವರು 15 ವರ್ಷ ವಿಪ್ರೋದಲ್ಲಿದ್ದರು.
- ಪ್ರಸ್ತುತ ತಮಿಳುನಾಡಿನ ಕೊಯಮುತ್ತೂರಿನಲ್ಲಿ ಕೈಗಾರಿಕಾ ಉದ್ಯಮಿಯಾಗಿರುವ ಕಿರಣ್ ಭಟ್, ಡಿಜಿಟಲ್ ಕ್ಯಾಮೆರಾ ಮೂಲಕವೇ ಮುಖ ಭಾವಗಳನ್ನು ಪರಿಷ್ಕರಿಸುವ ತಂತ್ರಜ್ಞಾನವನ್ನು ಹಾಲಿವುಡ್ ಜಗತ್ತಿಗೆ ನೀಡಿದ್ದಾರೆ.
- ಪಿಲಾನಿಯ ಬಿರ್ಲಾ ತಾಂತ್ರಿಕ ಸಂಸ್ಥೆಯಲ್ಲಿ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಆಯಂಡ್ ಎಂಜಿನಿಯರಿಂಗ್ ಪದವಿ ಪಡೆದು, ಅಮೆರಿಕದ ಕಾರ್ನೆಗಿ ಮೆಲನ್ ವಿ.ವಿ.ಯಲ್ಲಿ ಕಂಪ್ಯೂಟರ್ ಸೈನ್ ನಲ್ಲಿ ಡಾಕ್ಟರೇಟ್ ಪಡೆದರು. ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಉದ್ಯೋಗಿಯಾಗಿ, ಬಳಿಕ ಸ್ಯಾನ್ಫ್ರಾನ್ಸಿಸ್ಕೋದಲ್ಲಿ ತನ್ನದೇ ಆದ ತಾಂತ್ರಿಕ ಸಂಸ್ಥೆ ಸ್ಥಾಪಿಸಿದರು. ಆರು ವರ್ಷಗಳ ಹಿಂದೆ, ತನ್ನ ಸಹೋದ್ಯೋಗಿಗಳ ಜತೆ ಐಎಲ್ಎಂ ತಂತ್ರಜ್ಞಾನ ನಿರ್ಮಿಸಿದ್ದು, ಇದು ಹಾಲಿವುಡ್ ಚಿತ್ರರಂಗದಲ್ಲಿ ಕ್ರಾಂತಿ ಮೂಡಿಸಿತು. ಭಟ್ ಅವರ ಪತ್ನಿ ಮುಂಬಯಿಯ ಪಾಯಲ್ ಅವರು ಕೂಡ ಡಾಕ್ಟರೇಟ್ ಪಡೆದವರು.

## 74ನೇ ಗೋಲ್ಡನ್ ಗ್ಲೋಬ್ ಪ್ರಶಸ್ತಿ ಪ್ರಧಾನ




74ನೇ ವಾರ್ಷಿಕ ಗೋಲ್ಡನ್ ಗ್ಲೋಬ್ ಪ್ರಶಸ್ತಿ ಪ್ರಧಾನ ಸಮಾರಂಭ ಬೆವೆರ್ಲಿ ಹಿಲ್ಸ್, ಕ್ಯಾಲಿಫೋರ್ನಿಯಾ, ಅಮೆರಿಕದಲ್ಲಿ ವಿಜೃಂಭಣೆಯಿಂದ ನಡೆಯಿತು. ಗೋಲ್ಡನ್ ಗ್ಲೋಬ್ ಪ್ರಶಸ್ತಿ ವಾರ್ಷಿಕ ಪ್ರಶಸ್ತಿಯಾಗಿದ್ದು, ಹಿಂದಿನ ವರ್ಷದ ಅತ್ಯುತ್ತಮ ಮೋಷನ್ ಪಿಕ್ಚರ್ ಹಾಗೂ ಅಮೆರಿಕನ್ ಟೆಲಿವಿಷನ್ ಗುರುತಿಸಲು ನೀಡಲಾಗುತ್ತಿದೆ. ಹಾಲಿವುಡ್ ಸಿನಿಮಾ 'ಲಾ ಲಾ ಲ್ಯಾಂಡ್'ಗೆ ಗೋಲ್ಡನ್ ಗ್ಲೋಬ್ಸ್ ವತಿಯಿಂದ ನೀಡಲಾಗುವ ಏಳು ಪ್ರಶಸ್ತಿಗಳು ಸಂದಿವೆ. ಭಾನುವಾರ ರಾತ್ರಿ ನಡೆದ ಸಮಾರಂಭದಲ್ಲಿ ಪ್ರಶಸ್ತಿಗಳನ್ನು ಪ್ರದಾನ ಮಾಡಲಾಯಿತು. ಹಾಸ್ಯ, ಸಂಗೀತ, ಉತ್ತಮ ನಟನೆ ಸೇರಿದಂತೆ ಶಿಫಾರಸು ಮಾಡಿದ ಎಲ್ಲ ವಿಭಾಗಗಳಲ್ಲೂ ಸಿನಿಮಾಗೆ ಪ್ರಶಸ್ತಿ ದೊರೆತಿದೆ. ಹಿರಿಯ ನಟಿ ಮೆರ್ಲಿ ಸ್ಟ್ರೀಪ್ ರವರಿಗೆ ಸೆಸಿಲ್ ಬಿ ಡೆಮಿಲ್ಲೆ ಜೀವಮಾನ ಸಾಧನೆ ಪ್ರಶಸ್ತಿ ದೊರೆತಿದೆ.

**ವಿವಿಧ ವಿಭಾಗದಲ್ಲಿ ಪ್ರಶಸ್ತಿಯ ವಿವರ:**

- ಬೆಸ್ಟ್ ಮೋಷನ್ ಪಿಕ್ಚರ್ ಡ್ರಾಮಾ**: ಮೂನ್ ಲೈಟ್**
- ಬೆಸ್ಟ್ ಮೋಷನ್ ಪಿಕ್ಚರ್ ಮ್ಯೂಸಿಕಲ್/ ಕಾಮಿಡಿ: **ಲಾ ಲಾ ಲ್ಯಾಂಡ್**
- ಬೆಸ್ಟ್ ಡೈರೆಕ್ಟರ್ ಇನ್ ಮೋಷನ್ ಪಿಕ್ಚರ್ –ಡ್ರಾಮಾ: **ಡಮಿಯನ್ ಚಾಝೆಲ್ (ಲಾ ಲಾ ಲ್ಯಾಂಡ್)**
- ಬೆಸ್ಟ್ ಆಕ್ಟರ್ ಇನ್ ಮೋಷನ್ ಪಿಕ್ಚರ್ –ಡ್ರಾಮಾ: **ಕ್ಯಾಸೆ ಅಫ್ಲೆಕ್ (ಮ್ಯಾಂಚೆಸ್ಟರ್ ಬೈ ದ ಸಿ).**
- ಬೆಸ್ಟ್ ಆಕ್ಟ್ರೆಸ್ ಇನ್ ಮೋಷನ್ ಪಿಕ್ಚರ್ –ಡ್ರಾಮಾ: **ಇಸಾ ಬೆಲ್ಲೆ ಹಪ್ಪರ್ಟ್ (ಎಲ್ಲೆ)**
- ಬೆಸ್ಟ್ ಆಕ್ಟರ್ ಇನ್ ಮೋಷನ್ ಪಿಕ್ಚರ್/ಮ್ಯೂಸಿಕಲ್/ಕಾಮಿಡಿ: **ರ್ಯಾನ್ ಗೊಸ್ಲಿಂಗ್ (ಲಾ ಲಾ ಲ್ಯಾಂಡ್)**
- ಬೆಸ್ಟ್ ಆಕ್ಟ್ರೆಸ್ ಇನ್ ಮೋಷನ್ ಪಿಕ್ಚರ್/ಮ್ಯೂಸಿಕಲ್/ಕಾಮಿಡಿ: **ಎಮ್ಮ ಸ್ಟೋನ್ (ಲಾ ಲಾ ಲ್ಯಾಂಡ್)**
- ಬೆಸ್ಟ್ ಅನಿಮೆಟೆಡ್ ಫೀಚರ್ ಫಿಲ್ಮ್: **ಝೂಟೋಪಿಯ**
- ಬೆಸ್ಟ್ ಫಾರಿನ್ ಲಾಂಗ್ವೆಜ್ ಫಿಲ್ಮ್: ಎಲ್ಲೆ (ಫ್ರಾನ್ಸ್)

## ಪದ್ಮ ಪ್ರಶಸ್ತಿ 2017




ರಾಷ್ಟ್ರಪತಿ ಪ್ರಣಭ್ ಮುಖರ್ಜಿ ಅವರು 2017 ಪದ್ಮ ಪ್ರಶಸ್ತಿಗಳಾದ ಪದ್ಮ ವಿಭೂಷಣ, ಪದ್ಮ ಭೂಷಣ ಹಾಗೂ ಪದ್ಮಶ್ರೀ ಪ್ರಶಸ್ತಿಗೆ ಆಯ್ಕೆಯಾಗಿರುವ ಗಣ್ಯರ ಹೆಸರನ್ನು ಘೋಷಿಸಿದ್ದಾರೆ. ಈ ಬಾರಿ 89 ಸಾಧಕರನ್ನು ಪ್ರಶಸ್ತಿಗೆ ಆಯ್ಕೆಮಾಡಲಾಗಿದೆ. ಇವರಲ್ಲಿ 7 ಪದ್ಮ ವಿಭೂಷಣ, 7 ಪದ್ಮ ಭೂಷಣ ಹಾಗೂ 75 ಪದ್ಮಶ್ರೀ ಪ್ರಶಸ್ತಿ ವಿಜೇತರು. ಈ ಪ್ರಶಸ್ತಿಯನ್ನು ಪಡೆದುಕೊಂಡವರಲ್ಲಿ 19 ಮಹಿಳೆಯರು, 5 ವಿದೇಶಿ, ಎನ್‌ಆರ್ಐ ಹಾಗೂ 6 ಜನರಿಗೆ ಮರಣೋತ್ತರವಾಗಿ ನೀಡಲಾಗಿದೆ.

**ಪದ್ಮ ವಿಭೂಷಣ:** ದೇಶದ ಎರಡನೇ ಅತ್ಯುನ್ನತ ಪ್ರಶಸ್ತಿಯಾಗಿದೆ. ಈ ಪ್ರಶಸ್ತಿಗೆ ಭಾಜನರಾದವರ ಪಟ್ಟಿ ಇಂತಿದೆ.

| | | |
|---|---|---|
| ಕೆ.ಜೆ. ಯೇಸುದಾಸ್ | ಕಲೆ-ಸಂಗೀತ | ಕೇರಳ |
| ಸದ್ಗುರು ಜಗ್ಗಿ ವಾಸುದೇವ್ | ಇತರೆ-ಅಧ್ಯಾತ್ಮ | ತಮಿಳುನಾಡು |
| ಶರದ್ ಪವಾರ್ | ಸಾರ್ವಜನಿಕ ಆಡಳಿತ | ಮಹಾರಾಷ್ಟ್ರ |
| ಮುರಳಿ ಮನೋಹರ ಜೋಶಿ | ಸಾರ್ವಜನಿಕ ಆಡಳಿತ | ಉತ್ತರ ಪ್ರದೇಶ |

| | | |
|---|---|---|
| ಪ್ರೊ. ಉಡುಪಿ ರಾಮಚಂದ್ರ ರಾವ್ | ವಿಜ್ಞಾನ ಮತ್ತು ತಂತ್ರಜ್ಞಾನ | ಕರ್ನಾಟಕ |
| ಸುಂದರ್ ಲಾಲ್ ಪಟ್ವಾ (ಮರಣೋತ್ತರ) | ಸಾರ್ವಜನಿಕ ಆಡಳಿತ | ಮಧ್ಯಪ್ರದೇಶ |
| ಪಿ.ಎ. ಸಂಗ್ಮಾ (ಮರಣೋತ್ತರ) | ಸಾರ್ವಜನಿಕ ಆಡಳಿತ | ಮೇಘಾಲಯ |

| | ಪದ್ಮಭೂಷಣ | |
|---|---|---|
| **ಹೆಸರು** | **ಕ್ಷೇತ್ರ** | **ರಾಜ್ಯ** |
| ವಿಶ್ವ ಮೋಹನ್ ಭಟ್ | ಕಲೆ-ಸಂಗೀತ | ರಾಜಸ್ತಾನ |
| ಪ್ರೊ. ದೇವಿ ಪ್ರಸಾದ್ ದ್ವಿವೇದಿ | ಸಾಹಿತ್ಯ ಮತ್ತು ಶಿಕ್ಷಣ | ಉತ್ತರ ಪ್ರದೇಶ |
| ಟೆಹೆಮ್ಟನ್ ಉದ್ವಾಡಿಯಾ | ವೈದ್ಯಕೀಯ | ಮಹಾರಾಷ್ಟ್ರ |
| ರತ್ನ ಸುಂದರ್ ಮಹಾರಾಜ್ | ಇತರೆ-ಅಧ್ಯಾತ್ಮ | ಗುಜರಾತ್ |
| ಸ್ವಾಮಿ ನಿರಂಜನ ನಂದ ಸರಸ್ವತಿ | ಇತರೆ-ಯೋಗ | ಬಿಹಾರ |
| ಎಚ್.ಆರ್.ಎಚ್. ಪ್ರಿನ್ಸೆಸ್ ಮಹಾ ಚಕ್ರಿ ಸಿರಿಂಧೋರ್ನ್ (ವಿದೇಶಿ ಪ್ರಜೆ) | ಸಾಹಿತ್ಯ ಮತ್ತು ಶಿಕ್ಷಣ | ಥಾಯ್ಲೆಂಡ್ |
| ಚೋ ರಾಮಸ್ವಾಮಿ (ಮರಣೋತ್ತರ) | ಪತ್ರಿಕೋದ್ಯಮ | ತಮಿಳುನಾಡು |

**ಕರ್ನಾಟಕದ ಸಾಧಕರು**

| | |
|---|---|
| ಭಾರತಿ ವಿಷ್ಣುವರ್ಧನ್ | ಕಲೆ-ಸಿನಿಮಾ |
| ಸುಕ್ರಿ ಬೊಮ್ಮಗೌಡ | ಕಲೆ-ಸಂಗೀತ |
| ಪ್ರೊ. ಜಿ. ವೆಂಕಟಸುಬ್ಬಯ್ಯ | ಸಾಹಿತ್ಯ ಮತ್ತು ಶಿಕ್ಷಣ |
| ಚ.ಮೂ. ಕೃಷ್ಣ ಶಾಸ್ತ್ರಿ | ಸಾಹಿತ್ಯ ಮತ್ತು ಶಿಕ್ಷಣ |
| ಗಿರೀಶ್ ಭಾರದ್ವಾಜ್ | ಸಮಾಜ ಸೇವೆ |
| ಶೇಖರ್ ನಾಯ್ಕ್ | ಕ್ರೀಡೆ-ಕ್ರಿಕೆಟ್ |
| ವಿಕಾಸ ಗೌಡ | ಕ್ರೀಡೆ- ಡಿಸ್ಕಸ್ ತ್ರೋ |

**ಐದು ಸಾಹಿತಿಗಳಿಗೆ 2016ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ**



2016ನೇ ಸಾಲಿನ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿಗೆ ಐವರು ಸಾಹಿತಿಗಳನ್ನು ಆಯ್ಕೆಮಾಡಲಾಗಿದೆ. ಪ್ರಶಸ್ತಿಗಯು ತಲಾ 50 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

**ಪ್ರಶಸ್ತಿಗೆ ಆಯ್ಕೆಯಾದವರು:**

- ಡಾ. ನಾಗೇಶ್ ಹೆಗ್ಗಡೆ (ವಿಜ್ಞಾನ ಸಾಹಿತ್ಯ)
- ಪ್ರೊ.ಓ.ಎಲ್. ನಾಗಭೂಷಣ ಸ್ವಾಮಿ (ವಿಮರ್ಶಕ)
- ಡಾ.ಎಚ್.ಎಸ್. ಶ್ರೀಮತಿ (ವಿಮರ್ಶಕರು)
- ಪ್ರೊ.ಓ.ಎಲ್.ನಾಗಭೂಷಣ ಸ್ವಾಮಿ,
- ಕಥೆಗಾರ ಬಸವರಾಜು ಕುಕ್ಕರಹಳ್ಳಿ,
- ಕಾದಂಬರಿಕಾರ ಡಾ.ಬಾಳಾಸಾಹೇಬ ಲೋಕಾಪುರ

**ಕಮಲಾಪುರ ನಿರ್ಸಗಧಾಮದಲ್ಲಿ ಮೂರನೇ "ಹಕ್ಕಿ ಹಬ್ಬ"**



ಕಮಲಾಪುರ ಬಳಿಯ ನಿಸರ್ಗಧಾಮದಲ್ಲಿ ಎರಡು ದಿನ 'ಕರ್ನಾಟಕ ಹಕ್ಕಿ ಹಬ್ಬ'ಕ್ಕೆ ಚಾಲನೆ ನೀಡಲಾಯಿತು. ದೇಶದ ವಿವಿಧೆಡೆಯ 300ಕ್ಕೂ ಹೆಚ್ಚು ಪಕ್ಷಿ ತಜ್ಞರು, ಛಾಯಾ ಗ್ರಾಹಕರು, ಪಕ್ಷಿ ಸಂಶೋಧಕರು ಭಾಗವಹಿಸಲಿದ್ದಾರೆ. ನೂರಕ್ಕೂ ಹೆಚ್ಚು ಅಪರೂಪದ ಪಕ್ಷಿಗಳ ಛಾಯಾಚಿತ್ರ ಪ್ರದರ್ಶನ, ಸಂವಾದ ನಡೆಯಲಿದೆ. ಹಂಪಿ, ದರೋಜಿ ಕರಡಿಧಾಮ, ಹಂಪಿ ಕನ್ನಡ ವಿಶ್ವ ವಿದ್ಯಾಲಯ ಮತ್ತು ಕಮಲಾಪುರ ಕೆರೆ ಬಳಿ ಪಕ್ಷಿ ವೀಕ್ಷಣೆ ಕಾರ್ಯ ಕ್ರಮವಿದ್ದು, ಹಕ್ಕಿಗಳಿಗೆ ಸಂಬಂಧಿ ಸಿದ ಚಲನಚಿತ್ರ ಪ್ರದರ್ಶನ ನಡೆಯಲಿದೆ.

**ಕರ್ನಾಟಕ ಹಕ್ಕಿ ಹಬ್ಬ:**

- ಕರ್ನಾಟಕ ಅರಣ್ಯ ಇಲಾಖೆ, ದರೋ ಜಿ ಕರಡಿ ಧಾಮ ಹಾಗೂ ಕರ್ನಾಟಕ ಪರಿಸರ ಪ್ರವಾಸೋದ್ಯಮ ಅಭಿವೃದ್ಧಿ ಮಂಡಳಿ ಸಹಯೋಗದಲ್ಲಿ ಈ ಬಾರಿಯ ಹಕ್ಕಿ ಹಬ್ಬವನ್ನು ಆಯೋಜಿಸಲಾಗಿದೆ.
- 2015 ಜನವರಿಯಲ್ಲಿ ರಂಗನ ತಿಟ್ಟುವಿನಲ್ಲಿ ಮೊದಲನೇ ಕರ್ನಾಟಕ ಹಕ್ಕಿ ಹಬ್ಬವನ್ನು ಆಯೋಜಿಸಲಾಗಿತ್ತು.
- ಎರಡನೇ ಕರ್ನಾಟಕ ಹಕ್ಕಿ ಹಬ್ಬ ದಾಂಡೇಲಿಯಲ್ಲಿ 2016ರಲ್ಲಿ ನಡೆದಿತ್ತು.

**<u>ಕ್ಯೋಟೋ ಶಿಷ್ಟಾಚಾರದಡಿ ಎರಡನೇ ಬದ್ದ ಅವಧಿ ಅನುಮೋದನೆಗೆ ಸಚಿವ ಸಂಪುಟ ಒಪ್ಪಿಗೆ</u>**



ಹಸಿರು ಮನೆ ಅನಿಲಗಳ ಹೊರಸೂಸುವಿಕೆಯನ್ನು ತಗ್ಗಿಸುವ "ಕ್ಯೋಟೋ ಶಿಷ್ಟಾಚಾರ (Kyoto Protocol)"ದ ಎರಡನೇ ಬದ್ದತೆ ಅವಧಿ (Second Commitment Period)ಯನ್ನು ಅನುಮೋದಿಸಲು ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ಕ್ಯೋಟೋ ಶಿಷ್ಟಾಚಾರ (Kyoto Protocol)"ದ ಎರಡನೇ ಬದ್ದ ಅವಧಿಯನ್ನು 2012ರಲ್ಲಿ ಅಳವಡಿಸಿಕೊಳ್ಳಲಾಗಿದ್ದು, 2020ರ ವೇಳಗೆ ಅಂತ್ಯಗೊಳ್ಳಲಿದೆ. ಇದುವರೆಗೆ 75 ರಾಷ್ಟ್ರಗಳು ಇದಕ್ಕೆ ಅನುಮೋದನೆ ನೀಡಿವೆ.

**ಅನುಕೂಲ:**

- ಪರಿಸರ ಬದಲಾವಣೆ ಬದ್ದತೆಗಳನ್ನು ತಲುಪಲು ಅಭಿವೃದ್ದಿ ರಾಷ್ಟ್ರಗಳ ಮೇಲೆ ಒತ್ತಡ ಹಾಕಲು ಈ ನಿರ್ಧಾರ ಸಹಕಾರಿಯಾಗಲಿದೆ.
- ಜಾಗತಿಕ ಮಟ್ಟದಲ್ಲಿ ಪರಿಸರ ಸಂರಕ್ಷಣೆ ಮತ್ತು ಹವಾಮಾನ ನೀತಿ ಜಾರಿಗೊಳಿಸಲು ಭಾರತದ ಬದ್ದತೆಯನ್ನು ಪ್ರದರ್ಶಿಸುತ್ತದೆ.
- ಭಾರತದ ಈ ನಿರ್ಣಯ ಇತರೆ ರಾಷ್ಟ್ರಗಳಿಗೆ ಮಾದರಿಯಾಗಲಿದ್ದು, ಅಭಿವೃದ್ದಿ ರಾಷ್ಟ್ರಗಳು ಒಪ್ಪಂದವನ್ನು ಅನುಮೋದಿಸಲು ಪ್ರೇರಣೆಯಾಗಲಿದೆ.

**ಕ್ಯೋಟೋ ಶಿಷ್ಟಾಚಾರ:**

- ಕ್ಯೋಟೋ ಶಿಷ್ಟಾಚಾರವನ್ನು 1997 ರಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಹಸಿರು ಮನೆ ಅನಿಲ ಪ್ರಮಾಣವನ್ನು ತಗ್ಗಿಸಿ ಜಾಗತಿಕ ತಾಪಮಾನ ಹೆಚ್ಚಳ ವಿರುದ್ದ ಹೋರಾಡುವುದು ಇದರ ಗುರಿ. 2005 ರಿಂದ ಶಿಷ್ಟಾಚಾರ ಜಾರಿಗೆ ಬಂದಿದ್ದು, ಇದರ ಮೊದಲ ಬದ್ದತೆ ಅವಧಿ 2008 ರಿಂದ 2012 ರವರೆಗೆ ಜಾರಿಯಲ್ಲಿತ್ತು.

- ಎರಡನೇ ಬದ್ಧತೆ ಅವಧಿಯನ್ನು ದೋಹಾ ಕ್ಯೋಟೋ ಶಿಷ್ಟಾಚಾರ ತಿದ್ದುಪಡಿಯಡಿ 2012 ರಲ್ಲಿ ಅಳವಡಿಸಿಕೊಳ್ಳಲಾಗಿದ್ದು, ಇದರ ಅವಧಿ 2012-2020.
- 2012ರಲ್ಲಿ, ಹೊರಸೂಸುವಿಕೆಯನ್ನು 1990ರಲ್ಲಿದ್ದ ಮಟ್ಟಕ್ಕಿಂತಲೂ ಸರಾಸರಿ 5.2%ರಷ್ಟು ಕಡಿಮೆ ಮಾಡುವುದು ಎಂದು ಒಪ್ಪಿಕೊಳ್ಳಲಾಗಿತ್ತು.
- ಭಾರತದಂತಹ ಅಭಿವೃದ್ದಿ ಹೊಂದುತ್ತಿರುವ ರಾಷ್ಟ್ರಗಳಿಗೆ ಈ ಶಿಷ್ಟಾಚಾರದಡಿ ಯಾವುದೇ ನಿರ್ಬಂಧ ಅಥವಾ ಗುರಿ ಇಲ್ಲ.

## ಸುದ್ದಿಯಲ್ಲಿರುವ ವ್ಯಕ್ತಿಗಳು

### ಏರ್ ಚೀಫ್ ಮಾರ್ಷಲ್ ಬಿ.ಎಸ್.ಧನೋವಾ ಅಧಿಕಾರ ಸ್ವೀಕಾರ



ಏರ್ ಚೀಫ್ ಮಾರ್ಷಲ್ ಬೀರೇಂದರ್ ಸಿಂಗ್ ದನೋವಾ ರವರು ಚೀಫ್ ಆಫ್ ಏರ್ ಸ್ಟಾಫ್ ನ 22ನೇ ಏರ್ ಚೀಪ್ ಮಾರ್ಷಲ್ ಆಗಿ ಅಧಿಕಾರ ವಹಿಸಿಕೊಂಡರು. ಅರೂಪ್ ರಹ ರವರು ಸೇವೆಯಿಂದ ನಿವೃತ್ತರಾದ ಕಾರಣ ಅವರ ಉತ್ತರಾಧಿಕಾರಿಯಾಗಿ ಧನೋವಾ ನೇಮಕಗೊಂಡಿದ್ದರು.

**ಬಿ.ಎಸ್.ಧನೋವಾ**:

- ಧನೋವಾ ರವರು ರಾಷ್ಟ್ರೀಯ ಇಂಡಿಯನ್ ಮಿಲಿಟರಿ ಕಾಲೇಜು ಹಾಗೂ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯ ಹಳೆಯ ವಿದ್ಯಾರ್ಥಿ. 1978ರಲ್ಲಿ ಭಾರತೀಯ ವಾಯುಪಡೆಯ ಫೈಟರ್ ವಿಭಾಗಕ್ಕೆ ನಿಯೋಜನೆಗೊಂಡರು.
- ಆನಂತರ ವಿವಿಧ ತುಕಡಿಗಳಲ್ಲಿ ಧನೋವಾ ರವರು ಸೇವೆ ಸಲ್ಲಿಸಿದ್ದಾರೆ. ವೈಸ್ ಚೀಫ್ ಆಗಿ ನೇಮಕವಾಗುವ ಮುಂಚೆ ಅವರು ಸೌಥ್ ವೆಸ್ಟರ್ನ್ ಏರ್ ಕಮಾಂಡ್ ನ ಏರ್ ಇನ್ ಚೀಫ್ ದಕ್ಷಿಣ ಪಶ್ಚಿಮ ಏರ್ ಕಮಾಂಡ್ ಅಧಿಕಾರಿಯಾಗಿದ್ದರು.
- ಇದಕ್ಕೂ ಮುಂಚೆ ಡಿಫೆನ್ಸ್ ಸರ್ವೀಸ್ಸ್ ಸ್ಟಾಫ್ ಕಾಲೇಜಿನ ಮುಖ್ಯ ಭೋದಕರಾಗಿ ಸೇವೆ ಸಲ್ಲಿಸಿದ್ದರು.
- ಕಾರ್ಗಿಲ್ ಯುದ್ದ ಸಮಯದಲ್ಲಿ ಪರ್ವತ ಪ್ರದೇಶದಲ್ಲಿ ರಾತ್ರಿ ಕಾರ್ಯಾಚರಣೆ ತುಕಡಿಯ ಮುಂದಾಳತ್ವವನ್ನು ವಹಿಸಿದ್ದರು.
- ಕಾರ್ಯನೈಪುಣ್ಯತೆಗಾಗಿ ಧನೋವಾ ರವರಿಗೆ ಅತಿ ವಿಶಿಷ್ಟ ಸೇವಾ ಪದಕ, ಯುದ್ದ ಸೇವಾ ಪದಕ ಮತ್ತು ವಾಯುಸೇನಾ ಪದಕ ಲಭಿಸಿದೆ.

### ಆರ್ಮಿ ಆಫ್ ಚೀಫ್ ಸ್ಟಾಫ್ ಆಗಿ ಬಿಪಿನ್ ರಾವತ್ ಅಧಿಕಾರ ಸ್ವೀಕಾರ



ಲೆಫ್ಟಿನೆಂಟ್ ಜನರಲ್ ಬಿಪಿನ್ ರಾವತ್ ಅವರನ್ನು ಸೇನಾ ಪಡೆಯ ನೂತನ ಮುಖ್ಯಸ್ಥರಾಗಿ ಅಧಿಕಾರವಹಿಸಿಕೊಂಡರು. ಜನರಲ್ ದಲ್ಬೀರ್ ಸಿಂಗ್ ಸುಹಾಗ್ ರವರು ಸೇವೆಯಿಂದ ನಿವೃತ್ತರಾದ ಕಾರಣ ಅವರ ಉತ್ತರಾಧಿಕಾರಿಯಾಗಿ ರಾವತ್ ಅಧಿಕಾರವನ್ನು ವಹಿಸಿಕೊಂಡರು. ಸೇನಾ ಪಡೆಯ ಉಪ ಮುಖ್ಯಸ್ಥರಾಗಿರುವ ರಾವತ್ ಅವರು, ಇಬ್ಬರು ಹಿರಿಯ ಅಧಿಕಾರಿಗಳನ್ನು (ಅತ್ಯಂತ ಹಿರಿಯ ಸೇನಾ ಕಮಾಂಡರ್, ಪೂರ್ವ ಕಮಾಂಡ್‌ನ ಮುಖ್ಯಸ್ಥ ಪ್ರವೀಣ್ ಬಕ್ಷಿ ಮತ್ತು ದಕ್ಷಿಣ ಕಮಾಂಡ್‌ನ ಮುಖ್ಯಸ್ಥ ಪಿ.ಎಂ. ಹರಿಜ್) ಹಿಂದಿಕ್ಕಿ ಭೂ ಸೇನೆಯ ಮುಖ್ಯಸ್ಥರ ಹುದ್ದೆಗೆ ನೇಮಕವಾಗಿದ್ದಾರೆ.

**ಲೆಫ್ಟಿನೆಂಟ್ ಜನರಲ್ ಬಿಪಿನ್ ರಾವತ್:**

- ಬಿಪಿನ್ ರಾವತ್ ಜನಿಸಿದ್ದು ಯೋಧರ ಕುಟುಂಬದಲ್ಲಿ. ಬಿಪಿನ್ ರಾವತ್ ತಂದೆ ಲೆ|ಜ| ಎಲ್.ಎಸ್. ರಾವತ್ ಕೂಡಾ ಸೇನೆಯಲ್ಲಿ ಸೇವೆ ಸಲ್ಲಿಸಿದವರು.
- 'ಇಂಡಿಯನ್ ಮಿಲಿಟರಿ ಅಕಾಡೆಮಿ'ಯಲ್ಲಿ 1978ರಲ್ಲಿ ತರಬೇತಿ ಪಡೆದು ಉತ್ತೀರ್ಣರಾಗುವಾಗಿ ಅಲ್ಲಿ 'ಸೋರ್ಡ್ ಆಫ್ ಆನರ್' ಗೌರವಕ್ಕೆ ಪಾತ್ರರಾದರು.
- 1978ರಲ್ಲಿ 11 ಗೋರ್ಖಾ ರೈಫಲ್ಸ್'ನ 5ನೇ ಬೆಟಾಲಿಯನ್'ಗೆ ಸೇರಿ ಸೇವೆ ಆರಂಭ. 37 ವರ್ಷಗಳ ಸೇವೆಯಲ್ಲಿ ಭಾರತದ ವಿವಿಧ ಭಾಗಗಳಲ್ಲಿ, ವಿವಿಧ ಹುದ್ದೆಯಲ್ಲಿ ಕಾರ್ಯನಿರ್ವಹಣೆ. ಭಾರತದ ಪೂರ್ವ ಗಡಿ ಹಾಗೂ ಕಾಶ್ಮೀರದಲ್ಲಿ ಭಯೋತ್ಪಾದನೆಯನ್ನು ಹತ್ತಿಕ್ಕುವಲ್ಲಿ ಪ್ರಮುಖ ಪಾತ್ರ.
- ಈ ಮಧ್ಯೆ ವಿಶ್ವಸಂಸ್ಥೆಯ ಮಿಶನ್ ಮೇಲೆ ಕಾಂಗೋದಲ್ಲಿ ಕಠಿಣ ಸವಾಲುಗಳ ನಡುವೆಯೂ ಅಪ್ರತಿಮ ಸೇವೆ ಸಲ್ಲಿಸಿ ಅಂತರಾಷ್ಟ್ರೀಯ ಗೌರವಗಳಿಗೆ ಪಾತ್ರವಾಗಿದ್ದಾರೆ. ಭಾರತದಲ್ಲಿಯೂ ಹಲವಾರು ಗೌರವ ಹಾಗೂ ಶೌರ್ಯ ಪ್ರಶಸ್ತಿಗಳಿಗೆ ಭಾಜನ. 1 ಜನವರಿ 2016ರಿಂದ ಭೂಸೇನೆಯ ಉಪ-ಮುಖ್ಯಸ್ಥನಾಗಿ ಅಧಿಕಾರ ಸ್ವೀಕಾರ
- 17 ಡಿಸೆಂಬರ್ 2016ಗೆ ನೂತನ ಭೂಸೇನಾ ಮುಖ್ಯಸ್ಥರಾಗಿ ನೇಮಕ.

**<u>ದೆಹಲಿ ಪೊಲೀಸ್ ಕಮೀಷನರ್ ಅಲೋಕ್ ಕುಮಾರ್ ವರ್ಮಾ ಸಿಬಿಐನ ನೂತನ ನಿರ್ದೇಶಕ</u>**



ಸಿಬಿಐ ನೂತನ ನಿರ್ದೇಶಕರಾಗಿ ದೆಹಲಿ ಪೊಲೀಸ್ ಆಯುಕ್ತ ಅಲೋಕ್ ಕುಮಾರ್ ವರ್ಮಾ ಅವರನ್ನು ನೇಮಿಸಲಾಗಿದೆ. ಮುಂದಿನ ಎರಡು ವರ್ಷಗಳ ಕಾಲ ವರ್ಮಾ ರವರು ನಿರ್ದೇಶಕರಾಗಿ ಸೇವೆ ಸಲ್ಲಿಸಲಿದ್ದಾರೆ. ಪ್ರಧಾನಿ ನರೇಂದ್ರ ಮೋದಿ, ಸುಪ್ರೀಂ ಕೋರ್ಟ್ ಮುಖ್ಯನ್ಯಾಯಾಮೂರ್ತಿ ಜೆ.ಎಸ್.ಖೇಹರ್ ಹಾಗೂ ಕಾಂಗ್ರೆಸ್ ಪಕ್ಷದ ನಾಯಕ ಮಲ್ಲಿಕಾರ್ಜುನ್ ಖರ್ಗೆ ನೇತೃತ್ವದ ಮೂವರು ಜನರನ್ನು ಒಳಗೊಂಡ ಸಮಿತಿ ವರ್ಮಾ ಅವರನ್ನು ಈ ಹುದ್ದೆಗೆ ನೇಮಕ ಮಾಡಿದೆ. ನಿರ್ದೇಶಕರಾಗಿದ್ದ ಅನಿಲ್ ಸಿನ್ಹಾ ಡಿ. 2ರಂದು ನಿವೃತ್ತಿಯಾಗಿದ್ದರು. ಅಂದಿನಿಂದ ರಾಕೇಶ್ ಆಸ್ತಾನಾ ಅವರು ಹಂಗಾಮಿ ನಿರ್ದೇಶಕರಾಗಿದ್ದರು.

**ಅಲೋಕ್ ಕುಮಾರ್ ವರ್ಮಾ:**

- ಅಲೋಕ್ ಕುಮಾರ್ ವರ್ಮಾ ರವರು 1979ನೇ ಬ್ಯಾಚ್‌ನ ಅರುಣಾಚಲ ಪ್ರದೇಶ-ಗೋವಾ- ಮಿಜೊರಾಂ ಹಾಗೂ ಕೇಂದ್ರಾಡಳಿತ ಪ್ರದೇಶದ ಕೇಡರ್‌ನ ಅಧಿಕಾರಿ.
- ದೆಹಲಿ ಪೊಲೀಸ್ ಕಮೀಷನರ್ ಆಗಿ ನೇಮಕವಾಗುವ ಮುಂಚೆ ತಿಹಾರ್ ಜೈಲಿನ ಡೈರೆಕ್ಟರ್ ಜನರಲ್ ಆಗಿ ಕಾರ್ಯನಿರ್ವಹಿಸುತ್ತಿದ್ದರು.
- ದೆಹಲಿ ಪೊಲೀಸ್ ಇಲಾಖೆಯಲ್ಲಿ ವಿವಿಧ ಹುದ್ದೆಗಳಲ್ಲಿ ಇವರು ಸೇವೆ ಸಲ್ಲಿಸಿ ಅನುಭವವನ್ನು ಹೊಂದಿದ್ದಾರೆ. ದೆಹಲಿಯ ಸೌಥ್ ಡಿಸ್ಟ್ರಿಕ್ ನ ಡಿಸಿಪಿ ಯಾಗಿ, ಕ್ರೈಂ ವಿಭಾಗದ ಜೆಸಿ ಯಾಗಿ, ಅಪರಾಧ ವಿಭಾಗಧಿಕಾರಿಯಾಗಿ ಸಹ ಕಾರ್ಯನಿರ್ವಹಿಸಿದ್ದರು.
- ಅಂಡಮಾನ್ ಮತ್ತು ನಿಕೋಬರ್ ದ್ವೀಪ ಪ್ರದೇಶ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಹಾಗೂ ಪುದುಚೇರಿಯಲ್ಲಿ ಡೈರೆಕ್ಟರ್ ಜನರಲ್ ಆಗಿ ಸೇವೆ ಸಲ್ಲಿಸಿದ್ದಾರೆ.

## ನಳಂದ ವಿಶ್ವವಿದ್ಯಾಲಯದ ನೂತನ ಕುಲಪತಿಯಾಗಿ ಡಾ. ವಿಜಯ್ ಭಟ್ಕರ್ ನೇಮಕ



ಭಾರತದ ಮೊದಲ ಸೂಪರ್ ಕಂಪ್ಯೂಟರ್ ಪರಮ್ ಸರಣಿಯ ವಾಸ್ತುಶಿಲ್ಪಿ ಎನಿಸಿರುವ ಡಾ.ವಿಜಯ್ ಭಟ್ಕರ್ ಅವರನ್ನು ನಳಂದ ವಿಶ್ವವಿದ್ಯಾಲಯದ ನೂತನ ಕುಲಪತಿಯನ್ನಾಗಿ ರಾಷ್ಟ್ರಪತಿ ಪ್ರಣಭ್ ಮುಖರ್ಜಿ ಅವರು ನೇಮಕ ಮಾಡಿದ್ದಾರೆ. ನಳಂದ ವಿಶ್ವವಿದ್ಯಾಲಯ ಕಾಯಿದೆ ಸೆಕ್ಷನ್ 11 (3) ಪ್ರಕಾರ ಭಟ್ಕರ್ ಅವರ ಅಧಿಕಾರ ಅವಧಿ ಮೂರು ವರ್ಷ ಇರಲಿದೆ. ಭಟ್ಕರ್ ಅವರು ಜಾರ್ಜ್ ಯೆಓ ಅವರ ಉತ್ತರಾಧಿಕಾರಿಯಾಗಿ ನೇಮಕಗೊಂಡಿದ್ದಾರೆ. ಸಿಂಗಪುರದ ಮಾಜಿ ವಿದೇಶಾಂಗ ಸಚಿವರಾದ ಜಾರ್ಜ್ ಯೆಓ ರವರು ವಿಶ್ವವಿದ್ಯಾಲಯದ ಮಂಡಳಿಯನ್ನು ರಚಿಸಿದ ನಂತರ ರಾಜೀನಾಮೆಯನ್ನು ನೀಡಿದ್ದರು.

**ಡಾ. ವಿಜಯ್ ಭಟ್ಕರ್:**

- ಡಾ. ವಿಜಯ್ ಭಟ್ಕರ್ ಅವರು ದೇಶದ ಪ್ರಖ್ಯಾತ ವಿಜ್ಞಾನಿಗಳಲ್ಲಿ ಒಬ್ಬರು. ಭಾರತದ ಮೊದಲ ಸೂಪರ್ ಕಂಪ್ಯೂಟರ್ "ಪರಮ್ ಸರಣಿ"ಯ ವಾಸ್ತುಶಿಲ್ಪಿ ಎಂದೇ ಇವರು ಪ್ರಸಿದ್ದರಾಗಿದ್ದಾರೆ.
- ಭಾರತದ ಸೂಪರ್ ಕಂಪ್ಯೂಟಿಂಗ್ ಅಭಿವೃದ್ದಿ ಉಪಕ್ರಮವಾದ ಸಿ-ಡಾಕ್ (C-DAC)ನ ಸಂಸ್ಥಾಪಕ ಕಾರ್ಯನಿರ್ವಾಹಕ ನಿರ್ದೇಶಕರಾಗಿದ್ದರೆ. ಅಲ್ಲದೇ ಹಲವಾರು ರಾಷ್ಟ್ರಮಟ್ಟದ ಸಂಸ್ಥೆಗಳ ಸ್ಥಾಪನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.
- ಕೇಂದ್ರ ಸರ್ಕಾರದ ಸಚಿವ ಸಂಪುಟದ ವೈಜ್ಞಾನಿಕ ಸಲಹಾ ಸಮಿತಿಯ ಸದಸ್ಯರಾಗಿ ಹಾಗೂ ಸಿಎಸ್ಐಆರ್ ನ ಆಡಳಿತ ಮಂಡಳಿಯ ಸದಸ್ಯರಾಗಿ ಸಹ ಕಾರ್ಯನಿರ್ವಹಿಸಿದ್ದರು.
- ಭಟ್ಕರ್ ಅವರಿ ಪದ್ಮ ವಿಭೂಷಣ, ಮಹಾರಾಷ್ಟ್ರ ಭೂಷಣ, ಪದ್ಮ ಭೂಷಣ ಪ್ರಶಸ್ತಿಗಳು ಲಭಿಸಿವೆ.

**ನಳಂದ ವಿಶ್ವವಿದ್ಯಾಲಯ:**

- ಪ್ರಾಚೀನ ಭಾರತದಲ್ಲಿ ವಿಶ್ವ ಪ್ರಸಿದ್ದ ಹೊಂದಿದ್ದ ಬಿಹಾರದ ರಾಜ್ ಘರ್ ನಲ್ಲಿದ್ದ ನಳಂದ ವಿಶ್ವವಿದ್ಯಾಲಯವನ್ನು ಪುನರ್ ಜ್ಜೀವನಗೊಳಿಸಿ ನಳಂದ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಗಿದೆ.
- ಭಾರತದ ಮಾಜಿ ರಾಷ್ಟ್ರಪತಿ ದಿವಂಗತ ಅಬ್ದುಲ್ ಕಲಾಂ ಅವರು ಈ ವಿಶ್ವವಿದ್ಯಾಲಯದ ಪರಿಕಲ್ಪನೆಯನ್ನು ಹುಟ್ಟುಹಾಕಿದ ಮೊದಲಿಗರು.
- ನಳಂದ ವಿಶ್ವವಿದ್ಯಾಲಯ ಕಾಯಿದೆ-2010 ರಡಿ ಸ್ಥಾಪಿಸಿಲಾಗಿದ್ದು, ವಿದೇಶಾಂಗ ವ್ಯವಹಾರ ಸಚಿವಾಲಯದಡಿ ಕಾರ್ಯನಿರ್ವಹಿಸುತ್ತಿದೆ.

ಪ್ರಾಚೀನ ನಳಂದ ವಿಶ್ವವಿದ್ಯಾಲಯವನ್ನು 427AD ಯಲ್ಲಿ ಸ್ಥಾಪಿಸಲಾಗಿದೆ. ಗುಪ್ತರ ದೊರೆ ಸಕ್ರದಿತ್ಯ ಕಾಲದಲ್ಲಿ ಈ ವಿಶ್ವವಿದ್ಯಾಲಯವನ್ನು ಸ್ಥಾಪಿಸಲಾಯಿತು. ಇದು ಭಾರತದ ಮೊದಲ ವಿಶ್ವವಿದ್ಯಾಲಯಗಳಲ್ಲಿ ಒಂದಾಗಿದೆ. ಒಂದು ಕಾಲದಲ್ಲಿ ಜನಪ್ರಿಯದ ಉತ್ತುಂಗದಲ್ಲಿದ್ದ ಈ ವಿಶ್ವವಿದ್ಯಾಲಯದಲ್ಲಿ ಶ್ರೀಲಂಕಾ, ಚೀನಾ, ಕೊರಿಯಾ ಮತ್ತು ಮಧ್ಯ ಏಷ್ಯಾ ರಾಷ್ಟ್ರಗಳಿಂದ ವಿದ್ಯಾರ್ಥಿಗಳು ಅಭ್ಯಾಸ ನಡೆಸುತ್ತಿದ್ದರು.

## ಭಾರತೀಯ ರಿಸರ್ವ್ ಬ್ಯಾಂಕ್ ನ ಕಾರ್ಯನಿರ್ವಾಹಕ ನಿರ್ದೇಶಕಿಯಾಗಿ ಸುರೇಖಾ ಮರಾಂಡಿ ನೇಮಕ




ಭಾರತೀಯ ರಿಸರ್ವ್ ಬ್ಯಾಂಕ್ ಸುರೇಖಾ ಮರಾಂಡಿ ಅವರನ್ನು ಬ್ಯಾಂಕಿನ ಕಾರ್ಯನಿರ್ವಾಹಕ ನಿರ್ದೇಶಕಿಯನ್ನಾಗಿ ನೇಮಕಮಾಡಿದೆ. ಯು.ಎಸ್.ಪಾಲಿವಾಲ್ ರವರು ಡಿಸೆಂಬರ್ 31, 2016 ರಂದು ನಿವೃತ್ತರಾದ ಕಾರಣ ಅವರ ಸ್ಥಾನಕ್ಕೆ ಸುರೇಖಾ ಅವರನ್ನು ನೇಮಕಮಾಡಲಾಗಿದೆ. ಸುರೇಖಾ ಅವರು ಗ್ರಾಹಕ ಶಿಕ್ಷಣ ಮತ್ತು ಭದ್ರತೆ ಇಲಾಖೆ ಹಾಗೂ ಆರ್ಥಿಕ ಸೇರ್ಪಡೆ ಮತ್ತು ಅಭಿವೃದ್ಧಿ ಇಲಾಖೆಯ ಉಸ್ತುವಾರಿಯನ್ನು ವಹಿಸಿಕೊಳ್ಳಲಿದ್ದಾರೆ.

**ಸುರೇಖಾ ಮರಾಂಡಿ:**

- ಈ ನೇಮಕಾತಿಗೆ ಮುಂಚೆ ಸುರೇಖಾ ಅವರು ಭಾರತೀಯ ರಿಸರ್ವ್ ಬ್ಯಾಂಕಿನಲ್ಲಿ ಚೀಫ್ ಜನರಲ್ ಮ್ಯಾನೇಜರ್ ಹಾಗೂ ಮುಖ್ಯ ಜಾಗೃತಿ ಅಧಿಕಾರಿಯಾಗಿ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿದ್ದರು.
- ಆರ್ಥಿಕ ಸೇರ್ಪಡೆ ಮತ್ತು ಅಭಿವೃದ್ಧಿ, ಮಾನವ ಸಂಪನ್ಮೂಲ ನಿರ್ವಹಣೆ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸಿರುವ ಅಪಾರ ಅನುಭವವನ್ನು ಹೊಂದಿದ್ದಾರೆ.
- ಯುನೈಟೆಡ್ ಬ್ಯಾಂಕ್ ಮತ್ತು ಬ್ಯಾಂಕ್ ಆಫ್ ಬರೋಡ ಮಂಡಳಿಯಲ್ಲಿಯೂ ಸಹ ಸೇವೆ ಸಲ್ಲಿಸಿದ್ದಾರೆ. ಜಾಧವ್ ಪುರ ವಿಶ್ವವಿದ್ಯಾಲಯದಿಂದ ಇವರು ಸ್ನಾತಕೋತ್ತರ ಪದವಿಯನ್ನು ಪಡೆದಿದ್ದಾರೆ.

ಭಾರತೀಯ ರಿಸರ್ವ್ ಬ್ಯಾಂಕ್ 11 ಕಾರ್ಯನಿರ್ವಾಹಕ ನಿರ್ದೇಶಕರನ್ನು ಒಳಗೊಂಡಿದ್ದು, ವಿವಿಧ ಇಲಾಖೆಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊತ್ತಿರುತ್ತಾರೆ.

## ಸಾವಿತ್ರಿಭಾಯಿ ಪುಲೆ ರವರಿಗೆ ಗೂಗಲ್ ನಿಂದ ಗೌರವ



19ನೇ ಶತಮಾನದ ಸಾಮಾಜಿಕ ಸುಧಾರಕಿ ಸಾವಿತ್ರಿ ಭಾಯಿ ಪುಲೆ ರವರಿಗೆ ಸರ್ಚ್ ಎಂಜಿನ್ ದೈತ್ಯ ಗೂಗಲ್ ತನ್ನ ಡೂಡಲ್ ಮೂಲಕ ಗೌರವವನ್ನು ಅರ್ಪಿಸಿದೆ. ಪುಲೆ ಅವರ 184ನೇ ಜನ್ಮದಿನಾಚರಣೆ (ಜನವರಿ 3) ಅಂಗವಾಗಿ ಗೂಗಲ್ ತನ್ನ ವೆಬ್ ಪೇಜ್ ನಲ್ಲಿ ಪ್ರತ್ಯೇಕ ಡೂಡಲ್ ರಚಿಸುವ ಮೂಲಕ ಗೌರವನ್ನು ಅರ್ಪಿಸಿದೆ.

**ಸಾವಿತ್ರಿ ಭಾಯಿ ಪುಲೆ:**

- ಸಾವಿತ್ರಿ ಭಾಯಿ ಪುಲೆ ಅವರು ಮಹಿಳೆಯ ಪರ ಧ್ವನಿ ಎತ್ತಿದ ದೇಶದ ಮೊದಲ ಮಹಿಳೆ ಹಾಗೂ ಮೊದಲ ಮಹಿಳಾ ಶಿಕ್ಷಕಿ.
- ಸಾವಿತ್ರಿ ಭಾಯಿ ಪುಲೆ ರವರು ಹುಟ್ಟಿದ್ದು 3ನೇ ಜನವರಿ 1831ರಲ್ಲಿ. ಮಹಾರಾಷ್ಟ್ರದ ಸತಾರ ಜಿಲ್ಲೆಯ ನಾಯ್ಗಿನ್ ಎಂಬಲ್ಲಿ ಜನಿಸಿದರು. ಪುಲೆ ಅವರಿಗೆ 9ನೇ ವಯಸ್ಸಿನಲ್ಲಿಯೇ 13 ವರ್ಷದ ಜ್ಯೋತಿರಾವ್ ಪುಲೆ ರವರೊಂದಿಗೆ ಮದುವೆ ಮಾಡಿಕೊಡಲಾಯಿತು.
- ತಮ್ಮ ಪತಿಯಿಂದ ಮನೆಯಲ್ಲೇ ಓದು ಬರಹವನ್ನು ಪುಲೆ ಅವರು ಕಲಿತರು. ನಂತರ ಈ ದಂಪತಿಗಳು ಭಾರತದಲ್ಲೆ ಮೊದಲ ಬಾರಿಗೆ ಹೆಣ್ಣುಮಕ್ಕಳು ಹಾಗೂ ಮಹಿಳೆಯರಿಗಾಗಿ ಶಾಲೆಯೊಂದನ್ನು ಪುಣೆಯ ಭಿಡೆವಾಡದಲ್ಲಿ ತೆರೆದರು.
- ಬೇರೆ ಬೇರೆ ಜಾತಿಯ ಒಂಬತ್ತು ಹೆಣ್ಣು ಮಕ್ಕಳನ್ನು ನೋಂದಾಯಿಸಿಕೊಳ್ಳುವ ಮೂಲಕ ಶಾಲೆಯನ್ನು ಪ್ರಾರಂಭಿಸಲಾಯಿತು. ಸಂಪ್ರದಾಯಗಳಿಗೆ ಕಟ್ಟುಬಿದ್ದಿದ್ದ ಅಂದಿನ ಕಾಲದಲ್ಲಿ ಹೆಣ್ಣು ಮಕ್ಕಳಿಗೆ ಶಿಕ್ಷಣ

ನೀಡುವುದು ಪಾಪವೆಂದೇ ಪರಿಗಣಿಸಲಾಗಿತ್ತು. ಅಂತಹ ಸಮಯದಲ್ಲಿ ಹೆಣ್ಣು ಮಕ್ಕಳಿಗೆ ಶಾಲೆಯನ್ನು ತೆರೆದಿದ್ದು ಐತಿಹಾಸಿಕ ಸಾಧನೆಯೆ ಸರಿ.

- ಬ್ರಿಟಿಷ್ ಆಡಳಿತ ಅವಧಿಯಲ್ಲಿ ಫುಲೆ ದಂಪತಿಗಳು ಜಾತಿ ಮತ್ತು ಲಿಂಗ ಆಧರಿತ ಸಾಮಾಜಿಕ ಶೋಷಣೆ ವಿರುದ್ದ ಹೋರಾಟವನ್ನು ಪ್ರಾರಂಭಿಸಿದರು ಹಾಗೂ ಮಹಿಳೆಯರ ಸಮಾನ ಹಕ್ಕುಗಳ ಬಗ್ಗೆ ಹೋರಾಟದ ಕಿಡಿಯನ್ನು ಹಚ್ಚಿದರು.
- ಪಿತೃಪ್ರಧಾನ ಹಾಗೂ ಸಾಂಪ್ರದಾಯಿಕ ಭಾರತೀಯ ಸಮಾಜ ಸಂದರ್ಭದಲ್ಲಿ ಮಹಿಳೆಯರು ಮಾತನಾಡಲು ಹೆದರುತ್ತಿದ್ದ ಸಂದರ್ಭದಲ್ಲಿ ಸಾವಿತ್ರಿ ಭಾಯಿ ರವರು ಧೈರ್ಯವಾಗಿ ಬಾಲ್ಯ ವಿವಾಹ, ಮಹಿಳಾ ಶಿಕ್ಷಣ, ಸತಿ ಪದ್ದತಿ, ಮಹಿಳೆಯರ ಸಮಾನ ಹಕ್ಕುಗಳ ವಿರುದ್ದ ಹೋರಾಟ ನಡೆಸಿದರು.
- 1890 ರಲ್ಲಿ ಜ್ಯೋತಿರಾವ್ ಫುಲೆ ಕೊನೆಯುಸಿರೆಳದ ಮೇಲೆ ಸಾವಿತ್ರಿ ಭಾಯಿ ರವರು ಸತ್ಯಶೋಧಕ ಸಮಾಜದ ಹೊಣೆಗಾರಿಕೆಯನ್ನು ತಮ್ಮ ಮೇಲೆ ಹಾಕಿಕೊಂಡು ಮುನ್ನೆಡಿಸಿದರು. ಪ್ಲೇಗ್ ರೋಗಿಗಳ ಹಾರೈಕೆ ಮಾಡುತ್ತಿದ್ದ ವೇಳೆ 1897 ರಲ್ಲಿ ಸಾವಿತ್ರಿ ಭಾಯಿ ರವರು ಮರಣ ಹೊಂದಿದರು.
- ಸಮಾಜ ಸುಧಾರಣೆ, ಶಿಕ್ಷಣ ಹೋರಾಟ ಮತ್ತು ಲಿಂಗ ಸಮಾನತೆಗೆ ಫುಲೆ ಅವರು ಹೋರಾಟದ ಮೂಲಕ ನೀಡಿರುವ ಕೊಡುಗೆಯನ್ನು ಗಮನಿಸಿ ಮಹಾರಾಷ್ಟ್ರ ಸರ್ಕಾರ ಪುಣೆ ವಿವಿಯನ್ನು ಸಾವಿತ್ರಿ ಭಾಯಿ ಫುಲೆ ವಿವಿಯೆಂದು ಮರುನಾಮಕರಣ ಮಾಡಿದೆ. ಅಲ್ಲದೇ ಭಾರತೀಯ ಅಂಚೆ ಇಲಾಖೆ ಫುಲೆ ಅವರ ಸ್ಮರಣಾರ್ಥ ಮಾರ್ಚ್ 10, 1998ರಲ್ಲಿ ಅಂಚೆ ಸ್ಟಾಂಪ್ ಅನ್ನು ಬಿಡುಗಡೆಗೊಳಿಸಿದೆ.

**ಮಣಿಪುರದ ಖ್ಯಾತ ಇತಿಹಾಸಕಾರ ಗಂಗ್ಮುಮೈ ಕಮೈ ನಿಧನ**



ಮಣಿಪುರ ಮೂಲದ ಖ್ಯಾತ ಇತಿಹಾಸಕಾರ, ಸಾಹಿತಿ ಮತ್ತು ವಿದ್ವಾಂಸ ಗಂಗ್ಮುಮೈ ಕಮೈ (Gangumumei Kamei) ಅನಾರೋಗ್ಯದ ಕಾರಣ ಇಫಾಂಲದಲ್ಲಿ ನಿಧನರಾದರು. ಅವರಿಗೆ 77 ವರ್ಷ ವಯಸ್ಸಾಗಿತ್ತು. ಕಮೈ ಅವರು ಪ್ರಸ್ತುತ ಈಶಾನ್ಯ ಮಂಡಳಿಯ ಸದಸ್ಯರಾಗಿದ್ದರು. ಈ ಹಿಂದೆ ಅವರು ಎರಡು ಸಂದರ್ಭಗಳಲ್ಲಿ ಸಚಿವರಾಗಿ ಸೇವೆಸಲ್ಲಿಸಿದ್ದರು.

**ಗಂಗ್ಮುಮೈ ಕಮೈ:**

- ಕಮೈ ಅವರು 21ನೇ ಅಕ್ಟೋಬರ್, 1939 ರಲ್ಲಿ ಇಂಫಾಲದಲ್ಲಿ ಜನಿಸಿದ್ದರು. ಈಶಾನ್ಯ ಭಾಗದ ಇತಿಹಾಸ ಅದರಲ್ಲೂ ವಿಶೇಷವಾಗಿ ಮಣಿಪುರದ ಇತಿಹಾಸದ ಪರಿಣಿತ ಎನಿಸಿದ್ದರು.
- ಕಮೈ ಅವರು ಅಸ್ಸಾಂ, ಮಣಿಪುರ ಮತ್ತು ನಾಗಲ್ಯಾಂಡ್ ರಾಜ್ಯಗಳಲ್ಲಿ ಕಂಡುಬರುವ ಝೆಲಿಯಾನ್ ಗ್ರಾಂಗ್ ಸಮುದಾಯಕ್ಕೆ ಸೇರಿದ್ದವರಾಗಿದ್ದರು.
- ಮಣಿಪುರ ವಿಶ್ವವಿದ್ಯಾಲಯದಲ್ಲಿ ಇತಿಹಾಸ ಪ್ರಾಧ್ಯಪಕರಾಗಿ ಹಾಗೂ ಈಶಾನ್ಯ ಭಾರತ ಇತಿಹಾಸ ಒಕ್ಕೂಟದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.
- ಕಮೈ ಅವರು ಅನೇಕ ಪುಸ್ತಕಗಳನ್ನು ಬರೆದಿದ್ದಾರೆ ಅವುಗಳಲ್ಲಿ ಪ್ರಮುಖವಾದವುಗಳೆಂದರೆ "ಎ ಹಿಸ್ಟರಿ ಆಫ್ ಮಾರ್ಡನ್ ಮಣಿಪುರ", "ಆನ್ ಹಿಸ್ಟರಿ ಅಂಡ್ ಹಿಸ್ಟರಿಯೋಗ್ರಾಫಿ ಆಫ್ ಮಣಿಪುರ".
- ರಾಷ್ಟ್ರೀಯ ಪ್ರಸಿದ್ದ ಇತಿಹಾಸಕಾರರಲ್ಲಿ ಒಬ್ಬರಾಗಿದ್ದ ಕಮೈ ಅವರು ಅಂಥ್ರೋಪೊಲಾಜಿಕಲ್ ಸರ್ವೇ ಆಫ್ ಇಂಡಿಯಾದ ಸಲಹಗಾರ ಮಂಡಳಿಯ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದರು.

- ರಾಜಕೀಯ ಕ್ಷೇತ್ರದಲ್ಲೂ ಸಕ್ರಿಯರಾಗಿದ್ದ ಕಮ್ಮೆ, 1993 ರಲ್ಲಿ ಫೆಡರಲ್ ಪಾರ್ಟಿ ಆಫ್ ಮಣಿಪುರವನ್ನು ಸ್ಥಾಪಿಸಿದ್ದರು. 1995 ಮತ್ತು 2001ರಲ್ಲಿ ಮಣಿಪುರ ವಿಧಾನಸಭಾಗೆ ಆಯ್ಕೆಯಾಗಿ ಎರಡು ಬಾರಿ ಸಚಿವರಾಗಿ ಸೇವೆ ಸಲ್ಲಿಸಿದ್ದರು.
- 2013ರಲ್ಲಿ ಬಿಜೆಪಿ ಪಕ್ಷಕ್ಕೆ ಸೇರ್ಪಡೆಗೊಂಡರು. ಜುಲೈ, 2015ರಲ್ಲಿ ಕೇಂದ್ರ ಸರ್ಕಾರ ಇವರನ್ನು ಈಶಾನ್ಯ ವಲಯ ಮಂಡಳಿ ಸದಸ್ಯರಾಗಿ ನೇಮಕಮಾಡಿತ್ತು.

## ನವದೆಹಲಿಯಲ್ಲಿ ಹಣಕಾಸು ಸ್ಥಿರತೆ ಮತ್ತು ಅಭಿವೃದ್ಧಿ ಮಂಡಳಿಯ 16ನೇ ಸಭೆ



ಹಣಕಾಸು ಸ್ಥಿರತೆ ಮತ್ತು ಅಭಿವೃದ್ಧಿ ಮಂಡಳಿ (Financial Stability and Development Council)ಯ 16ನೇ ಸಭೆ ನವದೆಹಲಿಯಲ್ಲಿ ನಡೆಯಿತು. ಹಣಕಾಸು ಸಚಿವ ಅರುಣ್ ಜೇಟ್ಲಿ ರವರು ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು. ಮಂಡಳಿಯ ಸದಸ್ಯರಾದ ಆರ್ಥಿಕ ವಲಯದ ನಿಯಂತ್ರಕರು ಸಭೆಯಲ್ಲಿ ಭಾಗವಹಿಸಿದ್ದರು. ದೇಶದ ಆರ್ಥಿಕತೆ ಎದುರಿಸುತ್ತಿರುವ ಸಮಸ್ಯೆ ಹಾಗೂ ಸವಾಲುಗಳನ್ನು ಸಭೆಯಲ್ಲಿ ಪರಿಶೀಲಿಸಲಾಯಿತು.

**ಸಭೆಯ ಪ್ರಮುಖಾಂಶಗಳು:**

- **ಭಾರತದ ಆರ್ಥಿಕತೆ:** ವಿಶ್ವದ ದುರ್ಬಲ ಆರ್ಥಿಕ ಪರಿಸ್ಥಿತಿಯ ಹೊರತಾಗಿಯೂ ಭಾರತದ ಆರ್ಥಿಕತೆ ಸಧೃಡವಾಗಿದೆ. ಭಾರತದ ಆರ್ಥಿತಕೆ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.
- **ಬ್ಯಾಂಕಿಂಗ್:** ಸಾರ್ವಜನಿಕ ಬ್ಯಾಂಕ್ ಗಳಲ್ಲಿ ವಸೂಲಾಗದ ಸಾಲದ ಬಗ್ಗೆ ಹಾಗೂ ಕೇಂದ್ರ ಸರ್ಕಾರ ಮತ್ತು ಭಾರತೀಯ ರಿಸರ್ವ್ ಬ್ಯಾಂಕ್ ಕೈಗೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಯಿತು. ಈ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಅಗತ್ಯ ಕ್ರಮಗಳ ಬಗ್ಗೆ ಸಹ ಚರ್ಚಿಸಲಾಯಿತು.
- **ಆರ್ಥಿಕ ಸೇರ್ಪಡೆ/ಆರ್ಥಿಕ ಸಾಕ್ಷರತೆ:** ಆರ್ಥಿಕ ಸೇರ್ಪಡೆ ಮತ್ತು ಆರ್ಥಿಕ ಸಾಕ್ಷರತೆಗೆ ಸರ್ಕಾರ ಕೈಗೊಂಡಿರುವ ಹಲವಾರು ಉಪಕ್ರಮಗಳ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಆರ್ಥಿಕ ಸೇರ್ಪಡೆ/ಆರ್ಥಿಕ ಸಾಕ್ಷರತೆ ಉತ್ತೇಜಿಸಲು ಮುಂದೆ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆಯು ಸಭೆಯಲ್ಲಿ ತೀರ್ಮಾನ ಕೈಗೊಳ್ಳಲಾಯಿತು.
- **ತಂತ್ರಜ್ಞಾನ:** ಸೈಬರ್ ಭದ್ರುತೆ, ಫಿನ್ ಟೆಕ್ ಮತ್ತು ಡಿಜಿಟಲ್ ನಾವೀನ್ಯತೆ ಬಗ್ಗೆ ಚರ್ಚಿಸಲಾಯಿತು.
- **ನೋಟು ಅಮಾನ್ಯ:** ಜಿಡಿಪಿ ಬೆಳವಣಿಗೆ ಹಾಗೂ ತೆರಿಗೆ ವಂಚನೆ ತಡೆಯಲು ನೋಟು ಅಮಾನ್ಯಕರಣ ಸಹಾಯ ಮಾಡಲಿದೆ ಎಂಬ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು.

**ಹಣಕಾಸು ಸ್ಥಿರತೆ ಮತ್ತು ಅಭಿವೃದ್ಧಿ ಮಂಡಳಿ:**

- ಕೇಂದ್ರ ಸರ್ಕಾರ ಡಿಸೆಂಬರ್ 2010ರಲ್ಲಿ ಹಣಕಾಸು ಸ್ಥಿರತೆ ಮತ್ತು ಅಭಿವೃದ್ಧಿ ಮಂಡಳಿ (FSDC)ಯನ್ನು ಸ್ಥಾಪಿಸಿದೆ. ಕೇಂದ್ರ ಹಣಕಾಸು ಸಚಿವರು ಇದರ ಅಧ್ಯಕ್ಷರಾಗಿರುತ್ತಾರೆ.
- ಹಣಕಾಸು ವಲಯ ಸುಧಾರಣೆಗೆ 2008 ರಲ್ಲಿ ರಚಿಸಲಾದ ರಘುರಾಮ್ ರಾಜನ್ ಸಮಿತಿಯ ಶಿಫಾರಸ್ಸಿನಲ್ಲಿ ಈ ಮಂಡಳಿಯ ಸ್ಥಾಪನೆಯ ಬಗ್ಗೆ ಮೊದಲು ಪ್ರಸ್ತಾಪಿಸಲಾಗಿತ್ತು.
- ಆರೋಗ್ಯಕರ ಮತ್ತು ಸಮರ್ಥವಾದ ಆರ್ಥಿಕ ವ್ಯವಸ್ಥೆಯನ್ನು ಜಾರಿಗೆ ತರುವಲ್ಲಿ ಪ್ರಮುಖ ಪಾತ್ರವಹಿಸುವ ಆರ್ಥಿಕ ನಿಯಂತ್ರಕ ಸಂಸ್ಥೆಯಾಗಿ ಇದು ಕಾರ್ಯನಿರ್ವಹಿಸುತ್ತದೆ.
- ಹಣಕಾಸು ಸ್ಥಿರತೆಯನ್ನು ಕಾಪಾಡುವುದು, ಆರ್ಥಿಕ ವಲಯವನ್ನು ಅಭಿವೃದ್ಧಿಪಡಿಸುವುದು ಇದರ ಜವಾಬ್ದಾರಿಯಾಗಿದೆ.

**ಮಂಡಳಿಯ ರಚನೆ:**

- **ಅಧ್ಯಕ್ಷರು**: ಕೇಂದ್ರ ಹಣಕಾಸು ಸಚಿವರು
- **ಸದಸ್ಯರು**: ಆರ್ಥಿಕ ವಲಯ ನಿಯಂತ್ರಣ ಪ್ರಾಧಿಕಾರಗಳ ಮುಖ್ಯಸ್ಥರು ಇದರ ಸದಸ್ಯರಾಗಿರುತ್ತಾರೆ (RBI, PFRDA, SEBI, IRDA ), ಮುಖ್ಯ ಆರ್ಥಿಕ ಸಲಹೆಗಾರರು, ಆರ್ಥಿಕ ವ್ಯವಹಾರ ಇಲಾಖೆಯ ಕಾರ್ಯದರ್ಶಿ ಮತ್ತು ಹಣಕಾಸು ಕಾರ್ಯದರ್ಶಿ.

**44ನೇ ನವದೆಹಲಿ ವಿಶ್ವ ಪುಸ್ತಕ ಮೇಳ ಆರಂಭ**



ನವದೆಹಲಿ ವಿಶ್ವ ಪುಸ್ತಕ ಮೇಳದ 44ನೇ ಆವೃತ್ತಿ ನವದೆಹಲಿಯ ಪ್ರಗತಿ ಮೈದಾನದಲ್ಲಿಆರಂಭಗೊಂಡಿತು. "ಮನುಷಿ-ಬುಕ್ಸ್ ರಿಟನ್ ಆನ್ ಅಂಡ್ ಬೈ ವುಮೆನ್ (Manushi-Books Written on and by Women) ಇದು ಈ ವರ್ಷ ಪುಸ್ತಕ ಮೇಳದ ಧ್ಯೇಯವಾಕ್ಯ. ಕೇಂದ್ರ ಮಾನವ ಅಭಿವೃದ್ದಿ ಸಚಿವಾಲಯ ರಾಜ್ಯ ಖಾತೆ ಸಚಿವ ಮಹೇಂದ್ರ ನಾಥ್ ಪಾಂಡೆ ರವರು ಈ ಮೇಳವನ್ನು ಉದ್ಘಾಟಿಸಿದರು.

**ಪ್ರಮುಖಾಂಶಗಳು:**

- ಒಂಬತ್ತು ದಿನಗಳ ಕಾಲ ನಡೆಯುವ ಈ ಪುಸ್ತಕ ಮೇಳವನ್ನು ರಾಷ್ಟ್ರೀಯ ಪುಸ್ತಕ ಟ್ರಸ್ಟ್ ಕೇಂದ್ರ ಮಾನವ ಅಭಿವೃದ್ದಿ ಸಚಿವಾಲಯದಡಿ ಆಯೋಜಿಸುತ್ತಿದೆ. ಇಂಡಿಯಾ ಟ್ರೇಡ್ ಪ್ರಮೋಷನ್ ಆರ್ಗನೈಸೇಶನ್ (ITPO) ಈ ಮೇಳದ ಸಹ ಸಂಘಟಕ ಸಂಸ್ಥೆ.
- ಈ ಬಾರಿಯ ಧ್ಯೇಯವಾಕ್ಯದಂತೆ ಪುಸ್ತಕ ಮೇಳದಲ್ಲಿ ಪುರಾತನ ಕಾಲದಿಂದ ಮಹಿಳಾ ಸಾಹಿತ್ಯ ಶ್ರೀಮಂತಿಕೆಯನ್ನು ಬಿಂಬಿಸಲಿದೆ.
- ಪ್ರಾಚೀನ ಮತ್ತು ಮಧ್ಯ ಪ್ರಾಚೀನ ಮತ್ತು ಆಧುನಿಕ ಭಾರತದ ಶ್ರೇಷ್ಠ ಮಹಿಳಾ ಸಾಹಿತಿಗಳ ಪೋಸ್ಟರ್ ಹಾಗೂ ಫಲಕಗಳನ್ನು ಮೇಳದಲ್ಲಿ ಪ್ರದರ್ಶಿಸಲಾಗುವುದು.
- ದೇಶದ ವಿವಿಧೆಡೆಯಿಂದ ಸುಮಾರು 800 ಕ್ಕೂ ಹೆಚ್ಚು ಪ್ರಕಾಶಕರು ಮೇಳದಲ್ಲಿ ಭಾಗವಹಿಸಲಿದ್ದಾರೆ. ಅಲ್ಲದೇ ಚೀನಾ, ಫ್ರಾನ್ಸ್, ಜರ್ಮನಿ, ಈಜಿಪ್ಟ್, ಜಪಾನ್ ಮತ್ತು ಇರಾನ್ ಸೇರಿದಂತೆ 20 ದೇಶಗಳು ಪಾಲ್ಗೊಳ್ಳಲಿವೆ.
- ಮಕ್ಕಳ ಪುಸ್ತಕ, ಕವಿತೆ, ಸಾಮಾಜಿಕ ವಿಜ್ಞಾನ ಮತ್ತು ಕಾದಂಬರಿ ಸೇರಿದಂತೆ ವಿವಿಧ ಬಗೆಯ ಪುಸ್ತಕಗಳನ್ನು ಮೇಳದಲ್ಲಿ ಪ್ರದರ್ಶನದ ಆಕರ್ಷಣೆ ಎನಿಸಲಿವೆ.

**ಭಾರತೀಯ ಕಾಲಮಾನ ಗಡಿಯಾರಕ್ಕೆ ಅಧಿಕ ಸೆಕೆಂಡ್ ಸೇರ್ಪಡೆ**




ಭೂಮಿ ಸುತ್ತುವಿಕೆಯ ವೇಗದಲ್ಲಿನ ಬದಲಾವಣೆ ಸರಿದೂಗಿಸುವ ಸಲುವಾಗಿ ಭಾರತೀಯ ಕಾಲಮಾನದ ಗಡಿಯಾರದಲ್ಲಿ ಜನವರಿ 1ರ ಬೆಳಗಿನ ಜಾವ 5 ಗಂಟೆ 29 ನಿಮಿಷ, 59 ಸೆಕೆಂಡ್ ನಂತರ ಒಂದು ಅಧಿಕ ಕ್ಷಣ (ಲೀಪ್ ಸೆಕೆಂಡ್) ಸೇರಿಸಲಾಗಿದೆ. ಭೂಮಿಯ ತಿರುಗುವಿಕೆ ನಿಧಾನವಾಗಿರುವ ಕಾರಣ ಅದನ್ನು ಸರಿದೂಗಿಸುವ ಸಲುವಾಗಿ 2017ನೇ ವರ್ಷಕ್ಕೆ ಒಂದು ಅಧಿಕ ಸೆಕೆಂಡ್ ಅನ್ನು ಸೇರ್ಪಡೆಗೊಳಿಸಲಾಗಿದೆ.

**ಅಧಿಕ ಸೆಕೆಂಡ್ ಸೇರ್ಪಡೆ ಏಕೆ?**

ಭೂಮಿ ಮತ್ತು ಭೂಮಿ ತನ್ನ ಅಕ್ಷದ ಸುತ್ತ ತಿರುಗುವ ವೇಗ ಒಂದೇ ಸಮನಾಗಿರುವುದಿಲ್ಲ. ಚಂದ್ರನ ಗುರುತ್ವಾಕರ್ಷಣ ಬಲ ಹಾಗೂ ಭೂಕಂಪ ಇನ್ನಿತರ ಕಾರಣಗಳಿಂದ ಕೆಲವೊಮ್ಮೆ ಈ ವೇಗ ಹೆಚ್ಚಿದ್ದರೆ

ಕೆಲವೊಮ್ಮೆ ಕಡಿಮೆ ಇರುತ್ತದೆ. ಇದರಿಂದಾಗಿ ಖಗೋಳ ಗಡಿಯಾರ ಮತ್ತು ಅಣು ಗಡಿಯಾರಗಳ ನಡುವಣ ವ್ಯತ್ಯಾಸ ಉಂಟಾಗುತ್ತದೆ. ಈ ವ್ಯತ್ಯಾಸ 0.9 ಸೆಕೆಂಡ್‌ಗಳನ್ನು ತಲುಪಿದಾಗ ಅದನ್ನು ಸರಿದೂಗಿಸಲು ಒಂದು ಅಧಿಕ ಕ್ಷಣವನ್ನು ಸೇರಿಸಲಾಗುತ್ತದೆ.


**ಮಹತ್ವ**:

- ಒಂದು ಕ್ಷಣದ ಸೇರ್ಪಡೆಯಿಂದ ಜನರ ದೈನಂದಿನ ಜೀವನದ ಮೇಲೆ ಯಾವುದೆ ಪರಿಣಾಮ ಉಂಟಾಗುವುದಿಲ್ಲ. ಆದರೆ ಉಪಗ್ರಹ ಸಂಚಾರ, ಖಗೋಳ ವಿಜ್ಞಾನ ಮತ್ತು ಸಂವಹನ ಸಂಪರ್ಕಗಳ ಮೇಲೆ ಇದು ಪರಿಣಾಮ ಬೀರುತ್ತದೆ.

**ಹಿನ್ನಲೆ**:

ಭಾರತದಲ್ಲಿ ಅಧಿಕ ಸೆಕೆಂಡ್ ಅನ್ನು ಭಾರತೀಯ ಕಾಲಮಾನ ಗಡಿಯಾರಕ್ಕೆ ಸೇರ್ಪಡಿಸುವ ಜವಬ್ದಾರಿ ಸಿಎಸ್‌ಐಆರ್ ನಡಿ ಕಾರ್ಯನಿರ್ವಹಿಸುವ ನ್ಯಾಷನಲ್ ಫಿಸಿಕಲ್ ಲ್ಯಾಬೋರೆಟರಿ (NPL)ಯದು. NPL ದೇಶದ ಅತ್ಯಂತ ಹಳೆಯ ಲ್ಯಾಬೋರೆಟರಿಗಳಲ್ಲಿ ಒಂದಾಗಿದ್ದು, ಐದು ಅಣು ಗಡಿಯಾರಗಳನ್ನು ಹೊಂದಿದೆ. ಅಣು ಗಡಿಯಾರಗಳು ಅತ್ಯಂತ ನಿಖರತೆಯನ್ನು ಹೊಂದಿವೆ.

**2016-17ನೇ ಸಾಲಿನಲ್ಲಿ ಭಾರತದ ಜಿಡಿಪಿ ಬೆಳವಣಿಗೆ ದರ ಶೇ 7.1%: ಸಿಎಸ್‌ಓ**



ಕೇಂದ್ರಿಯ ಅಂಕಿ ಅಂಶ ಕಚೇರಿ ಬಿಡುಗಡೆಗೊಳಿಸಿರುವ ವರದಿಯ ಪ್ರಕಾರ ಭಾರತದ ಒಟ್ಟು ದೇಶಿಯ ಉತ್ಪನ್ನ (ಜಿಡಿಪಿ) ಬೆಳವಣಿಗೆ ಮಂದಗತಿಯಲ್ಲಿ ಇರಲ್ಲಿದ್ದು 2016-17ನೇ ಸಾಲಿನಲ್ಲಿ ಶೇ 7.1% ರಷ್ಟು ಇರಲಿದೆ ಎಂದು ಹೇಳಿದೆ. 2015-16ನೇ ಸಾಲಿನಲ್ಲಿ ಜಿಡಿಪಿ ಬೆಳವಣಿಗೆ ದರ ಶೇ 7.6% ರಷ್ಟಿತ್ತು. ಕೈಗಾರಿಕ ವಲಯದ ಬೆಳವಣಿಗೆಯಲ್ಲಾಗಿರುವ ಕುಂಠಿತವೇ ಜಿಡಿಪಿ ದರದ ಮಂದಗತಿ ಬೆಳವಣಿಗೆಗೆ ಕಾರಣ ಎನ್ನಲಾಗಿದೆ.

**ಪ್ರಮುಖಾಂಶಗಳು**:

- **2016-17ನೇ ಸಾಲಿನಲ್ಲಿ ತಲಾವಾರು ಆದಾಯ:** 2015-16ನೇ ಸಾಲಿನಲ್ಲಿ ರೂ 93,293 ರಷ್ಟಿದ್ದ ಭಾರತದ ತಲಾವಾರು ಆದಾಯ 2016-17ನೇ ಸಾಲಿನಲ್ಲಿ ರೂ 1,03,007 ರಷ್ಟು ಅಂದರೆ ಶೇ 10% ರಷ್ಟು ಹೆಚ್ಚಾಗಲಿದೆ ಎಂದು ಅಂದಾಜಿಸಲಾಗಿದೆ.
- **ಕೃಷಿ, ಅರಣ್ಯ ಮತ್ತು ಮೀನುಗಾರಿಕೆ:** 2016-17ನೇ ಸಾಲಿನಲ್ಲಿ ಕೃಷಿ, ಅರಣ್ಯ ಮತ್ತು ಮೀನುಗಾರಿಕೆ ಕ್ಷೇತ್ರದ ಬೆಳವಣಿಗೆ ಶೇ 4.1% ರಷ್ಟು ಇರಲಿದೆ ಎನ್ನಲಾಗಿದೆ.
- **ಉತ್ಪಾದನ ವಲಯ:** 2015-16ನೇ ಸಾಲಿನಲ್ಲಿ ಶೇ 9.3% ಬೆಳವಣಿಗೆ ಕಂಡಿದ್ದ ಉತ್ಪಾದನ ವಲಯ 2016-17ನೇ ಸಾಲಿನಲ್ಲಿ ಶೇ 7.4% ರಷ್ಟಿರಲಿದೆ.
- **ಗ್ರಾಹಕ ಬೆಲೆ ಸೂಚ್ಯಂಕ:** 2016-17ನೇ ಏಪ್ರಿಲ್-ನವೆಂಬರ್ ಅವಧಿಯಲ್ಲಿ ಗ್ರಾಹಕ ಬೆಲೆ ಸೂಚ್ಯಂಕದಲ್ಲಿ ಶೇ 5% ರಷ್ಟು ಏರಿಕೆಯಾಗಲಿದೆ.

**<u>ಗುಜರಾತ್ ನಲ್ಲಿ ಭಾರತದ ಮೊದಲ ಅಂತಾರಾಷ್ಟ್ರೀಯ ಷೇರು ವಿನಿಮಯ ಕೇಂದ್ರ</u>**




ದೇಶದ ಮೊದಲ ಅಂತಾರಾಷ್ಟ್ರೀಯ ಷೇರು ವಿನಿಮಯ ಕೇಂದ್ರ 'ಇಂಡಿಯಾ ಇಂಟರ್ ನ್ಯಾಷನಲ್ ಎಕ್ಸ್ ಚೇಂಜ್ ಇಂಡಿಯಾ ಐಎನ್‌ಎಕ್ಸ್ (India INX)'ಗೆ ಪ್ರಧಾನಿ ನರೇಂದ್ರ ಮೋದಿರವರು ಚಾಲನೆ ನೀಡಿದರು. ಗುಜರಾತ್‌ನ ಅಂತಾರಾಷ್ಟ್ರೀಯ ಹಣಕಾಸು ಟೆಕ್‌ಸಿಟಿ (ಗಿಫ್ಟ್ ಸಿಟಿ)ಯಲ್ಲಿ ಈ ಕೇಂದ್ರ ಸ್ಥಾಪನೆಯಾಗಿದೆ. ಇಂಡಿಯಾ ಐಎನ್‌ಎಕ್ಸ್ ಬಾಂಬೆ ಸ್ಟಾಕ್ ಎಕ್ಸ್ಚೇಂಜ್ ನ ಸಂಪೂರ್ಣ ಸ್ವಾಮ್ಯದ ಸಂಸ್ಥೆಯಾಗಿದೆ. ಜ. 16ರಿಂದ ಇಲ್ಲಿ ವಹಿವಾಟು ಆರಂಭವಾಗಲಿದೆ.

**ಪ್ರಮುಖಾಂಶಗಳು**:

- ಆರಂಭದಲ್ಲಿ ಇಲ್ಲಿ ನಿವ್ವಳ ಬೆಲೆಯ ಉತ್ಪನ್ನಗಳು, ಕರೆನ್ಸಿ ಉತ್ಪನ್ನಗಳು, ಸರಕು ಉತ್ಪನ್ನ ಸೂಚ್ಯಂಗಳ ವ್ಯಾಪಾರವನ್ನು ನಡೆಸಲಾಗುವುದು. ಅಗತ್ಯ ಮೂಲಭೂತ ಸೌಕರ್ಯ ಅಭಿವೃದ್ಧಿಗೊಂಡ ನಂತರ ಡಿಪಾಸಿಟರಿ ರಸೀದಿಗಳು ಮತ್ತು ಬಾಂಡ್ ಗಳನ್ನು ನೀಡಲಾಗುವುದು.
- ದಿನದ 22 ಗಂಟೆ ಕಾರ್ಯ: ಅಂತಾರಾಷ್ಟ್ರೀಯ ಷೇರು ವಿನಿಮಯ ಕೇಂದ್ರ ದಿನದ 22 ಗಂಟೆ ಕಾರ್ಯ ನಿರ್ವಹಿಸಲಿದೆ. ಜಪಾನ್ ಮಾರುಕಟ್ಟೆ ಆರಂಭದಿಂದ ಅಮೆರಿಕದ ಮಾರುಕಟ್ಟೆ ಮುಕ್ತಾಯ ಆಗುವವರೆಗೂ ಕೇಂದ್ರ ತೆರೆದಿರಲಿದೆ.
- ಇಂಡಿಯಾ ಐಎನ್‌ಎಕ್ಸ್ ಜಗತ್ತಿನಲ್ಲೇ ಅತಿ ವೇಗವಾಗಿ ಕಾರ್ಯನಿರ್ವಹಿಸುವ ಸ್ಟಾಕ್ ಎಕ್ಸ್‌ಚೇಂಜ್ ಆಗಿದೆ. ಇಲ್ಲಿ ಒಂದು ವಹಿವಾಟು ನಡೆಸಲು ನಾಲ್ಕು ಮೈಕ್ರೊ ಸೆಕೆಂಡ್ ಸಾಕು! ಒಂದು ಮೈಕ್ರೊ ಸೆಕೆಂಡ್ ಎಂದರೆ ಒಂದು ಸೆಕೆಂಡ್‌ನ 10 ಲಕ್ಷದ ಒಂದು ಭಾಗ. ಸಿಂಗಾಪುರದ ಅಂತಾರಾಷ್ಟ್ರೀಯ ಷೇರು ಮಾರುಕಟ್ಟೆ 60 ಮೈಕ್ರೊ ಸೆಕೆಂಡ್ ವೇಗದಲ್ಲಿ ಕಾರ್ಯನಿರ್ವಹಿಸುತ್ತಿದೆ. ಭಾರತದ ಮುಂಬೈ ಸ್ಟಾಕ್ ಎಕ್ಸ್ ಚೇಂಜ್ 6 ಮೈಕ್ರೊ ಸೆಕೆಂಡ್ ವೇಗದಲ್ಲಿ ಕಾರ್ಯನಿರ್ವಹಿಸುತ್ತಿದೆ.

**ಇಂಡಿಯಾ ಐಎನ್‌ಎಕ್ಸ್ ಅನುಕೂಲ:**

- ವಿದೇಶಿ ವಿನಿಮಯ ಕ್ಷೇತ್ರದಲ್ಲಿ ಭಾರತ ವಾರ್ಷಿಕ 3.2 ಲಕ್ಷ ಕೋಟಿ ರೂ. ವಹಿವಾಟು ನಡೆಸುತ್ತದೆ. ಆದರೆ ಹೆಚ್ಚಿನ ವಹಿವಾಟು ದುಬೈ, ಸಿಂಗಾಪುರದಲ್ಲಿರುವ ಅಂತಾರಾಷ್ಟ್ರೀಯ ವಿನಿಮಯ ಕೇಂದ್ರದ ಮೂಲಕ ನಡೆಯುತ್ತಿದೆ. ಈಗ ಗುಜರಾತ್‌ನಲ್ಲಿ ನೂತನ ಕೇಂದ್ರ ಆರಂಭವಾಗಿದ್ದು, ವಿದೇಶಗಳ ಕೇಂದ್ರದ ಮೇಲೆ ಭಾರತದ ಅವಲಂಬನೆ ತಪ್ಪಲಿದೆ. ವಿದೇಶದಿಂದ ಭಾರತಕ್ಕೆ ಬಂಡವಾಳ ಹರಿವಿಗೆ ಇದು ಸಹಾಯಕವಾಗಲಿದೆ.

**<u>ಗುಜರಾತ್ ಸರ್ಕಾರದಿಂದ ಭಾರತದ ಮೊದಲ ಸ್ಟುಡೆಂಟ್ ಸ್ಟಾರ್ಟ್ ಆಫ್ ಹಾಗೂ ನಾವೀನ್ಯ ನೀತಿ</u>**




ಗುಜರಾತ್ ಸರ್ಕಾರ ದೇಶದ ಮೊದಲ ವಿದ್ಯಾರ್ಥಿ ನವೋದ್ಯಮ (ಸ್ಟಾರ್ಟ್ ಆಫ್) ಹಾಗೂ ನಾವೀನ್ಯ ನೀತಿಯನ್ನು ಜಾರಿಗೆ ತಂದಿದೆ. ಈ ನೀತಿಯಡಿ ವಿದ್ಯಾರ್ಥಿಗಳು ಅಭಿವೃದ್ಧಿಪಡಿಸಿದ ಯೋಜನೆಗಳಿಗೆ ರೂ 200 ಕೋಟಿ ಅನುದಾನವನ್ನು ನೀಡಲಾಗುವುದು.

**ನೀತಿಯ ಪ್ರಮುಖಾಂಶಗಳು**:

- ಸಮಾಜ, ಕೈಗಾರಿಕೆ ಮತ್ತು ಸಮುದಾಯ ಆಧರಿತ ನಾವೀನ್ಯ ಯೋಜನೆಗಳನ್ನು ಕೈಗೆತ್ತಿಕೊಳ್ಳಲು ರಾಜ್ಯದ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವುದು ನೀತಿಯ ಮುಖ್ಯ ಉದ್ದೇಶ.

- ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳ ನೇತೃತ್ವದಲ್ಲಿ ನವೋದ್ಯಮ ಮತ್ತು ನಾವೀನ್ಯತೆ ಯೋಜನೆಗಳನ್ನು ಆರಂಭಿಸುವುದು.
- ಗುಜರಾತ್ ಶಿಕ್ಷಣ ಇಲಾಖೆಯಡಿ ಈ ನೀತಿಯನ್ನು ಅಭಿವೃದ್ಧಿಪಡಿಸಲಾಗಿದೆ. ರಾಜ್ಯ ಸರ್ಕಾರ ಇದಕ್ಕಾಗಿ ರೂ 200 ಕೋಟಿಯ "ರಾಜ್ಯ ನಾವೀನ್ಯತೆ ನಿಧಿ"ಯನ್ನು ಸ್ಥಾಪಿಸಿದೆ.

## ಇ-ಆಡಳಿತ ವ್ಯವಹಾರದಲ್ಲಿ ಕರ್ನಾಟಕಕ್ಕೆ 12ನೇ ಸ್ಥಾನ



ಕೇಂದ್ರ ಸರ್ಕಾರ ಹೊರತಂದಿರುವ ವರದಿ ಪ್ರಕಾರ ಕರ್ನಾಟಕವು ಇ-ಆಡಳಿತದ ವ್ಯವಹಾರದಲ್ಲಿ 12ನೇ ಸ್ಥಾನದಲ್ಲಿದೆ. ಕಳೆದ ವರ್ಷಕ್ಕಿಂತ 4 ಸ್ಥಾನ ಕುಸಿತ ಕಂಡಿರುವ ಕರ್ನಾಟಕ, ಈ ವರ್ಷದಲ್ಲಿ 5.67 ಕೋಟಿ ರೂ. ವ್ಯವಹಾರ ನಡೆಸಿದೆ.

- ಕೇಂದ್ರ ಸರ್ಕಾರದ ವರದಿ ಪ್ರಕಾರ 86 ಸೇವೆಗಳಲ್ಲಿ ಇ-ಆಡಳಿತ ವ್ಯವಹಾರ ನಡೆಯುತ್ತಿದೆ. 2015ನೇ ಸಾಲಿನಲ್ಲಿ 7.74 ಕೋಟಿ ರೂ.ಗಳಿಷ್ಟಿತ್ತು.
- ಇ-ಆಡಳಿತ ವ್ಯವಹಾರದಲ್ಲಿ ಕರ್ನಾಟಕಕ್ಕಿಂತ ಆಂಧ್ರಪ್ರದೇಶವು ಸುಮಾರು 15 ಪಟ್ಟು ಮುಂದಿದೆ. ಆಂಧ್ರಪ್ರದೇಶವು ಈ ವರ್ಷದಲ್ಲಿ 101.94 ಕೋಟಿ ರೂ ವ್ಯವಹಾರ ನಡೆಸಿದೆ. ಹಿಂದುಳಿದ ರಾಜ್ಯದ ಪಟ್ಟಿಯಲ್ಲಿರುವ ಛತ್ತೀಸ್‌ಘಡ ಕೂಡ 8 ಸ್ಥಾನದಲ್ಲಿದೆ.

## ಭಾರತೀಯ ರೈಲ್ವೆಯಿಂದ "ಐಆರ್ಸಿಟಿಸಿ ರೈಲ್ ಕನೆಕ್ಟ್ ಆ್ಯಪ್" ಬಿಡುಗಡೆ

ಡಿಜಿಟಲ್ ವ್ಯವಸ್ಥೆ ಮೂಲಕ ರೈಲು ಟಿಕೆಟ್ ಪಡೆಯುವುದನ್ನು ಸುಲಭವಾಗಿಸಲು ಭಾರತೀಯ ರೈಲ್ವೆ "ಐಆರ್ಸಿಟಿಸಿ ರೈಲು ಕನೆಕ್ಟ್ ಆ್ಯಪ್" ಅನ್ನು ಅಭಿವೃದ್ಧಿಪಡಿಸಿದೆ. ರೈಲ್ವೆ ಸಚಿವ ಸುರೇಶ್ ಪ್ರಭು ರವರು ಈ ಆ್ಯಪ್ ಗೆ ಚಾಲನೆ ನೀಡಿದರು. ಪ್ರಸ್ತುತ ಇರುವ ಐಆರ್ಸಿಟಿಸಿ ಕನೆಕ್ಟ್ ಆ್ಯಪ್ ಬದಲಾಗಿ ಮೊಬೈಲ್ ಆಧರಿತ ಈ ಹೊಸ ಆ್ಯಪ್ ಅನ್ನು ಬಿಡುಗಡೆಗೊಳಿಸಲಾಗಿದೆ. ರೈಲು ಟಿಕೆಟ್ ಬುಕ್ಕಿಂಗ್ ವಿಧಾನವನ್ನು ಸುಲಭಗೊಳಿಸಿ ಬಳಕೆದಾರ ಸ್ನೇಹಿಯನ್ನಾಗಿಸಲು ಇದನ್ನು ಅಭಿವೃದ್ಧಿಪಡಿಸಲಾಗಿದೆ.

**ಪ್ರಮುಖಾಂಶಗಳು**:

- ಮುಂದಿನ ತಲೆಮಾರಿನ ಇ-ಟಿಕೆಟಿಂಗ್ ವ್ಯವಸ್ಥೆಯಲ್ಲಿ ದಕ್ಷತೆ ಹಾಗೂ ಭದ್ರತೆಯನ್ನು ಹೆಚ್ಚಿಸುವ ಸಲುವಾಗಿ ಈ ಆ್ಯಪ್ ಅನ್ನು ಅಭಿವೃದ್ಧಿಪಡಿಸಲಾಗಿದೆ.
- ಇದೊಂದು ಪ್ರಯಾಣಿಕರ ಸ್ನೇಹಿ ಆ್ಯಪ್ ಆಗಿದ್ದು, ಸಾಮಾನ್ಯ, ತತ್ಕಾಲ್ ಮತ್ತು ಪ್ರೀಮಿಯಂ ತತ್ಕಾಲ್ ಕೋಟದಡಿ ಟಿಕೆಟ್ ಬುಕ್ ಮಾಡಬಹುದಾಗಿದೆ.
- ಈ ಆ್ಯಪ್ ನಲ್ಲಿ ಸುಮಾರು 40 ಹೆಚ್ಚು ಬ್ಯಾಂಕ್ ಗಳ ಡೆಬಿಟ್ ಕಾರ್ಡ್, ಕ್ರೆಡಿಟ್ ಕಾರ್ಡ್ ಹಾಗೂ ನೆಟ್ ಬ್ಯಾಂಕಿಂಗ್ ಮೂಲಕ ಪಾವತಿಯನ್ನು ಮಾಡಬಹುದಾಗಿದೆ.

**ನವೆಂಬರ್ 2016 ರಲ್ಲಿ ಕೈಗಾರಿಕಾ ಉತ್ಪಾದನೆ ಶೇ 5.7**



ಭಾರತದ ಕೈಗಾರಿಕಾ ಉತ್ಪಾದನೆ ಶೇ.5.7 ಕ್ಕೆ ಏರಿಕೆಯಾಗಿರುವುದಾಗಿ ಇಂಡೆಕ್ಸ್ ಆಫ್ ಇಂಡಸ್ಟ್ರೀಯಲ್ ಪ್ರೊಡಕ್ಷನ್ (Index of Industrial Production) ವರದಿ ತಿಳಿಸಿದೆ. ನೋಟು ನಿಷೇಧದ ಬಳಿಕವೂ ಕೈಗಾರಿಕಾ ಉತ್ಪಾದನೆ ಕಳೆದ 13 ತಿಂಗಳುಗಳಲ್ಲೇ ಅತಿ ಹೆಚ್ಚು ಏರಿಕೆ ಕಂಡಿದ್ದು ಶೇ.5.7 ರಷ್ಟಾಗಿದೆ. ನವೆಂಬರ್ ತಿಂಗಳಿಗೂ ಮುನ್ನ ಕೈಗಾರಿಕಾ ಉತ್ಪಾದನೆ ದರ ಶೇ.3.4 ರಷ್ಟಿತ್ತು. ಅಕ್ಟೋಬರ್ ತಿಂಗಳಲ್ಲಿ ಶೇ.1.8 ರಷ್ಟು ಕುಸಿದಿದ್ದ ಕೈಗಾರಿಕಾ ಉತ್ಪಾದನೆ ನವೆಂಬರ್ ತಿಂಗಳಲ್ಲಿ ಶೇ.5.7 ಕ್ಕೆ ಏರಿಕೆಯಾಗಿದೆ.

**ಪ್ರಮುಖಾಂಶಗಳು:**

- ಉತ್ಪಾದನ ವಲಯ: ನವೆಂಬರ್ ನಲ್ಲಿ ಶೇ 5.5% ಬೆಳವಣಿಗೆ ಕಂಡಿದೆ
- ಗಣಿಗಾರಿಕೆ ವಲಯ: ಶೇ 3.5% ಬೆಳವಣಿಗೆ ಕಂಡಿದೆ
- ವಿದ್ಯುತ್ ಉತ್ಪಾದನೆ: ಶೇ 8.9% ಏರಿಕೆಯಾಗಿದೆ
- ಬಂಡವಾಳ ಸರಕು: ಬಂಡವಾಳ ಸರಕು ಉತ್ಪಾದನೆ ಶೇ 15% ರಷ್ಟು ಏರಿಕೆಯಾಗಿದೆ

**ಐಐಪಿ ಸೂಚ್ಯಂಕ:**

ಇಂಡೆಕ್ಸ್ ಆಫ್ ಇಂಡಸ್ಟ್ರಿಯಲ್ ಪ್ರೊಡಕ್ಷನ್ (ಐಐಪಿ)ಯನ್ನು ಕೇಂದ್ರ ಅಂಕಿಅಂಶ ಮತ್ತು ಕಾರ್ಯಕ್ರಮ ಅನುಷ್ಠಾನ ಸಚಿವಾಲಯದ ಕೇಂದ್ರ ಅಂಕಿಅಂಶ ಸಂಸ್ಥೆ ಪ್ರತಿ ತಿಂಗಳು ಹೊರತರುತ್ತಿದೆ. ಸೂಚ್ಯಂಕವು ಉತ್ಪಾದನ ವಲಯ (620), ಗಣಿಗಾರಿಕೆ (61) ಹಾಗೂ ವಿದ್ಯುತ್ (1) ವಲಯದ ಒಟ್ಟು 682 ಸರಕುಗಳನ್ನು ಒಳಗೊಂಡಿದೆ.

**2017-18ನೇ ಸಾಲಿನಲ್ಲಿ ಭಾರತದಲ್ಲಿ ನಿರುದ್ಯೋಗ ಪ್ರಮಾಣ ಹೆಚ್ಚಳ**




ವಿಶ್ವಸಂಸ್ಥೆಯ ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್ಒ) ಹೊರತಂದಿರುವ 2017 ವಿಶ್ವ ಉದ್ಯೋಗ ಮತ್ತು ಸಾಮಾಜಿಕ ಮುನ್ನೋಟ ವರದಿ ಪ್ರಕಾರ ಭಾರತದಲ್ಲಿ 2017ರ ವೇಳೆಗೆ 1 ಲಕ್ಷ ಹಾಗೂ 2018ರಲ್ಲಿ 2 ಲಕ್ಷ ಹೆಚ್ಚಳವಾಗಲಿದೆ.

**ವರದಿಯ ಪ್ರಮುಖಾಂಶಗಳು:**

- ಭಾರತದ ನಿರುದ್ಯೋಗ ಪ್ರಮಾಣ 2016ರಲ್ಲಿ 17.7 ದಶಲಕ್ಷವಿದ್ದು, 2017ರಲ್ಲಿ 17.8 ದಶಲಕ್ಷಕ್ಕೆ ಏರಿಕೆಯಾಗಲಿದೆ. 2018ರಲ್ಲಿ ಈ ಪ್ರಮಾಣ 18ದಶಲಕ್ಷ ತಲುಪಲಿದೆ.
- 2016ರಲ್ಲಿ ಭಾರತದಲ್ಲಿ ಉದ್ಯೋಗ ಸೃಷ್ಟಿ ಉತ್ತಮವಾಗಿದೆ. ಕಳೆದ ವರ್ಷ ಸುಮಾರು 13.4 ಮಿಲಿಯನ್ ಉದ್ಯೋಗ ಸೃಷ್ಟಿಯಾಗಿದೆ.
- ಜಾಗತಿಕ ಮಟ್ಟದಲ್ಲಿ ನಿರುದ್ಯೋಗಿಗಳ ಪ್ರಮಾಣದಲ್ಲಿ ಏರಿಕೆಯಾಗಲಿದೆ. ಜಾಗತಿಕ ನಿರುದ್ಯೋಗ ಪ್ರಮಾಣ ಕಳೆದ ವರ್ಷದ ಶೇಕಡ 5.7% ರಿಂದ 5.8%ಕ್ಕೆ ತಲುಪಲಿದೆ.
- ಜಾಗತಿಕ ಆರ್ಥಿಕ ಮತ್ತು ಸಾಮಾಜಿಕ ಬಿಕ್ಕಟ್ಟಿನಿಂದ ಉದ್ಭವವಾದ ತೊಂದರೆಗಳಿಂದ ನಿರುದ್ಯೋಗ ಪ್ರಮಾಣ ಹೆಚ್ಚಾಗಲಿದೆ.

## " SEZ India" ಮೊಬೈಲ್ ಆ್ಯಪ್ ಬಿಡುಗಡೆಗೊಳಿಸಿದ ವಾಣಿಜ್ಯ ಸಚಿವಾಲಯ

Department of Commerce
Ministry of Commerce & Industry
Government of India

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ "SEZ India" ಮೊಬೈಲ್ ಆ್ಯಪ್ ಅನ್ನು ಬಿಡುಗಡೆಗೊಳಿಸಿದೆ. ಸಚಿವಾಲಯದ ಇ-ಆಡಳಿತ ಅಭಿಯಾನದ ಅಂಗವಾಗಿ ಈ ಆ್ಯಪ್ ಅನ್ನು ಬಿಡುಗಡೆಗೊಳಿಸಲಾಗಿದ್ದು, ವಿಶೇಷ ಆರ್ಥಿಕ ವಲಯ ಘಟಕ ಹಾಗೂ ಅಭಿವೃದ್ದಿದಾರರಿಗೆ ನೆರವಾಗಲು ಈ ಆ್ಯಪ್ ಸಹಾಯವಾಗಲಿದೆ. ಈ ಆ್ಯಪ್ ಬಳಸಿ ಎಸ್ಇಝೆಡ್ ಘಟಕಗಳ ಅಭಿವೃದ್ದಿದಾರರು ಮಾಹಿತಿ ಹಾಗೂ ತಮ್ಮ ವಹಿವಾಟನ್ನು ಸುಲಭವಾಗಿ ಆನ್ ಲೈನ್ ಮೂಲಕ ಗುರುತಿಸಬಹುದಾಗಿದೆ.

**ಈ ಆ್ಯಪ್ ನಲ್ಲಿ ನಾಲ್ಕು ವಿಭಾಗಗಳಿವೆ:**

- **ಎಸ್ಇಝೆಡ್ ಮಾಹಿತಿ:** ಇದರಡಿ ವಿಶೇಷ ಆರ್ಥಿಕ ವಲಯ-2005 ಕಾಯಿದೆಯ ಸಂಪೂರ್ಣ ಮಾಹಿತಿ, ಎಸ್ಇಝೆಡ್ ನಿಯಮ-2006, ಎಸ್ಇಝೆಡ್ ಸಂಬಂಧಿಸಿದ ಸಂಪೂರ್ಣ ಮಾಹಿತಿ ಹಾಗೂ ಸಚಿವಾಲಯದ ಸುತ್ತೋಲೆಗಳನ್ನು ನೋಡಬಹುದು.
- **ವ್ಯಾಪಾರ ಮಾಹಿತಿ:** ಈ ವಿಭಾಗದಲ್ಲಿ ಫಾರಿಸ್ ಟ್ರೇಡ್ ಪಾಲಿಸಿ, ಕಸ್ಟಮ್ & ಎಕ್ಸೈಸ್ ಅಧಿಸೂಚನೆ ಸಂಬಂಧಿಸಿದ ಮಾಹಿತಿ ಇದರಲ್ಲಿ ಲಭ್ಯವಿರಲಿದೆ.
- **ಸಂಪರ್ಕ ಮಾಹಿತಿ:** ಎಸ್ಇಝೆಡ್ ಗೆ ಸಂಬಂಧಿಸಿದ ಆಯುಕ್ತರ ಕಚೇರಿ ಸಂಪರ್ಕ ಮಾಹಿತಿ, ಡೈರೆಕ್ಟರ್ ಜನರಲ್ ರವರ ಸಂಪರ್ಕ ಮಾಹಿತಿ ಸೇರಿದಂತೆ ಸಂಬಂಧಿಸಿದವರ ಮಾಹಿತಿ ದೊರೆಯಲಿದೆ.
- **ಎಸ್ಇಝೆಡ್ ಆನ್ ಲೈನ್ ವಹಿವಾಟು:** ಆಮದು/ರಫ್ತುದಾರರ ಬಿಲ್ ಸೇರಿದಂತೆ ವಹಿವಾಟಿಗೆ ಸಂಬಂಧಿಸಿದ ಸಂಪೂರ್ಣ ಮಾಹಿತಿ ಆನ್ ಲೈನ್ ನಲ್ಲಿ ಸಿಗಲಿದೆ.

## ನವದೆಹಲಿಯಲ್ಲಿ ಎರಡನೇ ರೈಸಿನಾ ಡೈಲಾಗ್ ಸಮಾವೇಶ



ಕೇಂದ್ರ ವಿದೇಶಾಂಗ ವ್ಯವಹಾರ ಸಚಿವಾಲಯ ಆಯೋಜಿಸುವ ವಾರ್ಷಿಕ ರೈಸಿನಾ ಡೈಲಾಗ್ ನ ಎರಡನೇ ಆವೃತ್ತಿಗೆ ನವದೆಹಲಿಯಲ್ಲಿ ಚಾಲನೆ ನೀಡಲಾಯಿತು. "ದಿ ನ್ಯೂ ನಾರ್ಮಲ್: ಮಲ್ಟಿಲ್ಯಾಟರಲಿಸಂ ಇನ್ ಎ ಮಲ್ಟಿಪೋಲರ್ ವರ್ಲ್ಡ್" ಇದು ಈ ವರ್ಷದ ಧ್ಯೇಯವಾಕ್ಯ. ಈ ಮಹತ್ವಕಾಂಕ್ಷಿ ಭೌಗೋಳಿಕ ರಾಜಕೀಯ ಸಮಾವೇಶಕ್ಕೆ ಪ್ರಧಾನಿ ನರೇಂದ್ರ ಮೋದಿರವರು ಚಾಲನೆ ನೀಡಿದರು. 65 ದೇಶಗಳ ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

**ಪ್ರಧಾನಿ ಮೋದಿ ಭಾಷಣದ ಪ್ರಮುಖಾಂಶಗಳು**:

- **ಪಾಕಿಸ್ತಾನ ಮತ್ತು ಭಯೋತ್ಪಾದನೆ**: ಭಾರತದ ಜತೆಗೆ ಮಾತುಕತೆ ನಡೆಸಬೇಕು ಅಂದರೆ ಪಾಕಿಸ್ತಾನವು ಭಯೋತ್ಪಾದನೆಯಿಂದ ದೂರವಾಗಲೇಬೇಕು. ಭಾರತವೊಂದೇ ಶಾಂತಿಯ ಪಥದಲ್ಲಿ ನಡೆಯಲು ಸಾಧ್ಯವಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಸಮಾವೇಶದಲ್ಲಿ ಹೇಳಿದರು.
- **ಶಾಂತಿಯುತ ದಕ್ಷಿಣ ಏಷ್ಯಾ**: ದಕ್ಷಿಣ ಏಷ್ಯಾ ಹಾಗೂ ನೆರೆಯ ರಾಷ್ಟ್ರಗಳೊಂದಿಗೆ "ಶಾಂತಿ ಹಾಗೂ ಸೌಹಾರ್ದತೆ" ಕಾಪಾಡಲು ಭಾರತ ಸದಾ ಬದ್ದ.
- **ಚೀನಾ: ಭಾರತ**: ಚೀನಾ ಎರಡೂ ರಾಷ್ಟ್ರಗಳು ಪರಸ್ಪರ ಹಿತಾಸಕ್ತಿಗಳನ್ನು ಗೌರವಿಸಬೇಕು. ವ್ಯಾಪಾರ ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಚೀನಾಗೆ ಭಾರತದಲ್ಲಿ ಸಾಕಷ್ಟು ಅವಕಾಶವಿದೆ ಆದರೆ ದಕ್ಷಿಣ ಚೀನಾ ಸಮುದ್ರದ ಮೇಲೆ ಸಾರ್ವಭೌಮತ್ವ ಸಾಧಿಸಲು ಚೀನಾ ಒತ್ತಡ ಹೇರುತ್ತಿರುವುದು ಸಾಧುವಲ್ಲ.

- **ಸಿಪಿಇಸಿ**: ಮಹತ್ವಕಾಂಕ್ಷಿ ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ ಪಾಕ್ ಆಕ್ರಮಿತ ಕಾಶ್ಮೀರದ ಮೂಲಕ ಹಾದು ಹೋಗುವುದರಿಂದ ಸಾರ್ವಭೌಮತ್ವ ಅತಿಕ್ರಮಣವಾಗುವುದಿಲ್ಲ.
- **ಅಮೆರಿಕ:** ಡೋನಾಲ್ಡ್ ಟ್ರಂಪ್ ನೇತೃತ್ವದಲ್ಲಿ ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ಸಂಬಂಧ ಮತ್ತಷ್ಟು ಸುಧಾರಿಸಲು ಶ್ರಮಿಸಲಾಗುವುದು.

**ರೈಸಿನಾ ಡೈಲಾಗ್:**

- ರೈಸಿನಾ ಡೈಲಾಗ್ ಸಮಾವೇಶ ನವದೆಹಲಿಯಲ್ಲಿ ನಡೆಯುವ ವಾರ್ಷಿಕ ಸಮಾವೇಶ. ಭೌಗೋಳಿಕ ರಾಜಕೀಯ ಮತ್ತು ಭೌಗೋಳಿಕ ಆರ್ಥಿಕತೆಗೆ ಸಂಬಂಧಿಸಿದಂತೆ ಭಾರತ ನಡೆಸುವ ಪ್ರಮುಖ ಸಮಾವೇಶ ಇದಾಗಿದೆ.
- ಕೇಂದ್ರ ವಿದೇಶಾಂಗ ಸಚಿವಾಲಯ ಹಾಗೂ ಅಬ್ಸರ್ವರ್ ರಿಸರ್ಚ್ ಫೌಂಡೇಷನ್ ಎಂಬ ಸ್ವತಂತ್ರ ಚಿಂತಕರ ಚಾವಡಿ ಈ ಸಮಾವೇಶವನ್ನು ಆಯೋಜಿಸುತ್ತಿವೆ.
- ನವದೆಹಲಿಯಲ್ಲಿರುವ ರೈಸಿನಾ ಹಿಲ್ ನಲ್ಲಿ ಈ ಸಮಾವೇಶ ನಡೆಯುವ ಕಾರಣ ಇದಕ್ಕೆ ರೈಸಿನಾ ಡೈಲಾಗ್ ಎಂದು ಹೆಸರಿಡಲಾಗಿದೆ.
- ಈ ಸಮಾವೇಶದ ಮೊದಲ ಆವೃತಿ ಮಾರ್ಚ್ 2016ರಲ್ಲಿ ನಡೆದಿತ್ತು. "ಏಷ್ಯಾ: ರಿಜನಲ್ ಅಂಡ್ ಗ್ಲೋಬಲ್ ಕಮ್ಯೂನಿಟಿ" ಮೊದಲ ಸಮಾವೇಶದ ಧ್ಯೇಯವಾಕ್ಯವಾಗಿತ್ತು. ಸಿಂಗಾಪುರದ "ಶಾಂಗ್ರಿ ಲಾ ಡೈಲಾಗ್" ಮಾದರಿಯಲ್ಲೇ ಈ ಸಮಾವೇಶವನ್ನು ಆಯೋಜಿಸಲಾಗುತ್ತಿದೆ.

## "ಜಾಗತಿಕ ಪ್ರತಿಭೆ ಸೂಚ್ಯಂಕ (Global Talent Index)" ಭಾರತಕ್ಕೆ 92ನೇ ಸ್ಥಾನ



ಜಾಗತಿಕ ಪ್ರತಿಭೆ ಸ್ಪರ್ಧಾತ್ಮಕ ಸೂಚ್ಯಂಕ-2017ರಲ್ಲಿ 118 ರಾಷ್ಟ್ರಗಳ ಪೈಕಿ 92ನೇ ಸ್ಥಾನವನ್ನು ಪಡೆದುಕೊಂಡಿದೆ. ಈ ಸೂಚ್ಯಂಕದಡಿ ಪ್ರತಿಭೆಗಾಗಿ ರಾಷ್ಟ್ರಗಳ ಸ್ಪರ್ಧಾತ್ಮಕ ಸಾಮರ್ಥ್ಯವನ್ನು ಅಳೆಯಲಾಗುತ್ತದೆ. ಗ್ಲೋಬಲ್ ಬ್ಯುಸಿನೆಸ್ ಸ್ಕೂಲ್ INSEAD ಈ ಸೂಚ್ಯಂಕವನ್ನು, ಅಡೆಕ್ಕೊ ಗ್ರೂಪ್ ಮತ್ತು ಸಿಂಗಪುರದ ಹ್ಯೂಮನ್ ಕ್ಯಾಪಿಟಲ್ ಲೀಡರ್ಶಿಪ್ ಇನ್ಸ್ಟಿಟ್ಯೂಟ್ ಪಾಲುದಾರಿಕೆಯೊಂದಿಗೆ ಹೊರತರುತ್ತಿದೆ.

**ಪ್ರಮುಖಾಂಶಗಳು**:

- **ಟಾಪ್ 10 ರಾಷ್ಟ್ರಗಳು**: ಸ್ವಿಟ್ಜರ್ಲ್ಯಾಂಡ್ (1), ಸಿಂಗಾಪುರ (2), ಯುಕೆ (3), ಯುಎಸ್ (4), ಸ್ವೀಡನ್ (5), ಆಸ್ಟ್ರೇಲಿಯಾ (6), ಲಕ್ಸಂಬರ್ಗ್ (7), ಡೆನ್ಮಾರ್ಕ್ (8), ಫಿನ್ಲ್ಯಾಂಡ್ (9) ಮತ್ತು ನಾರ್ವೆ (10).
- **ಬ್ರಿಕ್ಸ್ ರಾಷ್ಟ್ರಗಳು**: ಬ್ರಿಕ್ಸ್ ರಾಷ್ಟ್ರಗಳ ಪೈಕಿ ಭಾರತ ಅತ್ಯಂತ ಕಳಪೆ ಸಾಧನೆ ಮಾಡಿದೆ. ಚೀನಾ (54), ರಷ್ಯಾ (56), ದಕ್ಷಿಣ ಆಫ್ರಿಕಾ (67) ಮತ್ತು ಬ್ರೆಜಿಲ್ (81) ನೇ ಸ್ಥಾನದಲ್ಲಿವೆ.
- ಪ್ರಸ್ತಕ ಸಾಲಿನ ಸೂಚ್ಯಂಕದಲ್ಲಿ ಭಾರತ ಕಳೆದ ಸೂಚ್ಯಂಕಕ್ಕಿಂದ 3 ಸ್ಥಾನ ಕುಸಿತ ಕಂಡಿದೆ. 2016 ರಲ್ಲಿ ಭಾರತ 89ನೇ ಸ್ಥಾನದಲ್ಲಿತ್ತು.
- ವಿದೇಶಿ ಪ್ರತಿಭೆಯನ್ನು ಆಕರ್ಷಿಸುವುದು ಭಾರತದ ಮುಂದಿರುವ ಬಹು ದೊಡ್ಡ ಸವಾಲು. ನುರಿತ ಜನರು ದೊಡ್ಡ ಪ್ರಮಾಣದಲ್ಲಿ ವಲಸೆ ಹೋಗುತ್ತಿರುವುದು ಸಹ ಆತಂಕಕಾರಿ ವಿಷಯವಾಗಿದೆ.

**ಇಂಧನ ಉಳಿತಾಯಕ್ಕೆ “ಮಿಷನ್ 41ಕೆ” ಜಾರಿಗೊಳಿಸಿದ ರೈಲ್ವೆ ಇಲಾಖೆ**



ಮುಂದಿನ ಹತ್ತು ವರ್ಷಗಳಲ್ಲಿ ಇಂಧನ ಬಳಕೆ ಮೇಲೆ ರೂ 41,000 ಕೋಟಿ ಉಳಿತಾಯ ಮಾಡುವ ಸಲುವಾಗಿ ರೈಲ್ವೆ ಸಚಿವಾಲಯ “ಮಿಷನ್ 41ಕೆ” ಆನಾವರಣಗೊಳಿಸಿದೆ. ರೈಲ್ವೆ ಸಚಿವ ಸುರೇಶ್ ಪ್ರಭು ನೇತೃತ್ವದಲ್ಲಿ ನಡೆದ ಭಾರತೀಯ ರೈಲ್ವೆ ಇಂಧನ ಉಪಕ್ರಮಗಳ ಮೇಲಿನ ದುಂಡು ಮೇಜಿನ ಚರ್ಚೆ ಸಮಯದಲ್ಲಿ ಈ ಕಾರ್ಯಕ್ರಮವನ್ನು ಘೋಷಿಸಲಾಯಿತು.

**ಪ್ರಮುಖಾಂಶಗಳು**:

- ಪ್ರಸ್ತುತ ಶೇ 50% ರೈಲು ಸಂಚಾರ ಡೀಸೆಲ್ ಅವಲಂಭಿತವಾಗಿದ್ದು, ಮುಂದಿನ ದಿನಗಳಲ್ಲಿ ಶೇ 90% ರೈಲು ಸಂಚಾರವನ್ನು ವಿದ್ಯುತ್ತೀಕರಣಗೊಳಿಸುವ ಮೂಲಕ “ಮಿಷನ್ 41ಕೆ”ಯ ಉದ್ದೇಶವನ್ನು ತಲುಪುವ ಗುರಿಹೊಂದಲಾಗಿದೆ.
- ರೈಲು ಇಲಾಖೆ ಹೆಚ್ಚು ಹೆಚ್ಚು ವಿದ್ಯುತ್ ಅನ್ನು DISCOM ಮೂಲಕ ಪರಿಚಯಿಸುವ ಬದಲು ಕಡಿಮೆ ದರದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಖರೀದಿಸಲು ನಿರ್ಧರಿಸಿದೆ. ಈ ಕ್ರಮದಿಂದ ಇಂಧನ ಮೇಲಿನ ಖರ್ಚಿನಲ್ಲಿ ಶೇ 25% ಉಳಿತಾಯ ಮಾಡಬಹುದಾದ ಆಲೋಚನೆಯನ್ನು ಹೊಂದಲಾಗಿದೆ.
- ಅಲ್ಲದೇ ಹೊಸ ಹೊಸ ತಂತ್ರಜ್ಞಾನಗಳ ಆವಿಷ್ಕಾರದ ಮೂಲಕ ರೈಲ್ವೆ ಇಲಾಖೆಯಲ್ಲಿ ವಿದ್ಯುತ್ ಬಳಕೆಯನ್ನು ಕಡಿಮೆಗೊಳಿಸಲು ಚಿಂತಿಸಲಾಗಿದೆ.
- ರೈಲ್ವೆ ಸಂಚಾರವನ್ನು ಸಂಪೂರ್ಣವಾಗಿ ವಿದ್ಯುದೀಕರಣಗೊಳಿಸುವ ಮೂಲಕ ಭಾರತೀಯ ರೈಲ್ವೆ ಇಂಧನ ಆಮದಿನ ಮೇಲಿನ ಆವಲಂಭನೆಯನ್ನು ತಗ್ಗಿಸಬಹುದಾಗಿದೆ ಅಲ್ಲದೇ ಇಂಧನ ಮೇಲಿನ ವೆಚ್ಚವನ್ನು ಕಡಿತಗೊಳಿಸಬಹುದು.

2016-17ನೇ ಸಾಲಿನ ರೈಲು ಬಜೆಟ್ ನಲ್ಲಿ1000 ಮೆಗಾ ವ್ಯಾಟ್ ಸೌರ ವಿದ್ಯುತ್ ಹಾಗೂ 200 ಮೆಗಾ ವ್ಯಾಟ್ ಪವನ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದೆ.

**ಸರ್ಕಾರಿ ಸ್ವಾಮ್ಯದ ಐದು ಜನರಲ್ ವಿಮಾ ಕಂಪನಿಗಳನ್ನು ಷೇರು ವಿನಿಮಯದಲ್ಲಿ ಸೇರ್ಪಡೆಗೊಳಿಸಲು ಒಪ್ಪಿಗೆ**



ಸರ್ಕಾರಿ ಸ್ವಾಮ್ಯದ ಐದು ಜನರಲ್ ವಿಮಾ ಕಂಪನಿಗಳನ್ನು ಷೇರು ವಿನಿಮಯ ಪಟ್ಟಿಯಲ್ಲಿ ಸೇರ್ಪಡೆಗೊಳಿಸಲು ಆರ್ಥಿಕ ವ್ಯವಹಾರಗಳ ಮೇಲಿನ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ಈ ಐದು ವಿಮಾ ಕಂಪನಿಗಳೆಂದರೆ ನ್ಯೂ ಇಂಡಿಯಾ ಅಶುರೆನ್ಸ್ ಕಂಪನಿ ಲಿಮಿಟೆಡ್, ಯುನೈಟೆಡ್ ಇಂಡಿಯಾ ಇನ್ಶುರೆನ್ಸ್ ಕಂಪನಿ ಲಿಮಿಟೆಡ್, ಒರಿಯೆಂಟಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್, ನ್ಯಾಷನಲ್ ಇನ್ಶುರೆನ್ಸ್ ಕಂಪನಿ ಲಿಮಿಟೆಡ್ ಮತ್ತು ಜನರಲ್ ಇನ್ಶುರೆನ್ಸ್ ಕಾರ್ಪೋರೇಶನ್ ಆಫ್ ಇಂಡಿಯಾ. ಈ ಐದು ವಿಮಾ ಕಂಪನಿಗಳ ಷೇರು ಪಾಲುದಾರಿಕೆಯನ್ನು ಸೆಬಿ ಮತ್ತು ಭಾರತೀಯ ವಿಮಾ ಅಭಿವೃದ್ದಿ ಪ್ರಾಧಿಕಾರದ (IRDAI) ನಿಯಮಗಳ ಪ್ರಕಾರ ಕಾಲಕ್ರಮೇಣ ಶೇ 100% ರಿಂದ ಶೇ 75%ಕ್ಕೆ ಇಳಿಸಲಾಗುವುದು.

**ನಿರ್ಣಯದ ಮಹತ್ವ?**

- ಷೇರು ವಿನಿಮಯ ಪಟ್ಟಿಯಲ್ಲಿ ಸೇರ್ಪಡೆಗೊಳಿಸುವ ಮೂಲಕ ಸೆಬಿ ಅಂಗೀಕಾರದ ಅವಶ್ಯಕತೆಯಂತೆ ಕಂಪನಿಗಳ ಕಾರ್ಯಾಚರಣೆಯಲ್ಲಿ ಪಾರದರ್ಶಕತೆ ಮತ್ತು ಇಕ್ವಿಟಿಯನ್ನು ತರುವುದು.

- ಸಾಂಸ್ಥಿಕ ಆಡಳಿತ ಮತ್ತು ಅಪಾಯ ನಿರ್ವಹಣೆ ಸುಧಾರಿಸುವ ಮೂಲಕ ದಕ್ಷತೆಯನ್ನು ಹೆಚ್ಚಿಸುವುದು. ಆ ಮೂಲಕ ಸಂಸ್ಥೆಗಳ ಬೆಳವಣಿಗೆ ಹಾಗೂ ಆದಾಯಕ್ಕೆ ಹೆಚ್ಚಿನ ಗಮನ ಹರಿಸಲು ಸಾಧ್ಯವಾಗಲಿದೆ.
- ಕಂಪನಿಗಳು ತಮ್ಮ ವ್ಯವಹಾರವನ್ನು ವಿಸ್ತರಿಸಲು ಅಗತ್ಯವಿರುವ ನಿಧಿಯನ್ನು ಬಂಡವಾಳ ಮಾರುಕಟ್ಟೆಯಿಂದ ಪೂರೈಸಲು ಸಹಾಯವಾಗಲಿದೆ. ಇದರಿಂದ ಸರ್ಕಾರದ ಮೇಲೆ ಅವಲಂಬಿತವಾಗುವುದು ತಪ್ಪಲಿದೆ.

**<u>ಕರಡು ಉಕ್ಕು ನೀತಿ-2017 ಬಿಡುಗಡೆ: ರೂ 10 ಲಕ್ಷ ಕೋಟಿ ಬಂಡವಾಳ ಹೂಡಿಕೆ ನಿರೀಕ್ಷೆ</u>**



ಉಕ್ಕು ಸಚಿವಾಲಯ ಕರಡು ಉಕ್ಕು ನೀತಿ-2017 ಬಿಡುಗಡೆಗೊಳಿಸಿದ್ದು, ರೂ 10 ಲಕ್ಷ ಕೋಟಿ ಬಂಡವಾಳ ಹೂಡಿಕೆಯನ್ನು ನಿರೀಕ್ಷೆ ಮಾಡಲಾಗಿದೆ. ಅಲ್ಲದೇ ದೇಶಿಯ ಉಕ್ಕು ಉತ್ಪಾದನೆ ಸಾಮರ್ಥ್ಯವನ್ನು 2030-31ರ ವೇಳೆಗೆ 300 ಮಿಲಿಯನ್ ಟನ್ಗೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ. ಇದರಿಂದ 11 ಲಕ್ಷ ಹೊಸ ಹುದ್ದೆ ಸೃಷ್ಟಿಯಾಗಲಿದೆ ಎಂದು ಅಂದಾಜಿಸಲಾಗಿದೆ.

**ನೀತಿಯ ಪ್ರಮುಖಾಂಶಗಳು:**

- **ಎರಡು ಪ್ರಮುಖ ಗುರಿ:** ಜಾಗತಿಕವಾಗಿ ಸ್ಪರ್ಧೆಯನ್ನು ಒಡ್ಡುವ ಉಕ್ಕು ಉತ್ಪಾದನೆ ಉದ್ದಿಮೆಯನ್ನು ಸೃಷ್ಟಿಸುವುದು ಹಾಗೂ ತಾಂತ್ರಿಕವಾಗಿ ಮುಂದುವರೆದ, ಜಾಗತಿಕವಾಗಿ ಸ್ಪರ್ಧಾತ್ಮಕವಾಗಿರುವ ಸ್ವಾವಲಂಭಿಯಾದ ಉಕ್ಕಿನ ಉದ್ಯಮವನ್ನು ರಚಿಸುವುದು.
- ಅಧಿಕ ಬಂಡವಾಳ, ಆಮದು ಅವಲಂಭನೆ, ಕಚ್ಚಾ ವಸ್ತುಗಳು ಹಾಗೂ ಆರ್ಥಿಕ ಒತ್ತಡ ಉಕ್ಕು ಕ್ಷೇತ್ರದ ಅಭಿವೃದ್ದಿಯನ್ನು ಕುಂಠಿತಗೊಳಿಸಿವೆ. ಇವುಗಳ ಮೇಲೆ ಹೆಚ್ಚಿನ ಗಮನವನ್ನು ಹರಿಸಲಾಗಿದೆ.
- **ಗ್ಯಾಸ್ ಆಧರಿತ ಉಕ್ಕು ಘಟಕ**: ಗ್ಯಾಸ್ ಆಧರಿತ ಹಾಗೂ ವಿದ್ಯುತ್ ಕುಲುಮೆ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿ, ಕಲ್ಲಿದ್ದಲ್ಲಿನ ಆಮದಿನ ಮೇಲೆ ಅವಲಂಭನೆಯನ್ನು ಕಡಿಮೆಗೊಳಿಸಿ ಉಕ್ಕು ಉತ್ಪಾದನೆಯ ವೆಚ್ಚವನ್ನು ಕಡಿಮೆಗೊಳಿಸುವುದು.
- **ಕರಾವಳಿ ತೀರಾದಲ್ಲಿ ಹಸಿರುವಲಯ ಉಕ್ಕುಘಟಕಗಳು**: ಕೇಂದ್ರ ಸರ್ಕಾರದ ಮಹತ್ವಕಾಂಕ್ಷಿ ಸಾಗರಮಾಲ ಯೋಜನೆಯಡಿ ಈ ಉಕ್ಕುಘಟಕಗಳನ್ನು ಅಭಿವೃದ್ಧಿಪಡಿಸಿ ಅಗ್ಗದ ಕಲ್ಲಿದ್ದಲ್ಲನ್ನು ಬಳಸಿ ರಫ್ತನ್ನು ಹೆಚ್ಚಿಸುವುದು.

**<u>ಭ್ರಷ್ಟಾಚಾರ ಸೂಚ್ಯಂಕ: 79ನೇ ಸ್ಥಾನದಲ್ಲಿ ಭಾರತ</u>**




ಬರ್ಲಿನ್ ಮೂಲದ ಭ್ರಷ್ಟಾಚಾರ ವಿರೋಧಿ ಸಂಸ್ಥೆ ಟ್ರಾನ್ಸಪೆರೆನ್ಸಿ ಇಂಟರ್ನ್ಯಾಷನಲ್ (Transparency International) ಬಿಡುಗಡೆಗೊಳಿಸಿರುವ ಭ್ರಷ್ಟಾಚಾರ ಸೂಚ್ಯಂಕದಲ್ಲಿ ಭಾರತ 79ನೇ ಸ್ಥಾನವನ್ನು ಪಡೆದುಕೊಂಡಿದೆ. ವಿಶ್ವಸಂಸ್ಥೆಯ ಅಂಕಿ ಅಂಶ, ವಿಶ್ವ ಆರ್ಥಿಕ ವೇದಿಕೆ ಹಾಗೂ ಇತರ ಸಂಸ್ಥೆಗಳ ವರದಿಗಳನ್ನು ಬಳಸಿಕೊಂಡು ಶ್ರೇಯಾಂಕ ಪಟ್ಟಿಯನ್ನು ತಯಾರಿಸಲಾಗಿದೆ. ಭ್ರಷ್ಟಾಚಾರವನ್ನು ಲೆಕ್ಕಹಾಕಲು ಸೊನ್ನೆಯಿಂದ 100 ಅಂಕಗಳ ಮಾಪನದ ಆಧಾರದ ಮೇಲೆ ದೇಶಗಳಿಗೆ ಶ್ರೇಯಾಂಕ ನೀಡಲಾಗಿದೆ. ಸೊನ್ನೆ ಸ್ಥಾನ ಪಡೆದ ರಾಷ್ಟ್ರದಲ್ಲಿ ಅತಿ ಹೆಚ್ಚು ಭ್ರಷ್ಟಾಚಾರ ಹಾಗೂ ನೂರನೇ ಸ್ಥಾನ ಪಡೆದ ದೇಶವನ್ನು ಅತಿ ಕಡಿಮೆ ಭ್ರಷ್ಟಾಚಾರ ಹೊಂದಿರುವ ದೇಶ ಎಂದು ಪರಿಗಣಿಸಲಾಗುತ್ತದೆ.

**ಪ್ರಮುಖಾಂಶಗಳು**:

- **ಮೊದಲ ಹತ್ತು ರಾಷ್ಟ್ರಗಳು**: ನ್ಯೂಜಿಲ್ಯಾಂಡ್ ಮತ್ತು ಡೆನ್ಮಾರ್ಕ್ 90 ಅಂಕಗಳನ್ನು ಪಡೆಯುವ ಮೂಲಕ ಜಂಟಿಯಾಗಿ ಮೊದಲ ಸ್ಥಾನವನ್ನು ಪಡೆದುಕೊಂಡಿವೆ. ಫಿನ್ ಲ್ಯಾಂಡ್ (3ನೇ ಸ್ಥಾನ), ಸ್ವೀಡನ್ (4ನೇ ಸ್ಥಾನ), ಸ್ವಿಟ್ಜರ್ಲ್ಯಾಂಡ್ (5ನೇ ಸ್ಥಾನ), ನಾರ್ವೆ (6ನೇ ಸ್ಥಾನ), ಸಿಂಗಪುರ (7ನೇ ಸ್ಥಾನ), ನೆದರ್ಲ್ಯಾಂಡ್ (8ನೇ ಸ್ಥಾನ), ಕೆನಡ (9ನೇ ಸ್ಥಾನ) ಮತ್ತು ಜರ್ಮನಿ (10ನೇ) ಸ್ಥಾನದಲ್ಲಿವೆ.
- **ಪಟ್ಟಿಯಲ್ಲಿ ಕೆಳಮಟ್ಟದಲ್ಲಿರುವ ರಾಷ್ಟ್ರಗಳು**: ಸೊಮೊಲಿಯಾ ವಿಶ್ವದ ಅತ್ಯಂತ ಭ್ರಷ್ಟಾಚಾರ ಪೀಡಿತ ರಾಷ್ಟ್ರವೆನಿಸಿದೆ. ಸಿರಿಯಾ, ದಕ್ಷಿಣ ಸೂಡಾನ್, ದಕ್ಷಿಣ ಕೊರಿಯಾ, ಆಫ್ಘಾನಿಸ್ತಾನ ಮತ್ತು ಇರಾಕ್ ಪಟ್ಟಿಯಲ್ಲಿ ಕೆಳಹಂತದಲ್ಲಿವೆ.
- ಪ್ರಸ್ತುತ ಆವೃತ್ತಿಯ ಸೂಚ್ಯಂಕದಲ್ಲಿ ಭಾರತ, ಚೀನಾ ಮತ್ತು ಬ್ರೆಜಿಲ್ 40 ಅಂಕಗಳೊಂದಿಗೆ ಪಟ್ಟಿಯಲ್ಲಿ ಮಧ್ಯಮ ಸ್ಥಾನವನ್ನು ಪಡೆದುಕೊಂಡಿವೆ.
- 2016ರ ಸೂಚ್ಯಂಕಕ್ಕೆ ಹೋಲಿಸಿದರೆ ಭಾರತ ಎರಡು ಅಂಕವನ್ನು ಹೆಚ್ಚಿಸಿಕೊಂಡಿದೆ. 2016 ರಲ್ಲಿ ಭಾರತ 38 ಅಂಕಗಳನ್ನು ಪಡೆದುಕೊಂಡಿತ್ತು.
- ಧಕ್ಷಿಣ ಏಷ್ಯಾ ರಾಷ್ಟ್ರಗಳ ಪೈಕಿ ಬಾಂಗ್ಲದೇಶ 27 ಮತ್ತು ನೇಪಾಳ 28ನೇ ಸ್ಥಾನವನ್ನು ಪಡೆದುಕೊಳ್ಳುವ ಮೂಲಕ ಭ್ರಷ್ಟಾಚಾರ ಹೆಚ್ಚಾಗಿರುವ ದೇಶಗಳಾಗಿ ಹೊರಹೊಮ್ಮಿವೆ.

**<u>ವರಿಷ್ಠ ಪಿಂಚಣಿ ಭಿಮಾ ಯೋಜನೆ-2017ಗೆ ಕೇಂದ್ರ ಸಚಿವ ಸಂಪುಟ ಒಪ್ಪಿಗೆ</u>**



ಕೇಂದ್ರ ಸಚಿವ ಸಂಪುಟ "ವರಿಷ್ಠ ಪಿಂಚಣಿ ಭಿಮಾ ಯೋಜನೆ 2017" ಜಾರಿಗೊಳಿಸಲು ಅನುಮೋದನೆ ನೀಡಿದೆ. ಕೇಂದ್ರ ಸರ್ಕಾರದ ಆರ್ಥಿಕ ಸೇರ್ಪಡೆ ಹಾಗೂ ಸಾಮಾಜಿಕ ಭದ್ರತೆ ಬದ್ಧತೆಯ ಅಂಗವಾಗಿ ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಈ ಯೋಜನೆಯನ್ನು 2016-17ನೇ ಹಣಕಾಸು ವರ್ಷದಿಂದಲೇ "ಭಾರತೀಯ ಜೀವ ವಿಮಾ ನಿಗಮ" ಅನುಷ್ಠಾನಗೊಳಿಸಲಿದೆ. ಯೋಜನೆಯನ್ನು ಜಾರಿಗೊಳಿಸದ ಒಂದು ವರ್ಷ ಅವಧಿಯೊಳಗೆ ಯೋಜನೆಗೆ ಚಂದದಾರರಾಗಬಹುದು.

**ಯೋಜನೆಯ ಪ್ರಮುಖಾಂಶಗಳು:**

- ಹಿರಿಯ ನಾಗರಿಕರಿಗೆ ಹಾಗೂ 60 ವರ್ಷ ಮೇಲ್ಪಟ್ಟವರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವುದು ಹಾಗೂ ಅನಿರ್ದಿಷ್ಟ ಮಾರುಕಟ್ಟೆ ಪರಿಸ್ಥಿತಿಯಿಂದ ಆದಾಯ ಮೇಲಿನ ಬಡ್ಡಿ ದರ ಕುಸಿತದಿಂದ ರಕ್ಷಣೆ ನೀಡುವುದು ಯೋಜನೆಯ ಪ್ರಮುಖ ಉದ್ದೇಶ.
- ಯೋಜನೆಯಡಿ ಹತ್ತು ವರ್ಷಗಳ ಅವಧಿಗೆ ವಾರ್ಷಿಕ 8% ಖಚಿತ ಪಿಂಚಣಿಯನ್ನು ಪಡೆದುಕೊಳ್ಳಬಹುದು. ಪಿಂಚಣಿಯನ್ನು ಮಾಸಿಕ, ಅರ್ಧ ವಾರ್ಷಿಕ, ವಾರ್ಷಿಕ ಆಧಾರದ ಮೇಲೆ ಪಡೆಯಬಹುದಾಗಿದೆ.

## ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆಗಳು (ಐಐಎಂ)-2017 ಮಸೂದೆಗೆ ಒಪ್ಪಿಗೆ



ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆಗಳು (ಐಐಎಂ) ತಮ್ಮ ವಿದ್ಯಾರ್ಥಿಗಳಿಗೆ ಪದವಿ ನೀಡಲು ಹಾಗೂ ಐಐಎಂ ಗಳಿಗೆ ರಾಷ್ಟ್ರೀಯ ಮಹತ್ವದ ಸ್ಥಾನ ನೀಡುವ 'ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆ ಮಸೂದೆ - 2017'ಕ್ಕೆ ಕೇಂದ್ರ ಸಚಿವ ಸಂಪುಟ ಸಮ್ಮತಿ ಸೂಚಿಸಿದೆ. ಭಾರತೀಯ ಆಡಳಿತ ನಿರ್ವಹಣಾ ಸಂಸ್ಥೆಗಳು ಸೊಸೈಟಿಯಾಗಿ ನೋಂದಾಯಿಸಿಕೊಂಡಿರುವ ಕಾರಣ ಪದವಿಯನ್ನು ನೀಡುವಾಗಿಲ್ಲ. ಈಗಿನ ನಿಯಮಗಳ ಪ್ರಕಾರ ಐಐಎಂಗಳು ವಿದ್ಯಾರ್ಥಿಗಳಿಗೆ ಸ್ನಾತಕೋತ್ತರ ಡಿಪ್ಲೊಮಾ ಮತ್ತು ಫೆಲೋಷಿಪ್ ನೀಡುತ್ತಿವೆ. ಇವುಗಳನ್ನು ಕ್ರಮವಾಗಿ ಎಂಬಿಎ ಹಾಗೂ ಪಿಎಚ್.ಡಿಗೆ ಸಮಾನ ಎಂದು ಪರಿಗಣಿಸಲಾಗುತ್ತಿದೆ.

**ಮಸೂದೆಯ ಪ್ರಮುಖಾಂಶಗಳು**:

- ವಿದ್ಯಾರ್ಥಿಗಳಿಗೆ ಪದವಿ ನೀಡಲು ಅವಕಾಶ ಕಲ್ಪಿಸಲಿದೆ
- ಹೊಸ ಮಸೂದೆಯು ಐಐಎಂಗಳಿಗೆ ಸಂಪೂರ್ಣ ಸ್ವಾಯತ್ತ ಸ್ಥಾನ ಕಲ್ಪಿಸುತ್ತದೆ. ಐಐಎಂನ ಸಮನ್ವಯ ವೇದಿಕೆಯನ್ನು ಒಂದು ಸಲಹೆಗಾರ ಅಂಗವಾಗಿ ಸ್ಥಾಪಿಸಲಾಗುವುದು.
- ಐಐಎಂ ಮಂಡಳಿ ಸಂಸ್ಥೆಯ ನಿರ್ವಹಣೆಯನ್ನು ಮಾಡಲಿದೆ. ಐಐಎಂಗೆ ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ಈ ಮಂಡಳಿ ಆಯ್ಕೆಮಾಡಲಿದೆ.
- ಐಐಎಂ ಗಳ ಸಾಧನೆ ಹಾಗೂ ಪ್ರಗತಿಯ ಪರಾಮರ್ಶೆಯನ್ನು ಸ್ವತಂತ್ರ ಸಂಸ್ಥೆಯೊಂದು ನಡೆಸಲಿದೆ. ಈ ವಿವರಗಳನ್ನು ಸಾರ್ವಜನಿಕ ಪೋರ್ಟಲ್ ಗಳಲ್ಲಿ ಪ್ರಕಟಿಸಲಾಗುವುದು.
- ಐಐಎಂ ಗಳ ವಾರ್ಷಿಕ ವರದಿಯನ್ನು ಸಂಸತ್ತಿನಲ್ಲಿ ಮಂಡಿಸಲಾಗುವುದು. ಸಿಎಜಿ ರವರು ಲೆಕ್ಕ ತಪಾಸಣೆ ನಡೆಸಲಿದ್ದಾರೆ.

ಈ ಮಸೂದೆಯು ಐಐಎಂಗಳನ್ನು ರಾಷ್ಟ್ರೀಯ ಮಹತ್ವದ ಸಂಸ್ಥೆಗಳು ಎಂದು ಘೋಷಿಸಲು ಅವಕಾಶ ಕಲ್ಪಿಸುತ್ತದೆ. ಪ್ರಧಾನಿ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಸಂಪುಟ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಯಿತು. ಮುಂಬರುವ ಬಜೆಟ್ ಅಧಿವೇಶನದಲ್ಲಿ ಈ ಮಸೂದೆ ಸಂಸತ್ತಿನಲ್ಲಿ ಮಂಡನೆಯಾಗುವ ನಿರೀಕ್ಷೆ ಇದೆ.

ಆದರೆ ಐಐಎಂನ ಫೆಲೋಷಿಪ್ಪೆ ಎಲ್ಲೆಡೆ ಮಾನ್ಯತೆ ಇಲ್ಲ ಎನ್ನಲಾಗಿದೆ.

## "ರಬ್ಬರ್ ಮಣ್ಣಿನ ಮಾಹಿತಿ ವ್ಯವಸ್ಥೆ (Rubber Soil Information System)"ಗೆ ಚಾಲನೆ



ಕೇಂದ್ರ ಸರ್ಕಾರ ರಬ್ಬರ್ ಮಣ್ಣಿನ ಮಾಹಿತಿ ವ್ಯವಸ್ಥೆ (RubSIS)ಗೆ ಚಾಲನೆ ನೀಡಿದೆ. ಇದೊಂದು ಆನ್ ಲೈನ್ ವ್ಯವಸ್ಥೆಯಾಗಿದ್ದು, ರಬ್ಬರ್ ಬೆಳೆಗಾರರಿಗೆ ಮಣ್ಣಿನ ಗುಣಕ್ಕೆ ತಕ್ಕಂತೆ ರಸಗೊಬ್ಬರ ಮಿಶ್ರಣವನ್ನು ಶಿಫಾರಸ್ಸು ಮಾಡುವ ಸಲುವಾಗಿ ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ದೇಶದ ಅತಿ ಹೆಚ್ಚು ರಬ್ಬರ್ ಬೆಳೆಯುವ ಜಿಲ್ಲೆಯಾದ ಕೇರಳದ ಕೊಟ್ಟಯಂ ನಲ್ಲಿ ವ್ಯವಸ್ಥೆಗೆ ಚಾಲನೆ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಕೇರಳ ಹಾಗೂ ತಮಿಳುನಾಡಿನ ರಬ್ಬರ್ ಬೆಳೆಯುವ ಎಲ್ಲಾ ಪ್ರದೇಶಗಳಿಗೂ ವಿಸ್ತರಿಸಲಾಗುವುದು.

**ಪ್ರಮುಖಾಂಶಗಳು:**

- **RubSIS** ಅನ್ನು ಭಾರತೀಯ ರಬ್ಬರ್ ಸಂಶೋಧನಾ ಮಂಡಳಿ ಅಭಿವೃದ್ದಿಪಡಿಸಿದೆ. ರಬ್ಬರ್ ಮಂಡಳಿ ಹಾಗೂ ಇತರೆ ಮೂರು ಏಜೆನ್ಸಿಗಳೊಂದಿಗೆ ಈ ವ್ಯವಸ್ಥೆಯನ್ನು ಅಭಿವೃದ್ದಿಪಡಿಸಲಾಗಿದೆ.

- ಈ ಮೂರು ಏಜೆನ್ಸಿಗಳೆಂದರೆ ಕೇರಳದ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಇನ್ ಫಾರಮೇಶನ್ ಟೆಕ್ನಾಲಜಿ ಅಂಡ್ ಮ್ಯಾನೇಜ್ ಮೆಂಟ್, ನ್ಯಾಷನಲ್ ಬ್ಯೂರೋ ಆಫ್ ಸಾಯಿಲ್ ಸರ್ವೇ ಅಂಡ್ ಲ್ಯಾಂಡ್ ಯೂಸ್ ಪ್ಲಾನಿಂಗ್, ಐಸಿಎಆರ್ ಮತ್ತು ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್, ಇಸ್ರೋ.
- ಈ ವ್ಯವಸ್ಥೆಯಡಿ ರಬ್ಬರ್ ಬೆಳೆಗಾರರ ಬೆರಳ ತುದಿಯಲ್ಲಿ ರಬ್ಬರ್ ಬೆಳೆಗೆ ಅಗತ್ಯವಿರುವ ರಸಗೊಬ್ಬರ ಮಿಶ್ರಣ ಮಾಹಿತಿ ದೊರೆಯಲಿದೆ.
- ಇದೊಂದು ರಬ್ಬರ್ ಬೆಳೆಯುವ ಮಣ್ಣಿನ ಸಮರ್ಥನೀಯ ಹಾಗೂ ವೈಜ್ಞಾನಿಕ ನಿರ್ವಹಣಗೆ ವೆಚ್ಚ ಪರಿಣಾಮಕಾರಿ ಪರಿಣಾಮಕಾರಿ ಸಾಧನವಾಗಿದೆ. ಈ ವ್ಯವಸ್ಥೆಯ ಅಳವಡಿಕೆಯಿಂದ ಅತಿಯಾದ ರಾಸಾಯನಿಕ ಗೊಬ್ಬರ ಬಳಕೆ ತಡೆದು ಮಣ್ಣಿನ ಗುಣಮಟ್ಟವನ್ನು ಕಾಪಾಡಿಕೊಳ್ಳಬಹುದು.
- ಅಲ್ಲದೇ ರಬ್ಬರ್ ಬೆಳಗೆ ತಗುಲುವ ವೆಚ್ಚವನ್ನು ಕಡಿಮೆಗೊಳಿಸಿ, ಉತ್ಪಾದನೆಯಲ್ಲಿ ಹೆಚ್ಚಳವಾಗುವುದರ ಜೊತೆಗೆ ಪರಿಸರ ಮಾಲಿನ್ಯ ಸಹ ಕಡಿಮೆಯಾಗಲಿದೆ.

## ಭಾರತೀಯ ಅಂಚೆಯಿಂದ ಪೇಮೆಂಟ್ಸ್ ಬ್ಯಾಂಕ್ ಕಾರ್ಯಾರಂಭ

ಭಾರತೀಯ ಅಂಚೆ ಇಲಾಖೆಯಡಿ (ಕೇಂದ್ರ ಸಂವಹನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ) ಭಾರತೀಯ ಅಂಚೆಗೆ (ಇಂಡಿಯಾ ಪೋಸ್ಟ್) ಪೇಮೆಂಟ್ ಬ್ಯಾಂಕ್ ನಡೆಸಲು ಭಾರತೀಯ ರಿಸರ್ವ್ ಬ್ಯಾಂಕಿನಿಂದ ಅಂತಿಮ ಪರವಾನಗಿ ಲಭಿಸಿದೆ. ಆ ಮೂಲಕ ಏರ್ಟೆಲ್ ಮತ್ತು ಪೇಟಿಎಂ ನಂತರ ಪೇಮೆಂಟ್ ಬ್ಯಾಂಕ್ ಆರಂಭಿಸಲು ಅನುಮತಿ ಪಡೆದ ಮೂರನೇ ಸಂಸ್ಥೆ ಭಾರತೀಯ ಅಂಚೆ.

**ಪ್ರಮುಖಾಂಶಗಳು**:

- ಪ್ರಸ್ತುತ ಭಾರತೀಯ ಅಂಚೆ ಇಲಾಖೆ ದೇಶದಾದ್ಯಂತ 1,55,000 ಅಂಚೆ ಕಚೇರಿಗಳನ್ನು ಹೊಂದಿದೆ. ಈ ಎಲ್ಲಾ ಕಚೇರಿಗಳಲ್ಲೂ ಪೇಮೆಂಟ್ ಬ್ಯಾಂಕ್ ಸೇವೆಯನ್ನು ಆರಂಭಿಸಲಾಗುವುದು.
- ಇದರ ಜೊತೆಗೆ ಪೇಮೆಂಟ್ ಬ್ಯಾಂಕಿಗಾಗಿ 650 ಹೊಸ ಶಾಖೆಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಈ ಶಾಖೆಗಳು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಂಚೆ ಕಚೇರಿಗಳ ಬಳಿ ತೆರೆಯಲಾಗುವುದು.

**ಪೇಮೆಂಟ್ ಬ್ಯಾಂಕ್ ಎಂದರೇನು?**

ಸರ್ಕಾರದ ಆರ್ಥಿಕ ಸೇರ್ಪಡೆ ಗುರಿಯನ್ನು ಸಕಾರಗೊಳಿಸಲು ಭಾರತೀಯ ರಿಸರ್ವ್ ಬ್ಯಾಂಕ್ ಹೊರತಂದಿರುವ ವಿನೂತನ ಬ್ಯಾಂಕಿಂಗ್ ಮಾದರಿಯೇ "ಪೇಮೆಂಟ್ ಬ್ಯಾಂಕ್ ವ್ಯವಸ್ಥೆ".

- ಈ ಬ್ಯಾಂಕುಗಳು ಬೇಡಿಕೆ ಆಧರಿಸಿದ ಠೇವಣಿ ಸಂಗ್ರಹ, ಹಣ ಜಮಾ ಸೇವೆಗಳು, ಇಂಟರ್ನೆಟ್ ಬ್ಯಾಂಕಿಂಗ್ ಸೇವೆಗಳನ್ನು ನೀಡುತ್ತವೆ. ಆದರೆ ಸಾಲ ವಿತರಣೆ ಸೇವೆಗಳನ್ನು ನೀಡುವುದಿಲ್ಲ.
- ಪೇಮೆಂಟ್ ಬ್ಯಾಂಕ್‌ಗಳು ಸಣ್ಣ ಉದ್ದಿಮೆಗಳು ಹಾಗೂ ವೈಯುಕ್ತಿ ಖಾತೆಗೆ ಗರಿಷ್ಠ ರೂ 1 ಲಕ್ಷದ ವರೆಗೆ ಮಾತ್ರ ಠೇವಣೆಯನ್ನು ಇರಿಸಿಕೊಳ್ಳಬಹುದು. ತಮ್ಮ ಖಾತೆದಾರರಿಗೆ ಎಟಿಎಂ ಅಥವಾ ಡೆಬಿಟ್ ಕಾರ್ಡ್, ಭಿನ್ನ ಸ್ವರೂಪದ ಪ್ರೀಪೇಯ್ಡ್ ಕಾರ್ಡ್‌ಗಳನ್ನು ವಿತರಿಸಬಹುದು. ಆದರೆ ಕ್ರೆಡಿಟ್ ಕಾರ್ಡ್ ಗಳನ್ನು ವಿತರಿಸುವಾಗಿಲ್ಲ.
- ರಿಸ್ಕ್ ಅಲ್ಲದ ಸರಳ ಆರ್ಥಿಕ ಉತ್ಪನ್ನಗಳು ಅಂದರೆ ಮ್ಯೂಚುಯಲ್ ಫಂಡ್, ವಿಮೆ ಉತ್ಪನ್ನಗಳನ್ನು ವಿತರಿಸಬಹುದು. ಅನಿವಾಸಿ ಭಾರತೀಯರು ಈ ಬ್ಯಾಂಕಿನಲ್ಲಿ ಖಾತೆ ತರೆಯುವಂತೆ ಇಲ್ಲ.

- ಈ ವಿನೂತನ ಪೇಮೆಂಟ್ ಬ್ಯಾಂಕುಗಳು ಮೊಬೈಲ್ ಬ್ಯಾಂಕಿಂಗ್ ಸೇವೆ, ಸೂಪರ್ ಮಾರ್ಕೆಟ್‌ಗಳ ಸರಣಿಗೆ ಮತ್ತು ಸಣ್ಣ ಪ್ರಮಾಣದ ವಾಣಿಜ್ಯ ಸಂಸ್ಥೆಗಳ ವಹಿವಾಟಿಗೆ ಹಣ ಪಾವತಿ ಸೌಲಭ್ಯವನ್ನು ಶೀಘ್ರವಾಗಿ ಒದಗಿಸಿಕೊಡುತ್ತದೆ.

## ರಾಜ್ಯ

### ಸಹಕಾರಿ ಮತ್ತು ಸಕ್ಕರೆ ಸಚಿವ ಹೆಚ್.ಎಸ್.ಮಹದೇವ ಪ್ರಸಾದ್ ನಿಧನ



ಸಹಕಾರ ಮತ್ತು ಸಕ್ಕರೆ ಸಚಿವ ಎಚ್.ಎಸ್.ಮಹದೇವ ಪ್ರಸಾದ್ ತೀವ್ರ ಹೃದಯಾಘಾತದಿಂದ ಚಿಕ್ಕಮಗಳೂರು ನಗರದ ಹೊರವಲಯದ ಸೆರಾಯ್ ರೆಸಾರ್ಟ್‌ನಲ್ಲಿ ಮೃತಪಟ್ಟಿದ್ದಾರೆ. ಅವರಿಗೆ 59 ವರ್ಷ ವಯಸ್ಸಾಗಿತ್ತು.

**ಮಹದೇವ ಪ್ರಸಾದ್ ಬಗ್ಗೆ**:

- ಹಾಲಹಳ್ಳಿ ಶ್ರೀಕಂಠಶೆಟ್ಟಿ ಮಹದೇವ ಪ್ರಸಾದ್ (ಎಚ್.ಎಸ್. ಮಹದೇವ ಪ್ರಸಾದ್) ರವರು 1958 ಆಗಸ್ಟ 5 ರಂದು ಗುಂಡ್ಲುಪೇಟೆಯಲ್ಲಿ ಜನಿಸಿದರು.
- ಮುಖ್ಯಮಂತ್ರಿ ಸಿದ್ದರಾಮಯ್ಯ ರವರಿಗೆ ಆಪ್ತರಾಗಿದ್ದ ಅವರು 5 ಬಾರಿ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾಗಿದ್ದರು.
- ಪ್ರಸ್ತುತ ಅವರು ಸಕ್ಕರೆ ಮತ್ತು ಸಹಕಾರ ಸಚಿವರು ಹಾಗೂ ಚಾಮರಾಜನಗರದ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದರು.
- ಜನತಾ ಪರಿವಾರದಲ್ಲಿ ಗುರುತಿಸಿಕೊಂಡಿದ್ದ ಅವರು ನಂತರದ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ಸೇರಿದ್ದರು. ಈ ಹಿಂದೆ ಆಹಾರ ಮತ್ತು ನಾಗರಿಕ ಸರಬರಾಜು , ಕನ್ನಡ ಮತ್ತು ಸಂಸ್ಕೃತಿ ಖಾತೆಗಳನ್ನು ನಿರ್ವಹಿಸಿದ್ದರು.

### ಕರ್ನಾಟಕ ಲಲಿತಾ ಕಲಾ ಅಕಾಡೆಮಿ ಫೆಲೋಶಿಪ್ ಗೆ ವಾಸುದೇವ ಆಯ್ಕೆ



ಹಿರಿಯ ಕಲಾವಿದ ಎಸ್.ಜಿ.ವಾಸುದೇವ ಅವರನ್ನುಕರ್ನಾಟಕ ಲಲಿತಕಲಾ ಅಕಾಡೆಮಿಯ 2016ನೇ ಸಾಲಿನ ಸುವರ್ಣ ಗೌರವ ಫೆಲೋಷಿಪ್‌ಗೆ ಆಯ್ಕೆ ಮಾಡಲಾಗಿದೆ. ‘ಫೆಲೋಷಿಪ್ ₹ 2 ಲಕ್ಷ ಗೌರವಧನ ಒಳಗೊಂಡಿದೆ.

**ಸಂಶೋಧನಾ ಫೆಲೋಷಿಪ್:**

- ‘ಅಕಾಡೆಮಿಯ ಸಂಶೋಧನಾ ಫೆಲೋಷಿಪ್‌ಗೆ 2016–17ನೇ ಸಾಲಿನಲ್ಲಿ 22 ಜನ ಕಲಾವಿದರನ್ನು ಆಯ್ಕೆ ಮಾಡಲಾಗಿದೆ. ಅವರಲ್ಲಿ ದೃಶ್ಯಕಲೆ, ಕಲಾ ಶಿಕ್ಷಣ, ಗ್ರಾಫಿಕ್ಸ್ ಕಲೆಗಳಲ್ಲಿ ಪರಿಣಿತಿ ಹೊಂದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳು ಸೇರಿದ್ದಾರೆ
- ಸಂಶೋಧನೆಗಾಗಿ ಕಲಾವಿದರಿಗೆ ಮೂರು ಕಂತುಗಳಲ್ಲಿ ₹ 1 ಲಕ್ಷ ನೀಡಲಾಗುತ್ತಿದೆ’

**ಸಂಶೋಧನಾ ಫೆಲೋಷಿಪ್‌ಗೆ ಆಯ್ಕೆಯಾದರು**: ಆರ್.ನಿಂಗಪ್ಪ ನಾಯ್ಕರ್, ಎಫ್.ವಿ.ಚಿಕ್ಕಮಠ, ಡಾ.ರೇಣುಕಾ ಮಾರ್ಕಾಂಡೆ (ಧಾರವಾಡ), ಡಾ.ಪಿ.ವಿ.ಗವಾನಿ (ಬೆಳಗಾವಿ), ಡಿ.ಎಂ. ಡಾ.ಎಚ್.ಎನ್. ಕೃಷ್ಣೇಗೌಡ (ಮಂಡ್ಯ),ನಾರಾಯಣಪ್ಪ ಶೀನಪ್ಪ ಚಿತ್ರಗಾರ (ಕೊಪ್ಪಳ), ರಾಮದಾಸ ಅಡ್ಯಂತಾಯ (ಮೈಸೂರು), ಡಾ.ಸತೀಶ ಕುಮಾರ್ ಪಂಚಪ್ಪಾ ವಲ್ಲೇಪುರೆ (ಬೀದರ್), ಜಿ.ನೆಲ್ಲಗಿ ಅಶೋಕ, ಮ.ಸಂತೋಷ್‌ಕುಮಾರ್ ನಾಗರಾಳ (ವಿಜಯಪುರ), ಪ್ರದೀಪ್ ಕುಮಾರ್ (ದಾವಣಗೆರೆ), ಎಚ್.ಬಾಬುರಾವ್, ಮೀನಾಕ್ಷಿ, ಜಿ.ಸುಚಿತ್ರಾ ಲಿಂಗದಳ್ಳಿ,

ಡಾ.ಡಿ.ಕಾಶೀನಾಥ, ಮಹ್ಮದ್ ಅಯಾಜುದ್ದೀನ್ ಪಟೇಲ್ (ಕಲಬುರ್ಗಿ), ಕೃಷ್ಣವೇಣಿ, ನಿಹಾಲ್ ವಿಕ್ರಮ್ ರಾಜು (ಬಳ್ಳಾರಿ), ರಮೇಶ ತೇರದಾಳ, ಬಿ.ವಿ. ಗುರುಸ್ವಾಮಿ (ಬೆಂಗಳೂರು), ಸೂರ್ಯಕಾಂತ ನಂದೂರ್,

**ನಂಜನಗೂಡಿನ ಅಡಕನಹಳ್ಳಿಯಲ್ಲಿ 17ನೇ ರಾಷ್ಟ್ರೀಯ ಜಾಂಬೂರಿಗೆ ಅದ್ಧೂರಿ ಚಾಲನೆ**



ನಂಜನಗೂಡು ತಾಲೂಕಿನ ಅಡಕನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ 17ನೇ ರಾಷ್ಟ್ರೀಯ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೂರಿ ಕಾರ್ಯಕ್ರಮಕ್ಕೆ ಅದ್ದೂರಿ ಚಾಲನೆ ನೀಡಲಾಯಿತು. ರಾಷ್ಟ್ರಪತಿ ಪ್ರಣಬ್ ಮುಖರ್ಜಿ ರವರು 17ನೇ ರಾಷ್ಟ್ರೀಯ ಜಾಂಬೂರಿ ಕಾರ್ಯಕ್ರಮವನ್ನು ಉದ್ಘಾಟಿಸಿದರು. ರಾಜ್ಯಪಾಲ ವಜುಭಾಯಿ ವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಅನಂತಕುಮಾರ್, ರಾಜಮಾತೆ ಡಾ.ಪ್ರಮೋದಾದೇವಿ ಒಡೆಯರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವ ತನ್ವೀರ್ ಸೇಠ್ ಉಪಸ್ಥಿತರಿದ್ದರು.

**ಧ್ಯೇಯವಾಕ್ಯ**: "ಉತ್ತಮ ಭವಿಷ್ಯಕ್ಕಾಗಿ ಸಮಸ್ತರೂ ಸೇರೋಣ' ಎಂಬುದು 17ನೇ ರಾಷ್ಟ್ರೀಯ ಜಾಂಬೂರಿ ಕಾರ್ಯಕ್ರಮದ ಧ್ಯೇಯವಾಕ್ಯ.

**ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ:**

- ಬಾಲಕರ ಸ್ಕೌಟ್ಸ್ ಚಳುವಳಿ 1907ರಲ್ಲಿ ಪ್ರಾರಂಭಗೊಂಡಿತು. ಅಂದಿನ ಮೇಜರ್ ಜನರಲ್ ಆಫ್ ಆರ್ಮಿ ಲಾರ್ಡ್ ಬಡೆನ್ ಪೊವೆಲ್ ರವರು ಇಂಗ್ಲೆಂಡ್ ನ "ಬ್ರೌನ್  ಸಿ ಐಲ್ಯಾಂಡ್" ನಲ್ಲಿ ಪ್ರಾಯೋಗಿಕವಾಗಿ ಆಯೋಜಿಸಿದರು. ಆ ನಂತರ "ಸ್ಕೌಟಿಂಗ್ ಫಾರ್ ಬಾಯ್ಸ್" ಪುಸ್ತಕವನ್ನು ಹೊರತರುವ ಮೂಲಕ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ ಬಿರುಸಿನ ಪ್ರಚಾರವನ್ನು ಪಡೆದುಕೊಂಡಿತು.

**ಭಾರತದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ:**

- ಭಾರತದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಚಳುವಳಿ ಮೊದಲು ಆರಂಭಗೊಂಡಿದ್ದು ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯಲ್ಲಿ. 1909ರಲ್ಲಿ ಕ್ಯಾಪ್ಟನ್ ಟಿ.ಎಚ್.ಬೇಕರ್ ರವರು ಮೊದಲ ಸ್ಕೌಟ್ ಟ್ರೂಪ್ ಅನ್ನು ಆರಂಭಿಸಿದರು.
- ಪ್ರಾರಂಭದಲ್ಲಿ ಸ್ಕೌಟ್ಸ್ ಚಳುವಳಿಯಲ್ಲಿ ಭಾರತದ ಬಾಲಕರಿಗೆ ಅವಕಾಶವಿರದ ಕಾರಣ ಪಂಡಿತ್ ಮದನ್ ಮೋಹನ್ ಮಾಳ್ವಿಯ, ಪಂಡಿತ್ ಹೃದಯ್ ನಾಥ್ ಕುಂಜ್ರು ಮತ್ತು ಪಂಡಿತ್ ಶ್ರೀರಾಮ್ ಪಂಡಿತ್ ರವರು ಅಲಹಬಾದ್ ನಲ್ಲಿ ಸೇವಾ ಸಮಿತಿ ಸ್ಕೌಟ್ಸ್ ಒಕ್ಕೂಟವನ್ನು ಸ್ಥಾಪಿಸುವ ಮೂಲಕ ಭಾರತೀಯ ಯುವಕರಿಗೆ ಸ್ಕೌಟ್ಸ್ ಚಳುವಳಿಯನ್ನು ಮುಕ್ತಗೊಳಿಸಿದರು. ಡಾ. ಅನಿಬೆಸೆಂಡ್ ರವರು ಜಿ.ಎಸ್.ಅರುಣ್ ದಾಳೆ ರವರ ಸಹಕಾರದೊಂದಿಗೆ ಮದ್ರಾಸ್ ನಲ್ಲಿ ಪ್ರತ್ಯೇಕ ಸ್ಕೌಟ್ಸ್ ಅಸೋಸಿಯೇಷನ್ ಸ್ಥಾಪಿಸಿದರು.
- ಸ್ವಾತಂತ್ರ ಭಾರತದ ನಂತರ ಪ್ರತ್ಯೇಕ ಸ್ಕೌಟ್ಸ್/ಗೈಡ್ಸ್ ಅಸೋಸಿಯೇಷನ್ ಗಳನ್ನು ಒಗ್ಗೂಡಿಸುವ ಪ್ರಯತ್ನವನ್ನು ಮಾಡಲಾಯಿತು. ಅದರ ಫಲವಾಗಿ 7ನೇ ನವೆಂಬರ್, 1950 ರಂದು "ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್" ಜಾರಿಗೆ ಬಂದಿತು. 15ನೇ ಆಗಸ್ಟ 1951 ರಲ್ಲಿ ಬಾಲಕಿಯರ ಗೈಡ್ಸ್ ಒಕ್ಕೂಟವನ್ನು ಅಧಿಕೃತವಾಗಿ ಸೇರ್ಪಡೆಗೊಳಿಸಲಾಯಿತು.

**"ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್":**

- ದಿ ಭಾರತ್ ಸ್ಕೌಟ್ಸ್ ಅಂಡ್ ಗೈಡ್ಸ್ ಸ್ವಯಂಪ್ರೇರಿತ, ರಾಜಕೀಯ ಪ್ರೇರಿತವಲ್ಲದ ಹಾಗೂ ಜಾತ್ಯತೀತ ಸಂಸ್ಥೆಯಾಗಿದ್ದು, ಸೊಸೈಟಿ ನೋಂದಣಿ ಕಾಯಿದೆಯಡಿ ಸ್ಥಾಪಿಸಲಾಗಿದೆ. ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿದೆ.

**ರಾಷ್ಟ್ರೀಯ ಜಾಂಬೂರಿ ಕಾರ್ಯಕ್ರಮ:**

- 1909ರಲ್ಲಿ ಬೆಂಗಳೂರಿನ ಬಿಷಪ್ ಕಾಟನ್ ಶಾಲೆಯಲ್ಲಿ ಆರಂಭವಾದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿ, ಕರ್ನಾಟಕದಲ್ಲಿ ಉತ್ತಮವಾದ ಬೆಳವಣಿಗೆ ಕಂಡಿದೆ. 3ನೇ ಬಾರಿಗೆ ರಾಜ್ಯದಲ್ಲಿ ರಾಷ್ಟ್ರೀಯ ಜಾಂಬೂರಿ ಉತ್ಸವ ಆಯೋಜನೆಗೊಂಡಿದೆ. 1916ರಲ್ಲಿ ಮೊದಲ ಬಾರಿಗೆ ರಾಜ್ಯದಲ್ಲಿ ಜಾಂಬೂರಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ನಂತರ 1986ರಲ್ಲಿ ಎರಡನೇ ಬಾರಿಗೆ ಆಯೋಜಿಸಲಾಗಿತ್ತು. 2015ರಲ್ಲಿ ಸಿಲ್ವರ್ ಎಲಿಫೆಂಟ್ ಆವಾರ್ಡ್ ಸೇರಿದಂತೆ ಕರ್ನಾಟಕದ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಘಟಕ ಸಾಕಷ್ಟು ಪ್ರಶಸ್ತಿಗಳನ್ನು ತನ್ನದಾಗಿಸಿಕೊಂಡಿದೆ.

**2017 ವರ್ಷವನ್ನು ವನ್ಯಜೀವ ವರ್ಷವೆಂದು ಘೋಷಿಸಿದ ಕರ್ನಾಟಕ ಪ್ರವಾಸೋದ್ಯಮ ಇಲಾಖೆ**



ಕರ್ನಾಟದಲ್ಲಿ ವನ್ಯ ಜೀವಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಪ್ರವಾಸೋದ್ಯಮ ಇಲಾಖೆ 2017 ಅನ್ನು 'ವನ್ಯ ವರ್ಷ' ವನ್ನಾಗಿ ಆಚರಿಸಲು ನಿರ್ಧರಿಸಿದೆ. ವನ್ಯವರ್ಷ ಅಭಿಯಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಪ್ರವಾಸೋದ್ಯಮ ಸಚಿವ ಪ್ರಿಯಾಂಕ ಪ್ರಾರಂಭಿಸಿದರು.

**ಪ್ರಮುಖಾಂಶಗಳು**:

- ಜಂಗಲ್ ಟ್ರಾಕ್, ನಿತ್ಯಹರಿದ್ವರ್ಣ ಪಶ್ಚಿಮ ಘಟ್ಟಗಳ ಕಾಡುಗಳನ್ನು ಹಾಗೂ ಹೇರಳವಾದ ಪ್ರಾಣಿ ಹಾಗೂ ಸಸ್ಯ ಸಂಕುಲಗಳನ್ನು ಸಂರಕ್ಷಿಸುವುದು ಹಾಗೂ ಚಾರಣಿಗರು ಮತ್ತು ಪ್ರವಾಸಿಗರ ಆಕರ್ಷಕ ಕೇಂದ್ರವನ್ನಾಗಿಸುವುದು ಅಭಿಯಾನದ ಗುರಿಯಾಗಿದೆ.
- ಪ್ರವಾಸೋದ್ಯಮ ಇಲಾಖೆ ಪಶ್ಚಿಮಘಟ್ಟದಲ್ಲಿ 9 ಟ್ರಕ್ಕಿಂಗ್ ಮಾರ್ಗಗಳನ್ನು ಗುರುತಿಸಿದ್ದು, ಶೀಘ್ರವೇ ಪ್ರವಾಸಿಗರು ಹಾಗೂ ಚಾರಣಿಗರಿಗೆ ಮುಕ್ತವಾಗಲಿದೆ. ಈ ಮಾರ್ಗಗಳಲ್ಲಿ ಟ್ರಕ್ಕಿಂಗ್ ಪರಿಣಿತರಿಂದ ಪ್ರವಾಸದ ತರಬೇತಿ ಮತ್ತು ಪರಿಸರ ಸಂರಕ್ಷಣೆ ಬಗ್ಗೆ ಅರಿವು ಮೂಡಿಸುವುದು ಅಭಿಯಾನದ ಉದ್ದೇಶ.
- ಅಭಿಯಾನದ ಭಾಗವಾಗಿ ಟ್ರಕ್ಕಿಂಗ್ನಲ್ಲಿ ಅನೇಕ ಚಟುವಟಿಕೆಗಳ ಪಟ್ಟಿಯನ್ನು ತಯಾರಿಸಿದ್ದು, ಮೈಸೂರಿನಲ್ಲಿ ಏರೋ ಕ್ರೀಡಾ ಉತ್ಸವ, ಉಡುಪಿ ಮತ್ತು ಮಂಗಳೂರಿನಲ್ಲಿ ಬೀಚ್ ಸರ್ಫಿಂಗ್ ಇನ್ನು ಮುಂತಾದ ಚಟುವಟಿಕೆಗಳಿವೆ.

**<u>ಮೈಸೂರು ಶ್ರೀಚಾಮರಾಜೇಂದ್ರ ಮೃಗಾಲಯದಲ್ಲಿ ಹಕ್ಕಿಜ್ವರ ಪತ್ತೆ</u>**



ಮೈಸೂರಿನ ಶ್ರೀಚಾಮರಾಜೇಂದ್ರ ಮೃಗಾಲಯದಲ್ಲಿ ಹಕ್ಕಿಜ್ವರ ಪತ್ತೆಯಾಗಿದೆ (ಎಚ್5ಎನ್8 ವೈರಾಣು). . ಮೃಗಾಲಯದಲ್ಲಿ ವಲಸೆ ಹಕ್ಕಿಗಳು ಮೃತಪಟ್ಟಿದ್ದು, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೈ ಸೆಕ್ಯೂರಿಟಿ ಆಂಡ್ ಅನಿಮಲ್ ಡಿಸೀಸ್ (ಎನ್ಐಎಚ್ಎಸ್ಎಡಿ) ಸಂಸ್ಥೆಯು ಮೃತಪಟ್ಟ ಹಕ್ಕಿಗಳಲ್ಲಿ ಎಚ್5ಎನ್8 ವೈರಾಣು ಇರುವುದನ್ನು ದೃಢಪಡಿಸಿರುವ ಹಿನ್ನೆಲೆಯಲ್ಲಿ ಮೃಗಾಲಯವನ್ನು 125 ವರ್ಷಗಳ ಇತಿಹಾ ಸದಲ್ಲಿ ಇದೇ ಮೊದಲ ಬಾರಿಗೆ ಮುನ್ನೆಚ್ಚರಿಕೆ ಕ್ರಮವಾಗಿ ಜ.4 ರಿಂದ ಫೆ.2ರವರೆಗೆ ಬಂದ್ ಮಾಡಲಾಗುತ್ತಿದೆ.

**ಪ್ರಮುಖಾಂಶಗಳು**:

- ಮೃಗಾಲಯದಲ್ಲಿ 1 ಸ್ಪಾಟ್ ಬಿಲ್ಡ್ ಪೆಲಿಕನ್ ಮತ್ತು 3 ಗ್ರೇಯ್ಲಾಗ್ ಗೂಸ್ ಮೃತಪಟ್ಟಿದ್ದವು. ಕೆಲವು ದಿನಗಳ ನಂತರ ಮತ್ತೆ 1 ಸ್ಪಾಟ್ ಬಿಲ್ಡ್ ಪೆಲಿಕಾನ್ ಮತ್ತು 1 ಗ್ರೇಯ್ಲಾಗ್ ಗೂಸ್ ಮೃತಪಟ್ಟಿರುವುದು ಕಂಡು ಬಂತು.
- ಮೃತ ಹಕ್ಕಿಗಳ ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿದಾಗ ಮೃತಪಟ್ಟ ಹಕ್ಕಿಗಳಲ್ಲಿ ಎಚ್5ಎನ್8 ವೈರಾಣು ಇರುವುದು ದೃಢಪಟ್ಟಿದೆ.

**ಹಕ್ಕಿ ಜ್ವರದ ಬಗ್ಗೆ**:

- ವೈಜ್ಞಾನಿಕವಾಗಿ ಹಕ್ಕಿ ಜ್ವರವನ್ನು ಹಕ್ಕಿ ಇನ್‌ಫ್ಲೂಯೆನ್‌ಜ ಅಥವಾ ಬರ್ಡ್ ಫ್ಲೂ ಎನ್ನುತ್ತಾರೆ. ಈ ಸೋಂಕಿಗೆ ಮುಖ್ಯ ಕಾರಣ ಎಚ್5ಎನ್ ಎಂಬ ಹೆಸರಿನ ವೈರಸ್. ಇದೊಂದು ತೀವ್ರ ಸಾಂಕ್ರಾಮಿಕ ಪಿಡುಗು. ಕೋಳಿಗಳ ಗುಂಪಿನಲ್ಲಿ ಒಂದು ಕೋಳಿಗೆ ಸೋಂಕು ಅಂಟಿದ್ದರೂ ಸಾಕು 48 ಗಂಟೆಗಳ ಒಳಗೆ ಗುಂಪಿನ ಎಲ್ಲ ಕೋಳಿಗಳೂ ಸೋಂಕಿನಿಂದ ಸತ್ತೇ ಹೋಗುತ್ತವೆ.
- ಹಕ್ಕಿ ಜ್ವರ ಹೊಸದಾಗಿ ಹುಟ್ಟಿಕೊಂಡ ಕಾಯಿಲೆಯಲ್ಲ. ನೂರಾರು ವರ್ಷಗಳ ಹಿಂದೆಯೇ ಇಟಲಿಯಲ್ಲಿ ಹಕ್ಕಿ ಜ್ವರ ಕಂಡಿರುವುದಕ್ಕೆ ಪುರಾವೆಗಳಿವೆ. 2003ರಲ್ಲಿ ದಕ್ಷಿಣ ಪೂರ್ವ ಏಷ್ಯಾದಲ್ಲಿ ಹರಡಿದ್ದ ಮಹಾಪಿಡುಗಿನಲ್ಲಿ ಕಾಯಿಲೆ ನಿಯಂತ್ರಿಸಲು ಒಂದೂವರೆ ಕೋಟಿ ಕೋಳಿಗಳನ್ನು ಕೊಲ್ಲಲಾಗಿದೆ. 2004ರಲ್ಲೂ ಮತ್ತೊಂದು ಸಣ್ಣ ಪಿಡುಗು ಉಂಟಾಗಿತ್ತು.
- ಹಕ್ಕಿ ಜ್ವರ ಹೆಚ್ಚಾಗಿ ಹಕ್ಕಿಗಳಿಗೆ ಬರುತ್ತದೆ. ಕೆಲವೊಮ್ಮೆ ಹಂದಿಗಳಿಗೂ ಅಂಟುತ್ತದೆ. ಹೀಗಾಗಿ ಈ ಕಾಯಿಲೆ ಹಂದಿ ಜ್ವರ- ಹಕ್ಕಿ ಜ್ವರ ಎಂದೇ ಹೆಸರಾಗಿದೆ. ಕೋಳಿ, ಬಾತು, ಎಮು, ವಲಸೆ ಹಕ್ಕಿಗಳು ಹಾಗೂ ಹಂದಿಯನ್ನು ಹೊರತುಪಡಿಸಿ ಬೇರೆ ಯಾವುದೇ ಪ್ರಾಣಿಗಳಲ್ಲಿ ಈ ಕಾಯಿಲೆ ಕಂಡುಬಂದಿರುವ ನಿದರ್ಶನಗಳಿಲ್ಲ.
- ಮಾನವನಿಗೆ ಈ ಕಾಯಿಲೆ ಹತ್ತಿದ ಪ್ರಪ್ರಥಮ ಪ್ರಕರಣ 1997ರಲ್ಲಿ ಹಾಂಕಾಂಗ್‌ನಲ್ಲಿ ವರದಿಯಾಗಿದೆ. ಆಗ ಅಲ್ಲಿ 18 ಜನರಿಗೆ ಕಾಯಿಲೆ ತಗುಲಿದ್ದು, ಅದರಲ್ಲಿ ಆರು ಜನ ಬಲಿಯಾಗಿದ್ದರು. 2008ರ ಮಾರ್ಚ್ ವರೆಗೆ 48 ದೇಶಗಳಲ್ಲಿ 372 ಜನರಿಗೆ ಹಕ್ಕಿ ಜ್ವರ ತಗುಲಿದೆ. ಅವರಲ್ಲಿ 235 ಮಂದಿ ಸಾವಿಗೀಡಾಗಿದ್ದಾರೆ.

**ಕಾಯಿಲೆ ಹರಡುವ ವಿಧಾನ**:

- ಸೋಂಕಿಗೆ ಒಳಗಾದ ಹಕ್ಕಿಯ ಮಲ, ಮೂತ್ರ, ಸಿಂಬಳ ಮತ್ತು ಉಸಿರು ರೋಗಾಣುಗಳಿಂದ (ವೈರಸ್) ತುಂಬಿರುತ್ತದೆ. ಹಕ್ಕಿ ವಾಸಿಸುವ ಸ್ಥಳ, ಅಲ್ಲಿನ ಗಾಳಿ, ಸಾಕಣೆಗೆ ಬಳಸುವ ಉಪಕರಣ ಎಲ್ಲವೂ ವೈರಸ್ ಮಯವಾಗಿರುತ್ತವೆ. ಇವುಗಳ ಸಂಪರ್ಕಕ್ಕೆ ಬರುವ ಎಲ್ಲ ಪಕ್ಷಿಗಳಿಗೂ ಸೋಂಕು ತಗುಲುತ್ತದೆ. ಕೋಳಿ ಫಾರಂನಲ್ಲಿ ಒಂದು ಕೋಳಿಗೆ ಸೋಂಕು ಉಂಟಾದರೆ ಕೆಲವೇ ಗಂಟೆಗಳಲ್ಲಿ ಎಲ್ಲ ಕೋಳಿಗಳಿಗೂ

ಕಾಯಿಲೆ ಅಂಟಿಕೊಳ್ಳುತ್ತದೆ. ಪಕ್ಷಿಗಳಿಗೆ ಹಂದಿಯಿಂದ, ಹಂದಿಗಳಿಗೆ ಪಕ್ಷಿಗಳಿಂದ ಸೋಂಕು ಅಂಟುವುದೂ ಉಂಟು. ಅತಿ ಅಪರೂಪವಾಗಿ ಪಕ್ಷಿಗಳ ಕಾಯಿಲೆ ಮಾನವನಿಗೆ ಅಂಟುವುದೂ ಇದೆ. ಹೀಗಾಗಿ ಕೋಳಿ ಫಾರಂನಲ್ಲಿ ಕೆಲಸ ಮಾಡುವವರು, ಕೋಳಿ ಸಾಕಿರುವ ಮನೆಯವರು ಹಕ್ಕಿ ಜ್ವರಕ್ಕೆ ಸೆರೆಯಾಗುತ್ತಾರೆ. ಪಕ್ಷಿಗಳನ್ನು, ಮೊಟ್ಟೆಯನ್ನು ಮಾರುವವರಿಗೂ, ಕತ್ತರಿಸುವವರಿಗೂ, ಕೋಳಿ ಮಾಂಸದ ಅಡುಗೆ ಮಾಡುವವರಿಗೂ ಹಕ್ಕಿ ಜ್ವರ ಅಂಟುವ ಸಂಭವ ಇರುತ್ತದೆ. ರೋಗಾಣುಗಳು ಮುಖ್ಯವಾಗಿ ಉಸಿರಾಡುವ ಗಾಳಿಯೊಂದಿಗೆ ಮಾನವನ ದೇಹ ಸೇರುತ್ತವೆ. ಮನುಷ್ಯನಿಗೆ ಅಂಟಿದ ಸೋಂಕು ಮತ್ತೊಬ್ಬರಿಗೆ ಅಂಟುವುದಿಲ್ಲ. ಹಾಗೇನಾದರೂ ಆಗಿದ್ದರೆ ಸೋಂಕು ಅತ್ಯಂತ ತೀವ್ರಗತಿಯಲ್ಲಿ ಹರಡಿ ಮನುಷ್ಯರ ಮಾರಣಹೋಮವೇ ನಡೆದುಹೋಗುತ್ತಿತ್ತು.

- ವಲಸೆ ಹೋಗುವ ಹಕ್ಕಿ, ಸಮುದ್ರ ಪಕ್ಷಿ, ಅಂತರ ರಾಷ್ಟ್ರೀಯ ಆಮದು- ರಫ್ತಿಗೆ ಒಳಗಾಗುವ ಹಕ್ಕಿ, ಹಕ್ಕಿಯ ಉತ್ಪನ್ನಗಳು ವಿಶ್ವವ್ಯಾಪಿ ಹಕ್ಕಿ ಜ್ವರ ಹರಡಲು ಸಾಧನವಾಗುತ್ತವೆ. ಹಕ್ಕಿಯ ಮಲ, ಮೂತ್ರ, ಮೂಗಿನ ದ್ರವವನ್ನು ಪರೀಕ್ಷೆ ಮಾಡಿ ಕಾಯಿಲೆಯ ಇರುವಿಕೆಯನ್ನು ತಿಳಿಯಬಹುದು.

**ಹಕ್ಕಿ ಜ್ವರ ನಿಯಂತ್ರಣ ಹೇಗೆ?**

- ಹಕ್ಕಿ ಜ್ವರವನ್ನು ತಡೆಗಟ್ಟುವುದೆಂದರೆ ಎಚ್5ಎನ್ ವೈರಸ್‌ಗಳನ್ನು ನಾಶಪಡಿಸುವುದು ಎಂದರ್ಥ. ಹೀಗಾಗಿ ಯಾವುದೇ ಹಕ್ಕಿಗೆ ಜ್ವರ ಕಂಡರೆ ತಕ್ಷಣ ಸುತ್ತಮುತ್ತಲಿನ ಹಕ್ಕಿಗಳನ್ನೆಲ್ಲ (ಕೋಳಿ) ಹತ್ಯೆ ಮಾಡಬೇಕಾಗುತ್ತದೆ. ಹಕ್ಕಿ ಜ್ವರದ ವೈರಸ್‌ಗಳನ್ನು ಅವುಗಳ ಸಿಂಬಳ, ಮಲ, ಮೂತ್ರ ಇತ್ಯಾದಿಗಳನ್ನು ಭೋಪಾಲದಲ್ಲಿರುವ ಪ್ರಯೋಗಾಲಯದಲ್ಲಿ ಪತ್ತೆ ಮಾಡಲಾಗುತ್ತದೆ.
- ಹಕ್ಕಿ ಸಾಕುವ ಸ್ಥಳದಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು. ಹಕ್ಕಿ ಜ್ವರದಿಂದ ಸತ್ತ ಕೋಳಿಯನ್ನು ಐದಾರು ಪದರ ಸುಣ್ಣ ಹಾಗೂ ಮಣ್ಣು ಹಾಕಿ ಹೂಳಬೇಕು ಅಥವಾ ಸುಟ್ಟುಹಾಕಬೇಕು
- ಹಕ್ಕಿ ಜ್ವರ ಕಂಡುಬಂದ ಸಮಯದಲ್ಲಿ ಯಾರಿಗಾದರೂ ಅತಿಯಾದ ಜ್ವರ, ಉಸಿರಾಟದ ತೊಂದರೆ ಕಂಡರೆ ಅಲಕ್ಷಿಸದೆ ಅವರನ್ನು ಆಸ್ಪತ್ರೆಗೆ ಸೇರಿಸಿ ಚಿಕಿತ್ಸೆ ಕೊಡಿಸಬೇಕು ಹಕ್ಕಿ ಜ್ವರ ಕಂಡುಬಂದ ಸ್ಥಳಕ್ಕೆ ಭೇಟಿ ನೀಡುವವರು ತಮಗೆ ಕಾಯಿಲೆ ಬರದಂತೆ ತಡೆಯಲು ದಿನಕ್ಕೊಂದರಂತೆ ಏಳು ದಿನ `ಟ್ಯಾಮಿಫ್ಲೂ~ ಮಾತ್ರೆ ಸೇವಿಸ ಬೇಕಾಗುತ್ತದೆ.

**ಹಕ್ಕಿ ಜ್ವರದ ಲಕ್ಷಣಗಳು:**

ಹಕ್ಕಿ ಜ್ವರದ ಸೋಂಕಿಗೆ ಒಳಗಾಗುವ ವ್ಯಕ್ತಿಗಳಲ್ಲಿ 2-3 ದಿನದಲ್ಲಿ ರೋಗ ಲಕ್ಷಣಗಳು ಪ್ರಕಟವಾಗುತ್ತವೆ. ಅತಿಯಾದ ಜ್ವರ, ಕೆಮ್ಮು, ತಲೆನೋವು, ಉಸಿರಾಡಲು ತೊಂದರೆಯಾಗುವುದು ಕಾಯಿಲೆಯ ಲಕ್ಷಣಗಳು. ಎಕ್ಸ್ ರೇ ಪರೀಕ್ಷೆಯಿಂದ ಎದೆಯಲ್ಲಿ ಉಂಟಾಗಿರುವ ಬದಲಾವಣೆಗಳು ಎದ್ದು ಕಾಣುತ್ತವೆ. ಹಕ್ಕಿ ಜ್ವರದಿಂದ ಸಾವುಂಟಾಗುವುದು ಉಸಿರಾಟ ನಿಲ್ಲುವುದರಿಂದ. ರೋಗಿಯ ಮೂಗು ಮತ್ತು ಗಂಟಲಿನ ದ್ರವವನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೊಳಪಡಿಸಿ ರೋಗ ಅಂಟಿರುವುದನ್ನು ದೃಢಪಡಿಸಿಕೊಳ್ಳಬಹುದು.

**ಲಭ್ಯವಿರುವ ಲಸಿಕೆ:**

ಟ್ಯಾಮಿಫ್ಲೂ ಮತ್ತು ರಿಲಿಂಜ್ ಎಂಬ ಔಷಧಿಗಳು ಉತ್ತಮ ಫಲಿತಾಂಶವನ್ನು ನೀಡುತ್ತವೆ. ಆದಾಗ್ಯೂ ಕಾಯಿಲೆ ಆರಂಭಗೊಂಡ 48 ಗಂಟೆಗಳೊಳಗೆ ಔಷಧಿ ಸೇವನೆ ಪ್ರಾರಂಭಿಸಿದರೆ ರೋಗದ ತೀವ್ರತೆ ಬಹಳಷ್ಟು ಕಡಿಮೆಯಾಗುತ್ತದೆ. ಸಾವು ಉಂಟಾಗುವ ಸಾಧ್ಯತೆ ಕ್ಷೀಣಿಸುತ್ತದೆ. ಈ ಔಷಧಿಯ ಜೊತೆ ಆ್ಯಂಟಿ ಬಯೊಟಿಕ್‌ಗಳು ಮತ್ತು ವೈದ್ಯರು- ದಾದಿಯರ ಶುಶ್ರೂಷೆ ಅತ್ಯಗತ್ಯ.

**ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೈ ಸೆಕ್ಯೂರಿಟಿ ಆಂಡ್ ಅನಿಮಲ್ ಡಿಸೀಸ್**:

- ಎನ್‌ಐಎಚ್‌ಎಸ್‌ಎಡಿ ಮಧ್ಯಪ್ರದೇಶದ ಭೂಪಾಲ್ ನಲ್ಲಿದೆ. ಪ್ರಾಣಿಗಳ ವಿಲಕ್ಷಣ ಮತ್ತು ಹೊಸದಾಗಿ ಸಂಭವಿಸುವ ರೋಗಕಾರಗಳ ಮೇಲೆ ಸಂಶೋಧನೆ ನಡೆಸುವ ಭಾರತದ ಪ್ರಧಾನ ಸಂಸ್ಥೆಯಾಗಿದೆ. ಎನ್ ಐಎಚ್‌ಎಸ್‌ಎಡಿ ಮುಂಚೆ ಇಂಡಿಯನ್ ವೆಟರಿನರಿ ರಿಸರ್ಚ್ ಇನ್ಸ್ಟಿಟ್ಯೂಟ್ ನಡಿ ಕಾರ್ಯನಿರ್ವಹಿಸುತ್ತಿದ್ದು, ಹೈ ಸೆಕ್ಯೂರಿಟಿ ಅನಿಮಲ್ ಡಿಸೀಸ್ ಲ್ಯಾಬೋರೆಟರಿ ಎನ್ನಲಾಗುತ್ತಿತ್ತು. 8ನೇ ಆಗಸ್ಟ 2014ರಿಂದ ಈ ಸಂಸ್ಥೆಗೆ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೈ ಸೆಕ್ಯೂರಿಟಿ ಆಂಡ್ ಅನಿಮಲ್ ಡಿಸೀಸ್ ಯೆಂದು ಮರುನಾಮಕರಣ ಮಾಡಲಾಗಿದ್ದು ಐಸಿಎಆರ್ ನಡಿ ಕಾರ್ಯನಿರ್ವಹಿಸುತ್ತಿದೆ.

**<u>ಕೊಪ್ಪಳ್ ನೀರಾವರಿ ಯೋಜನೆಯಲ್ಲಿ ಸೋಲಾರ್ ಪ್ಯಾನಲ್ ಅಳವಡಿಕೆಗೆ ಕ್ರಮ</u>**



ನಾಲೆಗಳ ಮೇಲೆ ಸೌರ ಫಲಕಗಳನ್ನು ಅಳವಡಿಸಿ ವಿದ್ಯುತ್ ಉತ್ಪಾದಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಬಾಗಲಕೋಟೆಯ ಆಲಮಟ್ಟಿ ಬಲ ಮೇಲ್ದಂಂಎ ನಾಲೆಯ ಮೇಲೆ ಸೌರ ಫಲಕ ಅಳವಡಿಸಿ ಸೌರ ವಿದ್ಯುತ್ ಉತ್ಪಾದನೆ ಯಶಸ್ವಿಯಾಗಿರುವ ಹಿನ್ನಲೆಯಲ್ಲಿ, ಇದೇ ಮಾದರಿಯನ್ನು ಅನುಸರಿಸಿ ರಾಜ್ಯ ಜಲಸಂಪನ್ಮೂಲ ಇಲಾಖೆ, ನಾರಾಯಣಪುರ ಜಲಾಶಯದ ಕೊಪ್ಪಳ್ ನೀರಾವರಿ ಯೋಜನೆಯಲ್ಲಿ ಸೌರ ಫಲಕಗಳನ್ನು ಅಳವಡಿಸಲಿದೆ.

**ಆಲಮಟ್ಟಿ ಸೌರ ವಿದ್ಯುತ್ ಯೋಜನೆ:**

ಬಾಗಲಕೋಟೆ ಜಿಲ್ಲೆಯ ಆಲಮಟ್ಟಿ ಬಲ ಮೇಲ್ದಂಡೆ ನಾಲೆಯ ಮೇಲೆ 6.35ಕಿ.ಮೀ ಉದ್ದಕ್ಕೆ ಸೌರ ಫಲಕಗಳನ್ನು ಅಳವಡಿಸಿ 1 ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವಲ್ಲಿ ಯಶಸ್ವಿಯಾಗಿದೆ. ವಿಜಯಪುರದಲ್ಲಿ ತಾಪಮಾನ ಅಧಿಕವಾಗಿರುವುದರಿಂದ ನಾಲೆಗಳಲ್ಲಿ ನೀರಿನ ಆವಿ ಪ್ರಮಾಣ ಅಧಿಕವಾಗಿರುತ್ತದೆ. ನಾಲೆಯ ಮೇಲೆ ಸೌರಫಲಕಗಳನ್ನು ಅಳವಡಿಸುವುದರಿಂದ ನೀರು ಆವಿಯಾಗುವುದರನ್ನು ತಪ್ಪಿಸುವುದರ ಜೊತೆಗೆ ವಿದ್ಯುತ್ ಅನ್ನು ಉತ್ಪಾದಿಸಬಹುದು. ನಾಲೆಗಳ ಮೇಲೆ ಸೌರ ಫಲಕ ಅಳವಡಿಸಿ ವಿದ್ಯುತ್ ಉತ್ಪಾದಿಸುವ ಈ ಯೋಜನೆ ದಕ್ಷಿಣ ಭಾರತದಲ್ಲಿ ಮೊದಲು ಎನ್ನಲಾಗಿದೆ.

- ಬೆಂಗಳೂರು ಮೂಲದ ಸನ್ ಎಡಿಸನ್ ಎನರ್ಜಿ ಇಂಡಿಯಾ (Sunedison Energy India) ಈ ಯೋಜನೆಯನ್ನು ಅನುಷ್ಠಾನಗೊಳಿಸಿದ್ದು, ಐದು ವರ್ಷಗಳ ಕಾಲ ನಿರ್ವಹಣೆ ಮಾಡಲಿದೆ.
- ಒಟ್ಟು 3,280 ಸೌರ ಫಲಕಗಳನ್ನು ನಾಲೆಯ ಮೇಲೆ ಅಳವಡಿಸಲಾಗಿದೆ. ಕಾಲುವೆಗೆ ಅಡ್ಡಲಾಗಿ ನಿರ್ಮಿಸಲಾಗಿರುವ ಉಕ್ಕಿನ ರಚನೆಗಳ ಮೇಲೆ ಸೌರ ಫಲಕಗಳನ್ನು ಸ್ಥಿರವಾಗಿ ಇರಿಸಲಾಗಿದೆ.
- ಈ ಯೋಜನೆಯಿಂದ ಉತ್ಪಾದನೆಯಾಗುವ ಡಿಸಿ ವಿದ್ಯುತ್ ಅನ್ನು ಪಕ್ಕದಲ್ಲಿ ನಿರ್ಮಿಸಿರುವ ಕಟ್ಟಡದಲ್ಲಿರುವ ಇನ್ವರ್ಟರ್ ಗೆ ರವಾಸಿ ಎಸಿ ವಿದ್ಯುತ್ ಆಗಿ ಪರಿವರ್ತಿಸಲಾಗುವುದು.
- ಯೋಜನೆಯಿಂದ ಉತ್ಪಾದಿಸಲಾಗುವ 1 ಮೆಗಾ ವ್ಯಾಟ್ ವಿದ್ಯುತ್ ಅನ್ನು ರಾಮಪುರ ವಿದ್ಯುತ್ ಸ್ಥಾವರಕ್ಕೆ ರವಾನಿಸಲಾಗುತ್ತಿದೆ. ಮೊದಲ ಹಂತದಲ್ಲಿ 12 ಹಳ್ಳಿಗಳಿಗೆ ವಿದ್ಯುತ್ ಅನ್ನು ಸರಬರಾಜು ಮಾಡಲಾಗುವುದು. ಈ ವಿದ್ಯುತ್ ಬಳಸಿ ಎಡ ಮತ್ತು ಬಲ ಕಾಲುವೆಯಿಂದ ಪಂಪ್ ಮೂಲಕ ನೀರು ಎತ್ತಲಾಗುವುದು.
- ಉತ್ಪಾದನೆ ಹೆಚ್ಚಳವಾದರೆ ಪ್ರತಿ ಯೂನಿಟ್ ವಿದ್ಯುತ್ ಗೆ ರೂ 3.60 ದಂತೆ ಮಾರಾಟ ಮಾಡಲಾಗುವುದು. ಇದಕ್ಕಾಗಿ ಈಗಾಗಲೇ ಹೆಸ್ಕಾಂ ಜೊತೆ ಒಪ್ಪಂದ ಮಾಡಿಕೊಳ್ಳಲಾಗಿದೆ.

**ಕೊಪ್ಪಳ್ ನಾಲೆಗೂ ಯೋಜನೆ:** ನಾರಾಯಣಪುರ ಜಲಾಶಯ ಹಿನ್ನೀರು ಬಳಕೆಗೆ ಕೈಗೆತ್ತಿಕೊಂಡ ಕೊಪ್ಪಳ್ ನೀರಾವರಿ ಯೋಜನೆ ಹುನಗುಂದ ತಾಲೂಕಿಗೆ ಅನುಕೂಲವಾಗಲಿದೆ. ನಾಲೆಯ ಮೇಲೆ ಸುಮಾರು 10 ಕಿಲೋ ಮೀಟರ್ ಉದ್ದಕ್ಕೂ ಪ್ಯಾನಲ್ ಅಳವಡಿಕೆಯಿಂದ 10 ಮೆಗಾವಾಟ್ ವಿದ್ಯುತ್ ಉತ್ಪಾದನೆ ಯೋಜನೆಗೆ ಟೆಂಡರ್ ಪ್ರಕ್ರಿಯೆ ಚಾಲನೆಯಲ್ಲಿದೆ.

**ಅನುಕೂಲಗಳೇನು?**

- ನಾಲೆಯಲ್ಲಿ ಹರಿಯುವ ನೀರು ಬಿಸಿಲಿನ ಝಳಕ್ಕೆ ಆವಿಯಾಗಿ ಹೋಗುವುದನ್ನು ತಡೆಯಬಹುದು.
- ಸುತ್ತಲಿನ ರೈತರಿಗೆ ವಿದ್ಯುತ್ ಪೂರೈಕೆ ಮತ್ತು ವಿದ್ಯುತ್ ವಿಕೇಂದ್ರೀಕರಣಕ್ಕೆ ಒತ್ತು.
- ದಕ್ಷಿಣ ರಾಜ್ಯದಲ್ಲಿಯೇ ಪ್ರಥಮವಾಗಿ ನಾಲೆ ಮೇಲೆ ವಿದ್ಯುತ್ ಉತ್ಪಾದಿಸಲಾಗುತ್ತಿದೆ.
- ಸೋಲಾರ್ ಯೋಜನೆಗಾಗಿ ಭೂಸ್ವಾಧೀನ ಮಾಡಿಕೊಳ್ಳುವ ಅಗತ್ಯವಿಲ್ಲ.

**<u>14ನೇ ಪ್ರವಾಸಿ ಭಾರತೀಯ ದಿವಸ್ ಗೆ ಬೆಂಗಳೂರಿನಲ್ಲಿ ಚಾಲನೆ</u>**



ದೇಶದ ಐಟಿ ರಾಜಧಾನಿ ಬೆಂಗಳೂರಿನಲ್ಲಿ 14ನೇ ಪ್ರವಾಸಿ ಭಾರತೀಯ ದಿವಸಕ್ಕೆ ಅದ್ದೂರಿ ಚಾಲನೆ ನೀಡಲಾಯಿತು. "ರಿ ಡಿಫೈನಿಂಗ್ ಎಂಗೇಂಜ್ ಮೆಂಟ್ ವಿತ್ ದಿ ಇಂಡಿಯನ್ ಡಯಾಸ್ಪೋರ" ಇದು ಈ ವರ್ಷ ಪ್ರವಾಸಿ ದಿವಸದ ಧ್ಯೇಯವಾಕ್ಯ. ಮೂರು ದಿನಗಳ ಪ್ರವಾಸಿ ಭಾರತೀಯ ದಿವಸದ ಮೊದಲ ದಿನದಂದು ಯುವ ಪ್ರವಾಸಿ ಭಾರತೀಯ ದಿವಸಕ್ಕೆ ಚಾಲನೆ ನೀಡಲಾಯಿತು. ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವ (ಸ್ವತಂತ್ರ ನಿರ್ವಹಣೆ) ವಿಜಯ್‌ಗೋಯಲ್ ಚಾಲನೆ ನೀಡಿದರು. ಪ್ರಧಾನಿ ನರೇಂದ್ರ ಮೋದಿರವರು ಮುಖ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ದಿಕ್ಸೂಚಿ ಭಾಷಣ ಮಾಡಲಿದ್ದಾರೆ. ಪೋರ್ಚಗಲ್ ಪ್ರಧಾನಿ ಡಾ.ಅಂತೋನಿಯೋ ಕೋಸ್ಟಾ ಮುಖ್ಯ ಅತಿಥಿಯಾಗಲಿದ್ದಾರೆ.

**ಪ್ರವಾಸಿ ಭಾರತೀಯ ದಿವಸ**:

- ಪ್ರವಾಸಿ ಭಾರತೀಯ ದಿವಸವನ್ನು 2003ರಿಂದ ಪ್ರತಿ ವರ್ಷ ಆಚರಿಸಲಾಗುತ್ತಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯ ಪ್ರವಾಸಿ ಭಾರತೀಯ ದಿವಸವನ್ನು ಆಯೋಜಿಸುತ್ತಿದ್ದು, ವಿದೇಶದಲ್ಲಿ ನೆಲೆಸಿರುವ ಭಾರತೀಯ ಸಮುದಾಯ ಹಾಗೂ ಸರ್ಕಾರದ ನಡುವೆ ಹೊಂದಾಣಿಕೆಯನ್ನು ಉತ್ತಮಪಡಿಸುವ ಕಾರಣ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.
- ಮಹಾತ್ಮಗಾಂಧಿ ರವರು ದಕ್ಷಿಣ ಆಫ್ರಿಕಾದಿಂದ ಜನವರಿ 9, 1915ರಂದು ಭಾರತಕ್ಕೆ ಹಿಂತಿರುಗಿ ಬಂದ ಕಾರಣ ಜನವರಿ 9 ರಂದು ಪ್ರವಾಸಿ ಭಾರತೀಯ ದಿವಸವನ್ನು ಆಯೋಜಿಸಲಾಗುತ್ತಿದೆ.

"**ಅನಿವಾಸಿ ಕನ್ನಡರಿಗೆ ಕಾರ್ಡ್" ರಾಜ್ಯ ಸರ್ಕಾರ ಘೋಷಣೆ:**

- ಕರ್ನಾಟಕದಲ್ಲಿ ₹ 250 ಕೋಟಿಗಿಂತ ಹೆಚ್ಚು ಬಂಡವಾಳ ಹೂಡುವ ಅನಿವಾಸಿ ಭಾರತೀಯರಿಗೆ ವಿವಿಧ ರಿಯಾಯ್ತಿ ಮತ್ತು ವಿಶೇಷ ಪ್ರೋತ್ಸಾಹ ಧನ ನೀಡುವುದಾಗಿ ರಾಜ್ಯ ಸರ್ಕಾರ ಪ್ರವಾಸಿ ದಿವಸದಂದು ಘೋಷಿಸಿದೆ. 14ನೇ ಪ್ರವಾಸಿ ದಿನದಂದು ಮುಖ್ಯಮಂತ್ರಿ ಸಿದ್ದರಾಮಯ್ಯರವರು ಅನಿವಾಸಿ ಭಾರತೀಯ ನೀತಿಯನ್ನು ಬಿಡುಗಡೆಗೊಳಿಸಿದರು. ನೀತಿಯ ಪ್ರಮುಖಾಂಶಗಳು ಇಲ್ಲಿವೆ.
- ಅನಿವಾಸಿ ಭಾರತೀಯರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ರಾಜ್ಯ ಮಟ್ಟದಲ್ಲಿ ಅನಿವಾಸಿ ಭಾರತೀಯ ಸಮಿತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಮಿತಿ ರಚನೆ.
- ಅನಿವಾಸಿ ಕನ್ನಡಿಗರಿಗೆ (ಎನ್.ಆರ್.ಕೆ) ಅಧಿಕೃತ ಗುರುತಿನ ಚೀಟಿಯಾಗಿ 'ಅನಿವಾಸಿ ಕನ್ನಡಿಗ ಕಾರ್ಡ್' ವಿತರಣೆ.

- ಅನಿವಾಸಿ ಕನ್ನಡಿಗರು ಮತ್ತು ರಾಜ್ಯದ ವಿವಿಧ ಸಂಘಟನೆಗಳೊಂದಿಗೆ ಸಂಪರ್ಕ ಕಲ್ಪಿಸುವ ಜಾಲತಾಣ ಸೃಷ್ಟಿ.
- ಅನಿವಾಸಿ ಕನ್ನಡಿಗರಿಗೆ ಅಪಘಾತ ಸಂಭವಿಸಿದರೆ ₹ 2 ಲಕ್ಷಗಳವರೆಗೆ ವಿಮಾ ಸೌಲಭ್ಯ.
- ಕರ್ನಾಟಕ ಮತ್ತು ಅನಿವಾಸಿ ಕನ್ನಡಿಗರಿಗೆ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ ಆಯೋಜನೆ. ಅವರಿಗಾಗಿ ವಿಶೇಷ ಪ್ರವಾಸ ಏರ್ಪಡಿಸುವುದು.
- 'ನಮ್ಮ ಊರು, ನಮ್ಮ ನಾಡು' ಯೋಜನೆ ಆರಂಭ ಮಾಡಲಾಗುವುದು. ಇದರಡಿ ಕರ್ನಾಟಕದಲ್ಲಿ ಸೇವೆ ಸಲ್ಲಿಸಲು ಆಸಕ್ತಿ ಇರುವ ಅನಿವಾಸಿ ಕನ್ನಡಿಗರಿಗೆ ಉತ್ತೇಜನ ನೀಡುವುದು.
- ವಿಶ್ವದೆಲ್ಲೆಡೆ ಕನ್ನಡ ಕೂಟ ಆರಂಭಿಸಲು ಪ್ರೋತ್ಸಾಹ. ಕನ್ನಡ ಭಾಷೆ ಮತ್ತು ಸಂಸ್ಕೃತಿ ರಕ್ಷಿಸಲು ಉತ್ತೇಜನ ನೀಡುವುದು.
- ಉತ್ತಮ ಸಾಧನೆ ಮಾಡಿದ ಒಬ್ಬ ಅನಿವಾಸಿ ಕನ್ನಡಿಗನಿಗೆ ಪ್ರತಿ ವರ್ಷ ಪ್ರವಾಸಿ ಭಾರತ್ ದಿವಸ್ ಕಾರ್ಯಕ್ರಮದಲ್ಲಿ ಕರ್ನಾಟಕ ಸರ್ಕಾರದ ವತಿಯಿಂದ 'ವರ್ಷದ ಅನಿವಾಸಿ ಕನ್ನಡಿಗ ಪ್ರಶಸ್ತಿ' ಪ್ರದಾನ.
- ಸಾಗರೋತ್ತರ ದೇಶಗಳಲ್ಲಿ ಕನ್ನಡಿಗರು ಉದ್ಯೋಗ ಪಡೆಯಲು ಪ್ರೋತ್ಸಾಹ. ವಿದೇಶದಲ್ಲಿ ಉನ್ನತ ಶಿಕ್ಷಣಕ್ಕೆ, ಉದ್ಯೋಗಕ್ಕೆ ತೆರಳುವವರಿಗೆ ಪೂರ್ವಭಾವಿ ಮಾರ್ಗದರ್ಶನ.
- ಅನಿವಾಸಿ ಕನ್ನಡಿಗರು ಎದುರಿಸುತ್ತಿರುವ ಕಾನೂನು ವಿವಾದ, ವಾಣಿಜ್ಯ ವಿವಾದಗಳನ್ನು ತ್ವರಿತವಾಗಿ ಬಗೆಹರಿಸಲು ಕಾನೂನು ಸಲಹೆಗಾರರು ಮತ್ತು ವಕೀಲರ ಮೂಲಕ ನೆರವು ನೀಡುವುದು.
- ಅನಿವಾಸಿ ಕನ್ನಡಿಗರು ವಿದೇಶದಲ್ಲಿ ಮೃತರಾದರೆ, ಸ್ವದೇಶಕ್ಕೆ ಮೃತ ದೇಹ ಸಾಗಿಸಲು ವಿಮಾನ ವೆಚ್ಚವನ್ನು ಸರ್ಕಾರದಿಂದ ಭರಿಸುವುದು.

**ಲಿಮ್ಕಾ ದಾಖಲೆ ಸೇರ್ಪಡೆಗೊಂಡ ಕೆಎಸ್‌ಆರ್ ಟಿಸಿ**



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ (ಕೆಎಸ್‌ಆರ್ಟಿಸಿ) ತನ್ನ ಸಾಧನೆಯಿಂದ ಮತ್ತೊಂದು ಗೌರವಕ್ಕೆ ಪಾತ್ರವಾಗಿದೆ. ಅತಿ ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರಶಸ್ತಿಗಳಿಗೆ ಭಾಜನವಾಗುವ ಮೂಲಕ ಲಿಮ್ಕಾ ದಾಖಲೆ ಪುಟಕ್ಕೆ ಸೇರ್ಪಡೆಗೊಂಡಿದೆ. ಈ ಗೌರವಕ್ಕೆ ಪಾತ್ರವಾದ ದೇಶದ ಮೊದಲ ರಸ್ತೆ ಸಾರಿಗೆ ಸಂಸ್ಥೆ ಎಂಬ ಹಿರಿಮೆಯನ್ನು ತನ್ನದಾಗಿಸಿಕೊಂಡಿದೆ.

**ಪ್ರಮುಖಾಂಶಗಳು**:

- ಜುಲೈ 2015 ನಿಂದ ಜೂನ್ 2016ರ ಜೂನ್ ಒಂದು ವರ್ಷದ ಅವಧಿಯಲ್ಲಿ ಕೆಎಸ್‌ಆರ್ಟಿಸಿ 107 ಪ್ರಶಸ್ತಿಗಳನ್ನು ಬಾಚಿಕೊಂಡಿದೆ. ಈ ಹಿನ್ನೆಲೆಯಲ್ಲಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲಿ ಇದು ದಾಖಲಾಗಿದೆ.
- 2016ರ ಜುಲೈನಿಂದ ಈವರೆಗೆ ನಿಗಮಕ್ಕೆ 59 ಪ್ರಶಸ್ತಿಗಳು ಸಂದಿವೆ. ಅಂದರೆ ಒಟ್ಟಾರೆ 165 ಪ್ರಶಸ್ತಿಗಳು ನಮ್ಮ ಕೆಎಸ್‌ಆರ್ಟಿಸಿಗೆ ಬಂದಿವೆ.
- ಇತ್ತೀಚೆಗೆ ಕೇಂದ್ರ ಸರ್ಕಾರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ ಆಂಧ್ರಪ್ರದೇಶದ ವಿಶಾಖಪಟ್ಟಣನಲ್ಲಿ ಹಮ್ಮಿಕೊಂಡಿದ್ದ 20ನೇ ರಾಷ್ಟ್ರೀಯ ಇ-ಆಡಳಿತ ಸಮ್ಮೇಳನದಲ್ಲಿ ಕೆಎಸ್ ಆರ್ಟಿಸಿಗೆ ಲಭಿಸಿದೆ. ರಾಷ್ಟ್ರೀಯ ಇ-ಆಡಳಿತ ಪ್ರಶಸ್ತಿ ಪಡೆಯುತ್ತಿರುವ ದೇಶದ ಮೊದಲ ಸಾರಿಗೆ ಸಂಸ್ಥೆ ಎಂಬ ಖ್ಯಾತಿಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಭಾಜನವಾಗಿದೆ.

**<u>ಭೂಸ್ವಾಧೀನ ಪ್ರಕರಣ ಇತ್ಯಾರ್ಥಗೊಳಿಸಲು ಪ್ರತ್ಯೇಕ ಪ್ರಾಧಿಕಾರ ರಚನೆ</u>**



ಭೂಸ್ವಾಧೀನ ಕಾಯ್ದೆಯನ್ವಯ ಭೂಸ್ವಾಧೀನ ಕುರಿತ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಭೂಸ್ವಾಧೀನ, ಪುನಶ್ಚೇತನ ಮತ್ತು ಪುನರ್ವಸತಿ ಪ್ರಾಧಿಕಾರವನ್ನು ರಾಜ್ಯ ಸರ್ಕಾರ ರಚಿಸಿದೆ. ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕ ಭೂಸ್ವಾಧೀನ, ಪುನಶ್ಚೇತನ ಮತ್ತು ಪುನರ್ವಸತಿ ಕಾಯ್ದೆ-2013ರ ಅನ್ವಯ ಪ್ರಾಧಿಕಾರಗಳನ್ನು ರಚಿಸಲಾಗಿದೆ. ಆ ಮೂಲಕ ಇನ್ನು ಮುಂದೆ ಭೂಸ್ವಾಧೀನ ಪ್ರಕರಣಗಳನ್ನು ಈ ಪ್ರಾಧಿಕಾರಗಳು ಇತ್ಯರ್ಥಗೊಳಿಸಲಿವೆ. ರಾಜ್ಯದಲ್ಲಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲು ಪೂರ್ವಸಿದ್ಧತೆಗಳನ್ನು ಸರ್ಕಾರ ಬಹುತೇಕ ಪೂರ್ಣಗೊಳಿಸಿದಂತಾಗಿದೆ. ಆಯಾ ಜಿಲ್ಲೆಯ ಒಂದನೇ ಹೆಚ್ಚುವರಿ ಮತ್ತು ಜಿಲ್ಲಾ ನ್ಯಾಯಾಧೀಶರನ್ನು ಪೀಠಾಸೀನ ಅಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದ್ದು, ಈ ಹುದ್ದೆ ಲಭ್ಯವಿಲ್ಲದ ಕಡೆ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಪ್ರಾಧಿಕಾರದ ಪೀಠಾಸೀನ ಅಧಿಕಾರಿಗಳಾಗಿರುತ್ತಾರೆ ಎಂದು ಕಂದಾಯ ಇಲಾಖೆ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಇದರೊಂದಿಗೆ

ಇನ್ನು ಮುಂದೆ ಹೊಸ ಭೂಸ್ವಾಧೀನ ಕಾಯ್ದೆ ಪ್ರಕಾರವೇ ಪರಿಹಾರ ಮತ್ತು ಪುನರ್ವಸತಿ ಕಲ್ಪಿಸುವ ಕಾರ್ಯವನ್ನು ಹೊಸದಾಗಿ ರಚಿಸಿರುವ ಪ್ರಾಧಿಕಾರಗಳು ಮಾಡಲಿವೆ.

**ಏನಿದು ಪ್ರಾಧಿಕಾರ?**

ಯಾವುದೇ ಯೋಜನೆಗಳಿಗೆ ಸರ್ಕಾರ ಭೂಮಿ ಸ್ವಾಧೀನಪಡಿಸಿಕೊಳ್ಳುವ ಸಂದರ್ಭದಲ್ಲಿ ಭೂಮಿಯ ಮಾಲೀಕರಿಗೆ ಸೂಕ್ತ ಪರಿಹಾರ ಒದಗಿಸಬೇಕು ಅನೇಕ ಸಂದರ್ಭದಲ್ಲಿ ಭೂಸ್ವಾಧೀನ ಕುರಿತಾಗಿ ಉಂಟಾಗುವ ವಿವಾದಗಳಿಂದ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರುವುದರಿಂದ ಭೂಸ್ವಾಧೀನ ವಿಳಂಬವಾಗಿ ಯೋಜನೆಗಳ ಅನುಷ್ಠಾನದಲ್ಲಿ ಹಿನ್ನಡೆಯಾಗುತ್ತದೆ. ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲು ಭೂಸ್ವಾಧೀನ, ಪುನಶ್ಚೇತನ ಮತ್ತು ಪುನರ್ವಸತಿ ಪ್ರಾಧಿಕಾರ ರಚಿಸುವ ಬಗ್ಗೆ 2013ರ ಕಾಯ್ದೆಯಲ್ಲಿ ಕೇಂದ್ರ ಪ್ರಸ್ತಾಪಿಸಿತ್ತು. ಈ ಕಾಯ್ದೆಯನ್ನು ರಾಜ್ಯದಲ್ಲೂ ಅನುಷ್ಠಾನಗೊಳಿಸಲು ನಿರ್ಧರಿಸಿದ್ದ ರಾಜ್ಯ ಸರ್ಕಾರ, 2015ರಲ್ಲಿ ನಿಯಮಾವಳಿಗಳನ್ನು ರೂಪಿಸಿತ್ತು. ಅದರಂತೆ ಈಗ ರಾಜ್ಯದ ಪ್ರತಿ ಜಿಲ್ಲೆಗಳಲ್ಲಿ ಪ್ರಾಧಿಕಾರಗಳನ್ನು ರಚಿಸಲಾಗಿದೆ.

**ಪ್ರಾಧಿಕಾರದ ರಚನೆ:**

- ಪ್ರತಿ ಪ್ರಾಧಿಕಾರ ಒಬ್ಬ ಮುಖ್ಯಸ್ಥ ಅಥವಾ ಪೀಠಾಸೀನ ಅಧಿಕಾರಿಯನ್ನು ಒಳಗೊಂಡಿರಲಿದೆ. ಜಿಲ್ಲಾ ನ್ಯಾಯಾಧೀಶರಾಗಿರಬೇಕು ಅಥವಾ ಕನಿಷ್ಠ ಏಳು ವರ್ಷ ಕಾನೂನು ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದವರಾಗಿರಬೇಕು.
- ಅವರನ್ನು ನೇಮಕ ಮಾಡುವಾಗ ರಾಜ್ಯ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಬೇಕು ಎಂದು ಕಾಯ್ದೆಯಲ್ಲಿ ಹೇಳಲಾಗಿತ್ತು. ಇದೀಗ ರಾಜ್ಯ ಸರ್ಕಾರ ಹೆಚ್ಚುವರಿ ಮತ್ತು ಜಿಲ್ಲಾ ನ್ಯಾಯಾಧೀಶರು ಅಥವಾ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನು ಪೀಠಾಸೀನ ಅಧಿಕಾರಿಗಳಾಗಿ ನೇಮಕ ಮಾಡಿದೆ.
- ಪ್ರಾಧಿಕಾರವು ಪೀಠಾಸೀನ ಅಧಿಕಾರಿ ಜತೆಗೆ ಒಬ್ಬ ರಿಜಿಸ್ಟ್ರಾರ್ ಅವರನ್ನು ಒಳಗೊಂಡಿರಲಿದೆ. ಅಲ್ಲದೇ ಪ್ರಾಧಿಕಾರಗಳ ಕಾರ್ಯಕಲಾಪಕ್ಕೆ ಅಗತ್ಯ ಸಿಬ್ಬಂದಿಗಳನ್ನು ಹೊಂದಿರಲಿದೆ.

- ಪ್ರಾಧಿಕಾರ ರಚನೆ ಮತ್ತು ಅದಕ್ಕೆ ಪೀಠಾಸೀನ ಅಧಿಕಾರಿಗಳ ನೇಮಕ ವಿಚಾರದಲ್ಲಿ ಸರ್ಕಾರದ ತೀರ್ಮಾನವೇ ಅಂತಿಮವಾಗಿರಲಿದೆ.

**ಪ್ರಾಧಿಕಾರದ ಅಧಿಕಾರ ವ್ಯಾಪ್ತಿ:**

ಭೂಸ್ವಾಧೀನ ಸಂಬಂಧಿ ಅರ್ಜಿಗಳ ಸಂಪೂರ್ಣ ವಿಚಾರಣೆಯನ್ನು ಈ ಪ್ರಾಧಿಕಾರಗಳು ನಡೆಸಲಿವೆ. ಪ್ರಾಧಿಕಾರದ ತೀರ್ಪನ್ನು ಹೈಕೋರ್ಟನಲ್ಲಿ ಮಾತ್ರ ಪ್ರಶ್ನಿಸಬಹುದಾಗಿದೆ. ಈ ಪ್ರಾಧಿಕಾರಗಳನ್ನು ಹೊರತುಪಡಿಸಿ ಸುಪ್ರೀಂಕೋರ್ಟ್, ಹೈಕೋರ್ಟ್ ಅಲ್ಲದೇ ಇತರ ಯಾವುದೇ ನ್ಯಾಯಾಲಯಗಳು ಭೂಸ್ವಾಧೀನ ಸಂಬಂಧಿ ಅರ್ಜಿಗಳ ವಿಚಾರಣೆ ನಡೆಸುವಂತಿಲ್ಲ. ಹೈಕೋರ್ಟ್ ಕೆಳಹಂತದಲ್ಲಿ ಕೇವಲ ಪ್ರಾಧಿಕಾರ ಮಾತ್ರ ಇವುಗಳ ವಿಚಾರಣೆ ನಡೆಸಬೇಕಿದ್ದು, ಅದಕ್ಕಾಗಿ ಪ್ರಾಧಿಕಾರಕ್ಕೆ ನ್ಯಾಯಾಂಗದ ಅಧಿಕಾರವನ್ನೇ ಕಾಯ್ದೆಯಲ್ಲಿ ನೀಡಲಾಗಿದೆ.

**<u>ಕೊರಗ ಮತ್ತು ಜೇನುಕುರುಬ ಜನಾಂಗದ ಮಕ್ಕಳಿಗೆ ಸ್ಟೈಫಂಡ್ ನೀಡಲಿರುವ ರಾಜ್ಯ ಸರ್ಕಾರ</u>**



ಬುಡಕಟ್ಟು ಸಮುದಾಯಕ್ಕೆ ಸೇರಿದ ಕೊರಗ ಮತ್ತು ಜೇನುಕುರುಬ ಜನಾಂಗದಲ್ಲಿ ಎಸ್ಸೆಸ್ಸೆಲ್ಸಿ ಮತ್ತು ಅದಕ್ಕಿಂತ ಹೆಚ್ಚು ಶಿಕ್ಷಣ ಪಡೆದವರಿಗೆ ಸ್ಟೈಪೆಂಡ್ ನೀಡಲು ರಾಜ್ಯ ಸರ್ಕಾರ ತೀರ್ಮಾನಿಸಿದೆ. ಇದರ ಜೊತೆಗೆ ರಾಜ್ಯದ ಆರು ಜಿಲ್ಲೆಗಳಲ್ಲಿ ಜಾರಿಯಲ್ಲಿರುವ ಬುಡಕಟ್ಟು ಜನಾಂಗದವರಿಗೆ ಪೌಷ್ಟಿಕ ಆಹಾರ ವಿತರಣೆ ಸೇರಿ ಇತರ ಯೋಜನೆಗಳನ್ನು ಚಿಕ್ಕಮಗಳೂರು ಜಿಲ್ಲೆಯ ಬುಡಕಟ್ಟು ಸಮುದಾಯದವರಿಗೂ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದ್ದು,ಮೈಸೂರಿನಲ್ಲಿ ಫೆ.1ರಂದು ನಡೆಯಲಿರುವ ಆದಿವಾಸಿಗಳಿಗೆ ಸವಲತ್ತು ವಿತರಣೆ ಕುರಿತ ಸಮಾವೇಶದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ರವರು ಈ ಎರಡೂ ಕಾರ್ಯಕ್ರಮಗಳಿಗೆ ಚಾಲನೆ ನೀಡಲಿದ್ದಾರೆ.

**ಮುಖ್ಯಾಂಶಗಳು**:

- ಕೊರಗ ಮತ್ತು ಜೇನುಕುರುಬ ಜನಾಂಗವನ್ನು ಶೈಕ್ಷಣಿಕ ಮತ್ತು ಆರ್ಥಿಕವಾಗಿ ಪ್ರೋತ್ಸಾಹಿಸುವ ಉದ್ದೇಶದಿಂದ ಅವರಿಗೆ ಸ್ಟೈಪೆಂಡ್ ವಿತರಿಸಲಾಗುತ್ತಿದೆ.
- ಎಸ್ಸೆಸ್ಸೆಲ್ಸಿ ಪೂರ್ಣಗೊಳಿಸಿದವರಿಗೆ ಮಾಸಿಕ ರೂ 2000, ಪಿಯು ಪೂರ್ಣಗೊಳಿಸಿದವರಿಗೆ 2,500 ರೂ., ಪದವಿ ಮುಗಿಸಿದವರಿಗೆ 3,500 ರೂ. ಮತ್ತು ಸ್ನಾತಕೋತ್ತರ ಪದವಿ ಮಾಡಿದವರಿಗೆ 4500 ರೂ. ಸ್ಟೈಪಂಡ್ ನೀಡಲಾಗುವುದು.
- ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ವಾಸಿಸುವ ಬುಡಕಟ್ಟು ಆದಿವಾಸಿ ಕುಟುಂಬಗಳಿಗೆ ಪ್ರತಿ ತಿಂಗಳು ನೀಡುವ ಆಹಾರಧಾನ್ಯ (ಒಂದು ಕುಟುಂಬಕ್ಕೆ 15 ಕೆ.ಜಿ.ಅಕ್ಕಿ, ರಾಗಿ ಅಥವಾ ಗೋಧಿ, 5 ಕೆ.ಜಿ.ತೊಗರಿಬೇಳೆ, ಐದು ಕೆ.ಜಿ.ಕಾಳುಗಳು, 2 ಲೀಟರ್ ಅಡುಗೆ ಎಣ್ಣೆ, 4 ಕೆ.ಜಿ.ಬೆಲ್ಲ ಅಥವಾ ಸಕ್ಕರೆ, 45 ಮೊಟ್ಟೆ, 1 ಕೆ.ಜಿ.ನಂದಿನಿ ತುಪ್ಪ)ವನ್ನು ಚಿಕ್ಕಮಗಳೂರು ಜಿಲ್ಲೆಯ ಬುಡಕಟ್ಟು ಸಮುದಾಯದವರಿಗೂ ನೀಡಲು ತೀರ್ಮಾನಿಸಲಾಗಿದೆ.

## ಬೆಂಗಳೂರು, ತುಮಕೂರು ದಾವಣಗೆರೆ ಅತ್ಯಂತ ಕಲುಷಿತ ನಗರಗಳು



ಬೆಂಗಳೂರು, ತುಮಕೂರು ಮತ್ತು ದಾವಣಗೆರೆ ನಗರಗಳು ರಾಜ್ಯದ ಅತ್ಯಂತ ಕಲುಷಿತ ನಗರಗಳೆನಿಸಿವೆ. ಗ್ರೀನ್‌ಪೀಸ್ ಇಂಡಿಯಾ ಸಂಸ್ಥೆ ನಡೆಸಿರುವ ಸಮೀಕ್ಷೆ ಪ್ರಕಾರ ರಾಜ್ಯದ ಹಲವು ನಗರಗಳಲ್ಲಿ ವಾಯು ಮಾಲಿನ್ಯ ಆತಂಕಕಾರಿ ಸ್ಥಿತಿ ತಲುಪಿದೆ ಎಂದು ಹೇಳಲಾಗಿದೆ.

**ಪ್ರಮುಖಾಂಶಗಳು:**

- ದಾವಣಗೆರೆ, ರಾಯಚೂರು, ಹುಬ್ಬಳ್ಳಿ ನಗರಗಳಲ್ಲಿ ಸಹ ಮಾಲಿನ್ಯ ಪ್ರಮಾಣ ರಾಷ್ಟ್ರೀಯ ಮಿತಿಗಿಂತ ಹೆಚ್ಚಿದೆ ಎಂದು ವರದಿಯಲ್ಲಿ ಹೇಳಿದೆ.
- ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಆನ್‌ಲೈನ್ ವರದಿ ಹಾಗೂ ಎಲ್ಲಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಂದ ಮಾಹಿತಿ ಹಕ್ಕು ಕಾಯ್ದೆ ಅಡಿ ಪಡೆದ ಮಾಹಿತಿ ಆಧಾರದ ಮೇಲೆ ಸಂಸ್ಥೆ ಈ ವರದಿ ನೀಡಿದೆ.
- ದೇಶದ 168 ನಗರಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಧ್ಯಯನದ ಪ್ರಕಾರ ವಾಹನಗಳ ಓಡಾಟದಿಂದ ಶೇ 42% ಮಾಲಿನ್ಯ ಉಂಟಾದರೆ, ರಸ್ತೆ ದೂಳಿನಿಂದ ಶೇ20 ರಷ್ಟಿದೆ.
- ರಾಜ್ಯದ ನಾಲ್ಕು ನಗರಗಳಲ್ಲಿ ವಾರ್ಷಿಕ ಪಿಎಂ (Particulate Matter (ತೇಲಾಡುವ ಕಣ))–10 ಪ್ರಮಾಣ ಸುಮಾರು 120 ಮೈಕ್ರೋ ಗ್ರಾಂ ಕ್ಯೂಬಿಕ್ ಮೀಟರ್‌ನಷ್ಟಿದೆ. ಬೆಂಗಳೂರಿನ ವೈಟ್‌ಫೀಲ್ಡ್ ನಂತಹ ಕೈಗಾರಿಕಾ ಪ್ರದೇಶದಲ್ಲಿ ಈ ವರ್ಷ ಆರ್‌ಎಸ್‌ಪಿಎಂ (Respiratory Suspended Particular Matter) ಪ್ರಮಾಣ 189 ಮೈಕ್ರೋ ಗ್ರಾಂ ಇದೆ. ಇದು ರಾಷ್ಟ್ರೀಯ ಮಟ್ಟಕ್ಕಿಂತ ಮೂರು ಪಟ್ಟು ಅಧಿಕವಾಗಿದೆ.
- ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಒಂದು ಸಾವಿರ ಲೀಟರ್ ಗಾಳಿಯಲ್ಲಿ ತೇಲಾಡುವ ದೂಳಿನ ಪ್ರಮಾಣ 20 ಮೈಕ್ರೋ ಗ್ರಾಂ ಕ್ಯೂಬಿಕ್ ಮೀಟರ್ ಹಾಗೂ ರಾಷ್ಟ್ರೀಯ ಮಿತಿ ಪ್ರಕಾರ 60 ಮೈಕ್ರೋ ಗ್ರಾಂ ನಷ್ಟಿರಬಹುದು.

**ಮಾಲಿನ್ಯಕ್ಕೆ ಮುಖ್ಯ ಕಾರಣ:**

ಹೆಚ್ಚುತ್ತಿರುವ ವಾಹನಗಳ ಸಂಖ್ಯೆ, ನಗರೀಕರಣ ಮತ್ತು ಕೈಗಾರಿಕೆಗಳಿಂದ ನಗರದ ಕೆಲವು ಭಾಗಗಳಲ್ಲಿ ಗಾಳಿಯಲ್ಲಿರುವ ತೇಲಾಡುವ ದೂಳಿನ ಕಣದ (ಆರ್‌ಎಸ್‌ಪಿಎಂ) ಪ್ರಮಾಣ ಹೆಚ್ಚಾಗಿದೆ ಮತ್ತು ಇನ್ನೂ ಕೆಲವು ಪ್ರದೇಶದಲ್ಲಿ ಅಪಾಯಕಾರಿ ಮಟ್ಟದಲ್ಲಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

**ಸೂಕ್ಷ್ಮಾತಿ ಸೂಕ್ಷ್ಮ ಕಣ**

ಗಾಳಿಯಲ್ಲಿ ತೇಲಾಡುವ ಸೂಕ್ಷ್ಮಾತಿ ಸೂಕ್ಷ್ಮ ಕಣಗಳನ್ನು ಪಾರ್ಟಿಕ್ಯುಲೇಟ್ ಮ್ಯಾಟರ್ (ಪಿಎಂ) ಎಂದು ಕರೆಯಲಾಗುತ್ತದೆ. ಮನುಷ್ಯರಿಗೆ ಮತ್ತು ಪರಿಸರಕ್ಕೆ ಹಾನಿ ಮಾಡಬಲ್ಲ ಗಾಳಿಯಲ್ಲಿನ ಘನರೂಪದ ಕಣಗಳು ಮತ್ತು ದ್ರವರೂಪದ ಸಣ್ಣ ಹನಿಗಳಿವು. 2.5 ಮೈಕ್ರೋಮೀಟರ್‌ಗಿಂತಲೂ ಚಿಕ್ಕದಾದ ಕಣಗಳನ್ನು ಪಿಎಂ 2.5 ಎಂದೂ, 10 ಮೈಕ್ರೋಮೀಟರ್ ಅಥವಾ ಅದಕ್ಕಿಂತ ಕಡಿಮೆ ಗಾತ್ರದ ಕಣಗಳನ್ನು ಪಿಎಂ 10 ಎಂದು ವಿಭಾಗಿಸಲಾಗಿದೆ. ಭಾರತದಲ್ಲಿ ಪಿಎಂ 2.5 ಅಪಾಯಕಾರಿ ಹಾಗೂ ಪಿಎಂ 10 ಸಾಮಾನ್ಯ ಮಾಲಿನ್ಯ ಕಾರಕ ಎಂದು ಪರಿಗಣಿಸಲಾಗಿದೆ.

**<u>ಕರ್ನಾಟಕ ಲೋಕಾಯುಕ್ತರಾಗಿ ಪಿ. ವಿಶ್ವನಾಥ ಶೆಟ್ಟಿ ನೇಮಕ</u>**



ರಾಜ್ಯ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ. ವಿಶ್ವನಾಥ ಶೆಟ್ಟಿ ಅವರನ್ನು ಕರ್ನಾಟಕ ಲೋಕಾಯುಕ್ತರನ್ನಾಗಿ ನೇಮಕ ಮಾಡಲಾಗಿದೆ. ರಾಜ್ಯಪಾಲ ವಜುಭಾಯ್ ವಾಲಾ ಅವರು ಪಿ. ವಿಶ್ವನಾಥ ಶೆಟ್ಟಿ ಅವರ ನೇಮಕಾತಿಗೆ ಅನುಮೋದನೆ ನೀಡಿದ್ದಾರೆ. ಲೋಕಾಯುಕ್ತರಾಗಿದ್ದ ನ್ಯಾಯಮೂರ್ತಿ ವೈ. ಭಾಸ್ಕರರಾವ್ ಅವರು ಅಧಿಕಾರದ ದುರುಪಯೋಗ ಹಾಗೂ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡಿದ ಆರೋಪಕ್ಕೆ ತುತ್ತಾಗಿ 2015ರ ಡಿಸೆಂಬರ್‌ನಲ್ಲಿ ರಾಜೀನಾಮೆ ನೀಡಿದ್ದರು. ಆ ಬಳಿಕ ಈ ಸ್ಥಾನ ತೆರವಾಗಿತ್ತು.

**ಪಿ. ವಿಶ್ವನಾಥ್ ಶೆಟ್ಟಿ ಬಗ್ಗೆ:**

- ನ್ಯಾ. ವಿಶ್ವನಾಥ ಶೆಟ್ಟಿ ರವರು ಉಡುಪಿ ತಾಲ್ಲೂಕಿನ ಉಪ್ಪೂರು ಗ್ರಾಮದವರು. 1944ರಲ್ಲಿ ಇವರು ಜನಿಸಿದರು. 1966ರಲ್ಲಿ ಹೈಕೋರ್ಟ್‌ನಲ್ಲಿ ವಕೀಲ ವೃತ್ತಿ ಆರಂಭಿಸಿದರು.
- 1993ರಿಂದ ಸುಪ್ರೀಂಕೋರ್ಟ್ ವಕೀಲರಾಗಿ ಕರ್ತವ್ಯ ನಿರ್ವಹಿಸಿದರು. ಶ್ರೀಯುತರು ಕರ್ನಾಟಕ ವಕೀಲರ ಪರಿಷತ್ತಿನ ಅಧ್ಯಕ್ಷರಾಗಿ ಸಹ ಸೇವೆ ಸಲ್ಲಿಸಿದ್ದಾರೆ.
- 1995ರಲ್ಲಿ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ನೇಮಕಗೊಂಡರು. ಕರ್ನಾಟಕ ನ್ಯಾಯಾಂಗ ಅಕಾಡೆಮಿಯ ಮೊದಲ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ ಶೆಟ್ಟಿ ಅವರು, ಹೈಕೋರ್ಟ್‌ನ ಕಾನೂನು ಸೇವಾ ಸಮಿತಿ ಅಧ್ಯಕ್ಷ ಹಾಗೂ ಕರ್ನಾಟಕ ಕಾನೂನು ಸೇವಾ ಪ್ರಾಧಿಕಾರದ ಕಾರ್ಯನಿರ್ವಾಹಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

**ಕರ್ನಾಟಕ ಲೋಕಾಯುಕ್ತ ಬಗ್ಗೆ:**

ಆಡಳಿತ ಸುಧಾರಣೆಗಳ ಆಯೋಗವು 1966 ರಲ್ಲಿ ಕೇಂದ್ರ ಸರಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ಕೇಂದ್ರ ಮಟ್ಟದಲ್ಲಿ ಲೋಕಪಾಲ ಮತ್ತು ರಾಜ್ಯಮಟ್ಟದಲ್ಲಿ ಲೋಕಾಯುಕ್ತ ಎಂಬ ಸಂಸ್ಥೆಗಳನ್ನು ಸ್ಥಾಪಿಸಲು ಶಿಫಾರಸ್ಸು ಮಾಡಿತ್ತು. ಆ ಶಿಫಾರಸ್ಸಿನಂತೆ 1971 ರಲ್ಲಿಯೇ ಲೋಕಾಯುಕ್ತ ಸಂಸ್ಥೆಯನ್ನು ಸ್ಥಾಪಿಸಿದ ಮೊದಲ ರಾಜ್ಯ ಎಂಬ ಹೆಗ್ಗಳಿಕೆಗೆ ಮಹಾರಾಷ್ಟ್ರ ಪಾತ್ರವಾಯಿತು. 1983 ರಲ್ಲಿ ಜನತಾ ಪಾರ್ಟಿಯು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ತಾನು ಗೆದ್ದುಬಂದರೆ ಲೋಕಾಯುಕ್ತ ಕಾನೂನನ್ನು ಜಾರಿ ಗೊಳಿಸುವುದಾಗಿ ಭರವಸೆ ನೀಡಿತ್ತು. ಅದರಂತೆ 1983 ರಲ್ಲಿ ತನ್ನ ಭರವಸೆಯಂತೆ ಅದು 1983 ರಲ್ಲಿ ಕರ್ನಾಟಕ ಲೋಕಾಯುಕ್ತ ಅಧಿನಿಯಮವನ್ನು ಅಂಗೀಕರಿಸಿ 1986 ರಲ್ಲಿ ಅದನ್ನು ಜಾರಿಗೊಳಿಸಿತು. ಕಾಯಿದೆಯಲ್ಲಿ ಒಬ್ಬ ಲೋಕಾಯುಕ್ತ, ಒಬ್ಬರು ಅಥವಾ ಒಬ್ಬರಿಗಿಂತ ಹೆಚ್ಚು ಉಪಲೋಕಾಯುಕ್ತರನ್ನು ನೇಮಕ ಮಾಡಲು ಅವಕಾಶ ನೀಡಲಾಗಿದೆ.

**ಲೋಕಾಯುಕ್ತರಾಗಲು ಬೇಕಾದ ಅರ್ಹತೆ**:

- ಸುಪ್ರೀಂ ಕೋರ್ಟ್ನ ನ್ಯಾಯಾಧೀಶರಾಗಿ ಅಥವಾ ಹೈಕೋರ್ಟ್ನ ಮುಖ್ಯ ನ್ಯಾಯಾಧೀಶರಾಗಿ ಅಥವಾ ಹೈಕೋರ್ಟ್ನಲ್ಲಿ ನ್ಯಾಯಾಧೀಶರಾಗಿ ಹತ್ತು ವರ್ಷಗಳಗಿಂತ ಕಡಿಮೆ ಇಲ್ಲದ ಅವಧಿಗೆ ಸೇವೆ ಸಲ್ಲಿಸಿದವರು ಅರ್ಹರಾಗಿರುತ್ತಾರೆ.
- **ಉಪಲೋಕಾಯುಕ್ತ:** ಉಪಲೋಕಾಯುಕ್ತ ಆಗಲು ಹೈಕೋರ್ಟಿನ ನ್ಯಾಯಾಧೀಶರಾಗಿ ಕನಿಷ್ಠ ಐದು ವರ್ಷ ಸೇವೆ ಸಲ್ಲಿಸಿರಬೇಕು.

**ಲೋಕಾಯುಕ್ತರನ್ನು ನೇಮಕ ಮಾಡುವವರು:**

ರಾಜ್ಯಪಾಲರು ಲೋಕಾಯುಕ್ತ ಮತ್ತು ಉಪ ಲೋಕಾಯುಕ್ತರನ್ನು ನೇಮಕ ಮಾಡುವ ಅಧಿಕಾರವನ್ನು ಹೊಂದಿರುತ್ತಾರೆ.

**ಆಯ್ಕೆ ಸಮಿತಿ:**

ರಾಜ್ಯದ ಮುಖ್ಯಮಂತ್ರಿ ರವರ ನೇತೃತ್ವದ ಸಮಿತಿ ಲೋಕಾಯುಕ್ತರನ್ನು ನೇಮಕ ಮಾಡುತ್ತದೆ. ಈ ಸಮಿತಿಯು ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು, ಕರ್ನಾಟಕ ವಿಧಾನ ಪರಿಷತ್ತ್ ಅಧ್ಯಕ್ಷರು, ವಿಧಾನಸಭೆಯ ಸ್ಪೀಕರ್, ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನು ಒಳಗೊಂಡಿರುತ್ತದೆ.

**ಅಧಿಕಾರ ಅವಧಿ**: ಲೋಕಾಯುಕ್ತ ಮತ್ತು ಉಪಲೋಕಾಯುಕ್ತರವರು ಅಧಿಕಾರ ವಹಿಸಿಕೊಂಡ ದಿನದಿಂದ ಐದು ವರ್ಷಗಳ ಕಾಲ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಾರೆ. ರಾಜೀನಾಮೆಯನ್ನು ರಾಜ್ಯಪಾಲರಿಗೆ ನೀಡಬೇಕು.

## ರಾಷ್ಟ್ರೀಯ

**ಕೊಚ್ಚಿ ಶಿಪ್ ಯಾರ್ಡ್ ನಿಂದ ಐಎನ್ಎಸ್ ಆಯುಷ್ ಗಸ್ತು ನೌಕೆ ಹಸ್ತಾಂತರ**



ಕೊಚ್ಚಿ ಶಿಪ್ ಯಾರ್ಡ್ ನಿರ್ಮಾಣದ ವೇಗವಾಗಿ ಚಲಿಸಬಲ್ಲ ಗಸ್ತು ನೌಕೆ ಐಸಿಜಿಎಸ್ ಆಯುಷ್ ಅನ್ನು ಭಾರತೀಯ ಕರಾವಳಿ ಭದ್ರತ ಪಡೆಗೆ ಹಸ್ತಾಂತರಿಸಿತು. ಇದು ಕೊಚ್ಚಿ ಶಿಪ್ ಯಾರ್ಡ್ ನಿರ್ಮಾಣದ 20ನೇ ಗಸ್ತು ನೌಕೆಯಾಗಿದೆ. ಆ ಮೂಲಕ ಕೊಚ್ಚಿ ಶಿಪ್ ಯಾರ್ಡ್ ಒಪ್ಪಂದದ ಪ್ರಕಾರ ಭಾರತೀಯ ಕರಾವಳಿ ಪಡೆಗೆ 20 ವೇಗವಾಗಿ ಚಲಿಸಬಲ್ಲ ಗಸ್ತು ನೌಕೆಯನ್ನು ಹಸ್ತಾಂತರಿಸಿದಂತಾಗಿದೆ. ಐಸಿಜಿಎಸ್ ಆಯುಷ್ ಕೃಷ್ಣಪಟ್ಟಣಂನಲ್ಲಿರುವ ಕರಾವಳಿ ಭದ್ರತಪಡೆಯ ನಿಲ್ದಾಣದಿಂದ ಕಾರ್ಯನಿರ್ವಹಿಸಲಿದೆ. ಈ ಸರಣಿ ನೌಕೆಗಳ ಕೊನೆಯದಾಗಿದ್ದು, ನಿಗದಿತ ಅವಧಿಗಿಂತ ಮೂರು ತಿಂಗಳ ಮುಂಚಿತವಾಗಿ ಹಸ್ತಾಂತರಿಸಲಾಗಿದೆ.

**ಹಿನ್ನಲೆ**:

- ಅಕ್ಟೋಬರ್ 2010ರಲ್ಲಿ 20 ವೇಗವಾಗಿ ಚಲಿಸಬಲ್ಲ ಗಸ್ತು ನೌಕೆಗಳನ್ನು ನಿರ್ಮಿಸಲು ಕೊಚ್ಚಿ ಶಿಪ್ ಯಾರ್ಡ್ ಗೆ ಒಪ್ಪಂದ ನೀಡಲಾಗಿತ್ತು. ಅದರಂತೆ 2013ರಲ್ಲಿ ಕೊಚ್ಚಿ ಶಿಪ್ ಯಾರ್ಡ್ ಮೊದಲ ಗಸ್ತು ನೌಕೆಯನ್ನು ಹಸ್ತಾಂತರ ಮಾಡಿತ್ತು.
- ಆ ನಂತರ ಎರಡು ತಿಂಗಳ ಅಂತರದಲ್ಲಿ ಉಳಿದ ಗಸ್ತು ನೌಕೆಗಳನ್ನು ಭಾರತೀಯ ಕರಾವಳಿ ಭದ್ರತ ಪಡೆಗೆ ಹಸ್ತಾಂತರಿಸಲಾಗಿತ್ತು.
- ಈ ನೌಕೆಗಳು 50ಮೀ ಉದ್ದವಿದ್ದು, 7.6 ಮೀಟರ್ ಬೀಮ್ ಅನ್ನು ಹೊಂದಿವೆ.

**ವೇಗವಾಗಿ ಚಲಿಸಬಲ್ಲ ಗಸ್ತುನೌಕೆ (Fast Patrol Vessel):**

- ಭಾರತೀಯ ಕರಾವಳಿ ತೀರಾದ ಮೇಲೆ ಕಣ್ಣಾವಲಿರಿಸುವಲ್ಲಿ ಈ ಗಸ್ತು ನೌಕೆಗಳು ಪ್ರಮುಖ ಪಾತ್ರವಹಿಸುತ್ತವೆ. ಕಳ್ಳಸಾಗಣಿಕೆ, ಸಮುದ್ರ ಕಳ್ಳತನ, ರಕ್ಷಣೆ ಕಾರ್ಯ ಹಾಗೂ ಮೀನುಗಳ ಸಂರಕ್ಷಣೆ ಮತ್ತು ಮೀನುಗಳ ನಿಗಾವಹಿಸಲು ಈ ನೌಕೆಗಳನ್ನು ಬಳಸಲಾಗುತ್ತಿದೆ.

## ಹೊಸ ವರ್ಷ ಭಾಷಣ: ಪ್ರಧಾನಿ ಮೋದಿಯಿಂದ ನೂತನ ಯೋಜನೆಗಳ ಘೋಷಣೆ



ಹೊಸ ವರ್ಷದ ಅಂಗವಾಗಿ ದೇಶವನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ ನರೇಂದ್ರ ಮೋದಿ ರವರು ಕಪ್ಪು ಹಣದ ವಿರುದ್ಧ ಹೋರಾಡಲು ಕೇಂದ್ರ ಸರ್ಕಾರ ಕೈಗೊಂಡ ನೋಟು ರದ್ಧತಿ ತೀರ್ಮಾನವನ್ನು ಬೆಂಬಲಿಸಿ ಕಪ್ಪುಹಣ ಪಿಡುಗು ನಿರ್ಮೂಲನೆಗೆ ಕಠಿಣ ತ್ಯಾಗವನ್ನು ಮಾಡಿದ ದೇಶದ ಜನತೆಗೆ ಕೃತಜ್ಞತೆ ಸಲ್ಲಿಸಿದರು. ಬಡವರು, ಗ್ರಾಮೀಣ ಜನರು ಹಾಗೂ ಸಣ್ಣ ಉದ್ಯಮಿಗಳಿಗೆ ಮತ್ತು ಸಾರ್ವಜನಿಕರಿಗೆ ನೋಟು ರದ್ಧತಿ ಪರಿಣಾಮವನ್ನು ತಗ್ಗಿಸುವ ಸಲುವಾಗಿ ಹಲವು ಯೋಜನೆಗಳನ್ನು ಪ್ರಕಟಿಸಿದರು.

**ಪ್ರಮುಖಾಂಶಗಳು**:

- **ಗ್ರಾಮೀಣ ಮತ್ತು ನಗರ ವಾಸಿ ಬಡವರಿಗೆ ವಸತಿ ಯೋಜನೆ:** ನಗರ ಪ್ರದೇಶಗಳ ಬಡವರು 2017ರಲ್ಲಿ ಪಡೆಯುವ ರೂ 9 ಲಕ್ಷದವರೆಗಿನ ಸಾಲದ ಮೇಲಿನ ಬಡ್ಡಿಯಲ್ಲಿ ಶೇ 4 ರಷ್ಟು ಮನ್ನಾ. ರೂ 12 ಲಕ್ಷದವರೆಗಿನ ಸಾಲದ ಮೇಲಿನ ಶೇ 3 ರಷ್ಟು ಮನ್ನಾ. ಗ್ರಾಮೀಣ ಭಾಗದಲ್ಲಿ ಬಡವರು ಮನೆ ಕಟ್ಟಲು 2017ರಲ್ಲಿ ಪಡೆಯುವ ರೂ 2 ಲಕ್ಷದವರೆಗಿನ ಸಾಲದ ಮೇಲೆ ಶೇ 3 ರಷ್ಟು ಬಡ್ಡಿ ಮನ್ನಾ.
- **ರೈತರಿಗೆ:** ಮುಂದಿನ ಮೂರು ತಿಂಗಳಲ್ಲಿ 3 ಕೋಟಿ ಕಿಸಾನ್ ಕಾರ್ಡ್ ಗಳನ್ನು ರುಪೇ ಕಾರ್ಡ್ ಗಳನ್ನಾಗಿ ಪರಿವರ್ತನೆ. ರೈತರು ಪಡೆಯುವ ಸಾಲದ ಮೇಲೆ 60 ದಿನಗಳ ಬಡ್ಡಿಯನ್ನು ಸರ್ಕಾರವೇ ಭರಿಸಲಿದೆ. ಈಗಾಗಲೇ ನಬಾರ್ಡ್ ನಲ್ಲಿ ರೂ 21,000 ಕೋಟಿಗೆ ಹೆಚ್ಚುವರಿ ರೂ 20,000 ಕೋಟಿಯನ್ನು ನೀಡಲಿದ್ದು, ಸಹಕಾರಿ ಬ್ಯಾಂಕ್ ಗಳು ಹಾಗೂ ಸೊಸೈಟಿಗಳ ಮೂಲಕ ಕಡಿಮೆ ಬಡ್ಡಿದರದಲ್ಲಿ ಸಾಲವನ್ನು ನೀಡಬಹುದು.
- **ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ವಲಯದ ಉದ್ಯಮಗಳು:** ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ವಲಯದ ಉದ್ದಿಮೆಗಳು ಪಡೆಯುವ ರೂ 2 ಕೋಟಿ ಸಾಲಕ್ಕೆ ಸರ್ಕಾರವೇ ಖಾತ್ರಿದಾರ. ಸಣ್ಣ ಉದ್ದಿಮೆಗಳ ನಗದು ಸಾಲ ಮಿತಿಯನ್ನು ಈಗಿನ ಶೇ 20% ರಿಂದ ಶೇ 25% ರಷ್ಟಕ್ಕೆ ಹೆಚ್ಚಿಸಲು ಬ್ಯಾಂಕ್ ಗಳಿಗೆ ಸೂಚನೆ.
- **ಮಹಿಳೆಯರು ಮತ್ತು ಹಿರಿಯರು:** 650 ಗ್ರಾಮೀಣ ಪ್ರದೇಶದ ಜಿಲ್ಲೆಗಳಲ್ಲಿನ ಗರ್ಭಿಣಿಯರು ಮತ್ತು ಬಾಣಂತಿಯರಿಗೆ ರೂ 6000 ಸಹಾಯ ಧನವನ್ನು ನೇರವಾಗಿ ಖಾತೆಗೆ ಜಮೆ ಮಾಡಲಾಗುವುದು. ವೈದ್ಯಕೀಯ ವೆಚ್ಚವನ್ನು ಭರಿಸುವುದು ಹಾಗೂ ಶಿಶು ಮತ್ತು ತಾಯಂದಿರ ಮರಣ ಪ್ರಮಾಣ ತಗ್ಗಿಸುವುದು ಇದರ ಉದ್ದೇಶ. ಹಿರಿಯ ನಾಗರಿಕರು 10 ವರ್ಷಗಳ ಅವಧಿಗೆ ಇಡುವ ರೂ 7.5 ಲಕ್ಷದವರೆಗಿನ ಠೇವಣಿಗೆ ಶೇ.8% ಬಡ್ಡಿ.

## ಸುಪ್ರೀಂಕೋರ್ಟ್ನ 44ನೇ ಮುಖ್ಯ ನ್ಯಾಯಾಮೂರ್ತಿಯಾಗಿ ಜೆ.ಎಸ್.ಖೇಹರ್ ಪ್ರಮಾಣ ವಚನ



ನ್ಯಾಯಾಮೂರ್ತಿ ಜೆ.ಎಸ್.ಖೇಹರ್ ರವರು ಸುಪ್ರೀಂಕೋರ್ಟ್ನ 44ನೇ ಮುಖ್ಯನ್ಯಾಯಾಮೂರ್ತಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ರವರು ಖೇಹರ್ ರವರಿಗೆ ಪ್ರಮಾಣ ವಚನ ಬೋಧಿಸಿದರು. ಆ ಮೂಲಕ ಖೇಹರ್ ಅವರು ಮುಖ್ಯನ್ಯಾಯಾಮೂರ್ತಿ ಹುದ್ದೆಯನ್ನು ಅಲಂಕರಿಸಿದ ಸಿಖ್ ಸಮುದಾಯದ ಮೊದಲ ವ್ಯಕ್ತಿ ಎನಿಸಿದರು. ಟಿ.ಎಸ್. ಠಾಕೂರ್ ರವರ ಅವಧಿ ಜನವರಿ 3, 2017ಕ್ಕೆ ಅಂತ್ಯಗೊಂಡ ಕಾರಣ ಖೇಹರ್ ಅವರನ್ನು ಮುಖ್ಯನ್ಯಾಯಾಮೂರ್ತಿಯಾಗಿ ನೇಮಕ ಮಾಡಲಾಗಿತ್ತು. ಖೇಹರ್

ಅವರು ಜನವರಿ 4, 2017 ರಿಂದ ಆಗಸ್ಟ 4, 2017 ರವರೆಗೆ ಅಂದರೆ 65 ವರ್ಷ ತುಂಬವವರೆಗೆ ಅಧಿಕಾರದಲ್ಲಿ ಇರಲಿದ್ದಾರೆ.

**ಜೆ.ಎಸ್.ಖೇಹರ್ ಬಗ್ಗೆ:**

- ಖೇಹರ್ ರವರು 28ನೇ ಆಗಸ್ಟ 1952ರಲ್ಲಿ ಜನಿಸಿದ್ದಾರೆ. 1977 ರಲ್ಲಿ ಪಂಜಾಬ್ ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಪಡೆದುಕೊಂಡಿದ್ದಾರೆ. ನಂತರ 1979 ರಲ್ಲಿ ಇದೇ ವಿಶ್ವವಿದ್ಯಾಲಯದಿಂದ ಎಲ್ಎಲ್ಎಂ ಪದವಿಯನ್ನು ಪಡೆದುಕೊಂಡಿದ್ದಾರೆ.
- 1979 ರಲ್ಲಿ ವಕೀಲರಾಗಿ ಸೇವೆ ಆರಂಭಿಸಿದ ಖೇಹರ್ ರವರು ಪಂಜಾಬ್ ಮತ್ತು ಹೈಕೋರ್ಟ್ ನ್ಯಾಯಾಲಯ, ಚಂಡೀಗರ್ ನ್ಯಾಯಾಲಯ, ಹಿಮಾಚಲ ಪ್ರದೇಶ ಮತ್ತು ಸುಪ್ರೀಂ ಕೋರ್ಟ್ನಲ್ಲಿ ವಕೀಲರಾಗಿ ಸೇವೆ ಸಲ್ಲಿಸಿದ್ದರು.
- ಖೇಹರ್ ರವರು 1999 ರಲ್ಲಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ನ ಪೀಠಕ್ಕೆ ನೇಮಕಗೊಂಡರು. 2008 ಮತ್ತು 2009 ರಲ್ಲಿ ಎರಡು ಬಾರಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ನ ಆಕ್ಟಿಂಗ್ ಚೀಫ್ ಜಸ್ಟೀಸ್ ಆಗಿ ನೇಮಕಗೊಂಡಿದ್ದರು.
- 2009ರಲ್ಲಿ ಉತ್ತರಖಂಡ ಹೈಕೋರ್ಟ್ನ ಮುಖ್ಯನ್ಯಾಯಮೂರ್ತಿಯಾಗಿ ನೇಮಕಮಾಡಲಾಯಿತು. 2010ರಲ್ಲಿ ಕರ್ನಾಟಕ ಹೈಕೋರ್ಟ್ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು.
- 2011ರಲ್ಲಿ ಸುಪ್ರೀಂಕೋರ್ಟ್ನ ನ್ಯಾಯಮೂರ್ತಿಯಾಗಿ ನೇಮಕಗೊಂಡ ಖೇಹರ್ ಅವರು ಆಗಸ್ಟ 2017 ರಲ್ಲಿ ನಿವೃತ್ತಿ ಹೊಂದಲಿದ್ದಾರೆ.
- ರಾಷ್ಟ್ರೀಯ ನ್ಯಾಯಾಧೀಶರ ನೇಮಕಾತಿ ಸಮಿತಿ ಕಾಯಿದೆ ಮತ್ತು ನ್ಯಾಯಾಧೀಶರ ನೇಮಕಾತಿಗೆ ಸಂವಿಧಾನದ 99ನೇ ತಿದ್ದುಪಡಿ ಕಾಯಿದೆಯನ್ನು ಅಸಿಂಧೂಗೊಳಿಸಿದ ಸುಪ್ರೀಂಕೋರ್ಟ್ ಐದು ಜನರನ್ನು ಒಳಗೊಂಡದ ಪೀಠದ ನೇತೃತ್ವವಹಿಸಿದ್ದರು. ಅಲ್ಲದೇ ಜನವರಿ 2016 ರಲ್ಲಿ ಅರುಣಾಚಲ ಪ್ರದೇಶದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆ ಸಂವಿಧಾನ ಬಾಹಿರವೆಂದು ತೀರ್ಪು ನೀಡಿದ ಪೀಠದ ನೇತೃತ್ವವನ್ನು ಸಹ ಖೇಹರ್ ವಹಿಸಿದ್ದರು.

## ಐದು ರಾಜ್ಯಗಳ ವಿಧಾನಸಭಾ ಚುನಾವಣೆ ವೇಳಾಪಟ್ಟಿ ಘೋಷಿಸಿದ ಚುನಾವಣಾ ಆಯೋಗ



ಪಂಜಾಬ್, ಗೋವಾ, ಉತ್ತರ ಪ್ರದೇಶ, ಉತ್ತರಖಂಡ ಮತ್ತು ಮಣಿಪುರ ಈ ಐದು ರಾಜ್ಯಗಳ ವಿಧಾನಸಭಾ ಚುನಾವಣಾ ವೇಳಾ ಪಟ್ಟಿಯನ್ನು ಕೇಂದ್ರ ಚುನಾವಣಾ ಆಯೋಗ ಪ್ರಕಟಗೊಳಿಸಿದೆ. ಚುನಾವಣೆ ವೇಳಾಪಟ್ಟಿ ಪ್ರಕಟಣೆಗೊಂಡ ಕಾರಣ ಮಾದರಿ ನೀತಿ ಸಂಹಿತೆ ಜಾರಿಗೆ ಬಂದಿದೆ. ಈ ಐದು ರಾಜ್ಯಗಳ ಮತಎಣಿಕೆ 11ನೇ ಮಾರ್ಚ 2017ರಂದು ನಡೆಯಲಿದೆ.

**ಪ್ರಮುಖಾಂಶಗಳು:**

- ಉತ್ತರಖಂಡ, ಗೋವಾ ಮತ್ತು ಪಂಜಾಬ್ ನಲ್ಲಿ ಒಂದೇ ಹಂತದಲ್ಲಿ ಫೆಬ್ರವರಿ 4 ರಂದು ಚುನಾವಣೆ ನಡೆಯಲಿದ್ದು, ಗೋವಾದ ಒಟ್ಟು 40 ವಿಧಾನಸಭಾ ಕ್ಷೇತ್ರ ಹಾಗೂ ಪಂಜಾಬ್ ನ ಒಟ್ಟು 117 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ.
- **ಉತ್ತರ ಪ್ರದೇಶ**: ದೇಶದ ಅತಿ ದೊಡ್ಡ ರಾಜ್ಯ ಉತ್ತರ ಪ್ರದೇಶದಲ್ಲಿ 403 ವಿಧಾನಸಭಾ ಕ್ಷೇತ್ರಗಳಿಗೆ 7 ಹಂತದಲ್ಲಿ ಚುನಾವಣೆ ನಡೆಯಲಿದೆ. ಈ ಏಳು ಹಂತಗಳೆಂದರೆ 11ನೇ ಫೆಬ್ರವರಿ, 15ನೇ ಫೆಬ್ರವರಿ, 19ನೇ ಫೆಬ್ರವರಿ, 23ನೇ ಫೆಬ್ರವರಿ, 27ನೇ ಫೆಬ್ರವರಿ, 4ನೇ ಮಾರ್ಚ್ ಮತ್ತು 8ನೇ ಮಾರ್ಚ್ 2017.

- **ಮಣಿಪುರ:** ಮಣಿಪುರದಲ್ಲಿ 60 ವಿಧಾನಸಭಾ ಕ್ಷೇತ್ರಗಳಿಗೆ ಎರಡು ಹಂತದಲ್ಲಿ 4 ಮತ್ತು 8ನೇ ಮಾರ್ಚ್ ರಂದು ನಡೆಯಲಿದೆ.
- ಈ ಐದು ಕ್ಷೇತ್ರಗಳಲ್ಲಿ ಸುಮಾರು 16 ಕೋಟಿ ಮತದಾರರು ಚುನಾವಣೆಯಲ್ಲಿ ಭಾಗವಹಿಸಲು ಅರ್ಹರಿದ್ದಾರೆ. ಪಂಜಾಬ್, ಉತ್ತರಖಂಡ ಮತ್ತು ಉತ್ತರ ಪ್ರದೇಶದಲ್ಲಿ ಪ್ರತಿ ಅಭ್ಯರ್ಥಿಗೆ ಚುನಾವಣೆ ವೆಚ್ಚವನ್ನು ರೂ 28 ಲಕ್ಷಕ್ಕೆ ಮಿತಿಗೊಳಿಸಲಾಗಿದೆ. ಗೋವಾ ಮತ್ತು ಮಣಿಪುರದಲ್ಲಿ ರೂ 20 ಲಕ್ಷ.

**2017 ಸ್ವಚ್ಚ ಭಾರತ ಸಮೀಕ್ಷೆಗೆ ಕೇಂದ್ರ ಸರ್ಕಾರ ಚಾಲನೆ**



ಕೇಂದ್ರ ನಗರಾಭಿವೃದ್ಧಿ ಸಚಿವಾಲಯ ಸ್ವಚ್ಚ ಭಾರತ ಸಮೀಕ್ಷೆಗೆ ಚಾಲನೆ ನೀಡಿದೆ. ಇದರಡಿ ದೇಶದಾದ್ಯಂತ ಒಂದು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ 500 ನಗರ/ಪಟ್ಟಣಗಳಲ್ಲಿ ಸ್ವಚ್ಚತೆಯ ಮೇಲೆ ಸಮೀಕ್ಷೆಯನ್ನು ನಡೆಸಲಾಗುವುದು. ಈ ಸಮೀಕ್ಷೆಯನ್ನು ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ ಸ್ವಚ್ಚ ಭಾರತ ಅಭಿಯಾನದಡಿ ನಡೆಸುತ್ತಿದ್ದು, ನೈರ್ಮಲ್ಯತೆ ಸುಧಾರಿಸಲು ನಗರಗಳ ನಡುವೆ ಸ್ಫರ್ಧಾತ್ಮಕ ವಾತಾವರಣ ಸೃಷ್ಟಿಸುವುದು ಸಮೀಕ್ಷೆಯ ಉದ್ದೇಶ.

**ಪ್ರಮುಖಾಂಶಗಳು:**

- ಸ್ವಚ್ಚ ಭಾರತ ಸಮೀಕ್ಷೆಯಡಿ ಮುನಿಸಿಪಾಲಿಟಿ ಸಂಸ್ಥೆಗಳು ನೀಡುವ ಮಾಹಿತಿ, ನೇರ ಪರಿಶೀಲನೆ ಮತ್ತು ಸಾರ್ವಜನಿಕರಿಂದ ಪಡೆದ ಅಭಿಪ್ರಾಯ ಆಧಾರದ ಮೇಲೆ ನಗರಗಳ ಸ್ವಚ್ಚತೆಯನ್ನು ನಿರ್ಧರಿಸಲಾಗುವುದು.
- ಮುನಿಸಿಪಾಲಿಟಿ ಸಂಸ್ಥೆಗಳು ನೀಡುವ ಮಾಹಿತಿಯು 900 ಅಂಕಗಳನ್ನು, ನೇರ ಪರಿಶೀಲನೆಗೆ 500 ಅಂಕಗಳು ಹಾಗೂ ಸಾರ್ವಜನಿಕರು ನೀಡುವ ಅಭಿಪ್ರಾಯವು 600 ಅಂಕಗಳನ್ನು ಒಳಗೊಂಡಿರಲಿದೆ.

**ಮೌಲ್ಯಮಾಪನಕ್ಕೆ ಪರಿಗಣಿಸುವ ಅಂಶಗಳು:**

- ಕಸ ಸಂಗ್ರಹಣೆ, ಕಸಗುಡಿಸುವಿಕೆ ಮತ್ತು ಸಾಗಣೆ (40% ಅಂಕ), ಬಯಲು ಮಲ ವಿಸರ್ಜನೆ ಮುಕ್ತ ಮತ್ತು ಶೌಚಾಲಯ (ಶೇ 30%), ಮುನಿಸಿಪಾಲ್ ಘನ ತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ (ಶೇ 20%), ಸ್ವಚ್ಚ ಭಾರತ ಅಭಿಯಾನದಡಿ ಶಿಕ್ಷಣ ಮತ್ತು ವರ್ತನೆಯಲ್ಲಾದ ಬದಲಾವಣೆ ಹಾಗೂ ಸಾಮರ್ಥ್ಯ ವರ್ಧನೆ (ಶೇ 10%).
- ನಾಗರಿಕರು ತಮ್ಮ ಅಭಿಪ್ರಾಯವನ್ನು ಸ್ವಚ್ಚ ಸಮೀಕ್ಷೆ ವೆಬ್ ಸೈಟ್ ನಲ್ಲಿರುವ ಅರ್ಜಿಯನ್ನು ತುಂಬುವ ಮೂಲಕ ಅಥವಾ 1969 ನಂಬರ್ ಗೆ ಮಿಸ್ಡ್ ಕಾಲ್ ನೀಡುವ ಮೂಲಕ ತಮ್ಮ ಅಭಿಪ್ರಾಯವನ್ನು ನೀಡಬಹುದು.

ಸ್ವಚ್ಚ ಭಾರತ ಸಮೀಕ್ಷೆ 2016 ರಲ್ಲಿ 73 ನಗರಗಳಿಗೆ ಸ್ಥಾನವನ್ನು ನೀಡಲಾಗಿತ್ತು. ಮೈಸೂರು ಮೊದಲ ಸ್ಥಾನವನ್ನು ಪಡೆದುಕೊಂಡಿತ್ತು. ಎರಡನೇ ಸ್ಥಾನ ಚತ್ತೀಸಗರ್ ಗೆ ಲಭಿಸಿತ್ತು. ಒಂದು ಲಕ್ಷಕ್ಕೂ ಹೆಚ್ಚು ಜನರು ಸಮೀಕ್ಷೆಯಲ್ಲಿ ಭಾಗವಹಿಸಿ ತಮ್ಮ ಅಭಿಪ್ರಾಯವನ್ನು ನೀಡಿದ್ದರು.

**2017 ಸುಸ್ಥಿರ ಪ್ರವಾಸೋದ್ಯಮ ಅಭಿವೃದ್ಧಿ ಅಂತಾರಾಷ್ಟ್ರೀಯ ವರ್ಷ: ವಿಶ್ವಸಂಸ್ಥೆ**




ವಿಶ್ವಸಂಸ್ಥೆಯ ಸಾಮಾನ್ಯ ಸಭೆ 2017 ಅನ್ನು ಇಂಟರ್ನ್ಯಾಷನಲ್ ಇಯರ್ ಆಫ್ ಸಸ್ಟೈನಬಲ್ ಟೂರಿಸಂ ಫಾರ್ ಡೆವೆಲಪ್ಮೆಂಟ್ (International Year of Sustainable Tourism for Development) ಎಂದು ಘೋಷಿಸಿದೆ. ಪ್ರವಾಸೋದ್ಯಮ ಕ್ಷೇತ್ರದ ಪ್ರಾಮುಖ್ಯತೆಯನ್ನು ಸಾರುವುದು ಹಾಗೂ 2030ರ ಸುಸ್ಥಿರ ಅಭಿವೃದ್ಧಿ ಅಜೆಂಡಾ ಹಾಗೂ 17 ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ಈ ಘೋಷಣೆ ಮಾಡಲಾಗಿದೆ.

**ಪ್ರಮುಖಾಂಶಗಳು:**

- ಅಂತಾರಾಷ್ಟ್ರೀಯ ವರ್ಷ ಘೋಷಣೆಯು ಸುಸ್ಥಿರ ಪ್ರವಾಸೋದ್ಯಮ ವಲಯದ ಕಡೆಗೆ ವ್ಯವಹಾರ, ನೀತಿಗಳು ಮತ್ತು ಗ್ರಾಹಕರ ವರ್ತನಾ ಪರಿಣಾಮಕಾರಿಯಾದ ಬದಲಾವಣೆ ಬೆಂಬಲಿಸಲು ಮೂಲಕ ಸುಸ್ಥಿರ ಅಭಿವೃದ್ಧಿ ಗುರಿ ಸಾಧಿಸಲು ಕೊಡುಗೆ ನೀಡಲಿದೆ.
- ಇದು ಐದು ಪ್ರಮುಖ ಕ್ಷೇತ್ರಗಳಲ್ಲಿ ಪ್ರವಾಸೋದ್ಯಮ ಕ್ಷೇತ್ರದ ಕೊಡುಗೆಯನ್ನು ಉತ್ತೇಜಿಸಲಿದೆ: ಅವುಗಳೆಂದರೆ ಒಳಗೊಳ್ಳುವಿಕೆ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆ, ಸಮಾಜದ ಒಳಗೊಳ್ಳುವಿಕೆ, ಉದ್ಯೋಗ ಮತ್ತು ಬಡತನ ನಿವಾರಣೆ, ಸಾಂಸ್ಕೃತಿಕ ಮೌಲ್ಯ, ವಿವಿಧತೆ ಮತ್ತು ಪಾರಂಪರೆ, ಸಂಪನ್ಮೂಲ ದಕ್ಷತೆ, ಪರಿಸರ ಸಂರಕ್ಷಣೆ ಮತ್ತು ಹವಾಮಾನ ಬದಲಾವಣೆ ಹಾಗೂ ಪರಸ್ಪರ ಸಾಮರಸ್ಯ, ಶಾಂತಿ ಮತ್ತು ಭದ್ರತೆ.
- ಪ್ರವಾಸೋದ್ಯಮ ವಲಯವು ವಿಶ್ವದಾದ್ಯಂತ ಶೇ 7% ರಫ್ತು, ವಿಶ್ವದ ಶೇ 10% ಜಿಡಿಪಿ ಹಾಗೂ ಪ್ರತಿ ಹನ್ನೊಂದು ಉದ್ಯೋಗಗಳಲ್ಲಿ ಒಂದು ಉದ್ಯೋಗವನ್ನು ನೀಡುತ್ತಿದೆ. ಪ್ರವಾಸೋದ್ಯಮ ಕ್ಷೇತ್ರವನ್ನು ಸಮರ್ಪಕವಾಗಿ ಬಳಕೆಮಾಡಿಕೊಂಡರೆ ಆರ್ಥಿಕ ಬೆಳವಣಿಗೆ, ಸಮಾಜದ ಒಳಗೊಳ್ಳುವಿಕೆ ಜೊತೆಗೆ ಪರಿಸರ ಸಂರಕ್ಷಣೆ ಮಾಡಬಹುದಾಗಿದೆ.

**ಹೃದಯಾಘಾತದಿಂದ ಹಿರಿಯ ನಟ ಓಂ ಪುರಿ ನಿಧನ**



ಬಾಲಿವುಡ್‌ನ ಹಿರಿಯ ನಟ ಓಂ ಪುರಿ ರವರು ಮುಂಬೈನ ತಮ್ಮ ಸ್ವಗೃಹದಲ್ಲಿ ತೀವ್ರ ಹೃದಯಾಘಾತದಿಂದ ಕೊನೆಯುಸಿರೆಳೆದರು. ಓಂ ಪುರಿ ರವರು ಭಾರತೀಯ ಸಿನಿಮಾ, ಹಾಲಿವುಡ್ ಸಿನಿಮಾ ಹಾಗೂ ಇತರೆ ದೇಶಗಳ ಸಿನಿಮಾಗಳಲ್ಲಿ ಅಭಿನಿಯಸಿದ್ದರು.

- 1950ರ ಅಕ್ಟೋಬರ್ 18 ರಂದು ಹರಿಯಾಣದ ಅಂಬಾಲದಲ್ಲಿ ಓಂ ಪುರಿ ಜನಿಸಿದ್ದರು. 1976 ಪುಣೆಯ ಫಿಲಂ ಇನ್ಸ್‌ಟಿಟ್ಯೂಟ್‌ನಲ್ಲಿ ಮತ್ತು ನ್ಯಾಷನಲ್ ಸ್ಕೂಲ್ ಆಫ್ ಡ್ರಾಮದಲ್ಲಿ ಪದವಿ ಪಡೆದಿದ್ದರು.
- ಓಂ ಪುರಿ 1976ರಲ್ಲಿ ಮರಾಠಿಯ ಘಾಷಿರಾಂ ಕೊತ್ವಾಲ್ ಚಿತ್ರದ ಮೂಲಕ ಸಿನಿಮಾ ರಂಗಕ್ಕೆ ಪಾದಾರ್ಪಣೆ ಮಾಡಿದ್ದರು.
- ನ್ಯಾಷನಲ್ ಸ್ಕೂಲ್ ಆಫ್ ಡ್ರಾಮಾ ಮತ್ತು ಫಿಲ್ಮ್ ಅಂಡ್ ಟೆಲಿವಿಷನ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾದಲ್ಲಿ ನಟನೆ ಬಗ್ಗೆ ಅಭ್ಯಾಸ ಮಾಡಿದ್ದರು.
- ಭವ್ನಿ ಭವ್ಯೆ (1980), ಸದ್ಗತಿ (1981), ಅರ್ಧ್ ಸತ್ಯ (1982), ಮಿರ್ಚ್ ಮಸಾಲ (1986) ಮತ್ತು ಧಾರವಿ (1992) ಚಿತ್ರಗಳಲ್ಲಿ ಅವರ ಅಭಿನಯ ಮರೆಯುವಂತಿಲ್ಲ.

- 1977ರಲ್ಲಿ ಗಿರೀಶ್ ಕಾರ್ನಾಡ್ ನಿರ್ದೇಶನದ ತಬ್ಬಲಿಯು ನೀನಾದೆ ಮಗನೆ ಚಿತ್ರದಲ್ಲಿ ಓಂ ಪುರಿ ಅಭಿನಯಿಸಿದ್ದರು. ನಂತರದ ವರ್ಷಗಳಲ್ಲಿ ಹಲವು ಕನ್ನಡ ಚಿತ್ರಗಳಲ್ಲಿ ಓಂ ಪುರಿ ಅಭಿನಯಿಸಿದ್ದಾರೆ. ಶಿವರಾಜ್ ಕುಮಾರ್ ಅವರೊಂದಿಗೆ ಎ.ಕೆ.47, ಟೈಗರ್, ಧೃವ ಚಿತ್ರಗಳಲ್ಲೂ ಪಾತ್ರ ನಿರ್ವಹಿಸಿದ್ದಾರೆ.
- ಆರೋಹಣ್ ಮತ್ತು ಅರ್ಧ ಸತ್ಯ ಚಿತ್ರಗಳಲ್ಲಿನ ಅಭಿನಯಕ್ಕಾಗಿ ಓಂ ಪುರಿ ಅತ್ಯುತ್ತಮ ನಟ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರಿಗೆ ಕೇಂದ್ರ ಸರ್ಕಾರ ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

**ಕೇಂದ್ರ ಲೋಕ ಸೇವಾ ಆಯೋಗ (ಯುಪಿಎಸ್ ಸಿ) ನೂತನ ಅಧ್ಯಕ್ಷರಾಗಿ ಡೇವಿಡ್ ಸೈಮ್ಲಿ**

ಶಿಕ್ಷಣ ತಜ್ಞ ಮತ್ತು ಇತಿಹಾಸಕಾರ ಡೇವಿಡ್ ಸೈಮ್ಲಿ ರವರನ್ನು ಕೇಂದ್ರ ಲೋಕ ಸೇವಾ ಆಯೋಗದ ನೂತನ ಅಧ್ಯಕ್ಷರಾಗಿ ಸಂವಿಧಾನದ ಪರಿಚ್ಛೇದ 316ರ ಪ್ರಕಾರ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ರವರು ನೇಮಕ ಮಾಡಿದ್ದಾರೆ. ಅಲ್ಕ ಸಿರೋಹಿರವರ ಉತ್ತರಾಧಿಕಾರಿಯಾಗಿ ಇವರು ಕಾರ್ಯನಿರ್ವಹಿಸಲಿದ್ದು, ಸೈಮಿ ಅವರ ಅಧಿಕಾರ ಅವಧಿ ಜನವರಿ 21, 2018ರ ವರೆಗೆ ಅಥವಾ ಮುಂದಿನ ಆದೇಶದ ವರೆಗೆ ಇರಲಿದೆ. ಈ ನೇಮಕಾತಿ ಮುಂಚೆ ಸೈಮ್ಲಿ ರವರು ಆಯೋಗದ ಸದಸ್ಯರಾಗಿ ಜೂನ್ 25, 2012ರಿಂದ ಸೇವೆ ಸಲ್ಲಿಸುತ್ತಿದ್ದರು.

**ಡೇವಿಡ್ ಸೈಮ್ಲಿ ಬಗ್ಗೆ:**

- ಸೈಮಿ ರವರು ಪ್ರಸಿದ್ದ ಇತಿಹಾಸಕಾರ, ಶಿಕ್ಷಣ ತಜ್ಞ ಮತ್ತು ಲೇಖಕರಾಗಿದ್ದಾರೆ. ಅರುಣಾಚಲ ಪ್ರದೇಶದ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ಮಾಜಿ ಕುಲಪತಿಯು ಆಗಿರುವ ಇವರು ಈಶಾನ್ಯ ಭಾರತಕ್ಕೆ ಸಂಬಂಧಿಸಿದಂತೆ ಅನೇಕ ಪುಸ್ತಕ ಮತ್ತು ಲೇಖನಗಳನ್ನು ಬರೆದಿದ್ದಾರೆ.

**ಯುಪಿಎಸ್ ಸಿ:**

- ಕೇಂದ್ರ ಲೋಕ ಸೇವಾ ಆಯೋಗ ಒಂದು ಸಾಂವಿಧಾನಿಕ ಸಂಸ್ಥೆಯಾಗಿದ್ದು, ದೇಶದ ಅತ್ಯುನ್ನತ ನಾಗರಿಕ ಸೇವೆಗಳಾದ ಐಎಎಸ್, ಐಎಫ್ಎಸ್ ಮತ್ತು ಐಪಿಎಸ್ ಸೇರಿದಂತೆ ಇತರೆ ಹುದ್ದೆಗಳಿಗೆ ಪರೀಕ್ಷೆಯನ್ನು ನಡೆಸುತ್ತದೆ.
- ಸಂವಿಧಾನದ 315ನೇ ಪರಿಚ್ಛೇದದಡಿ ಕೇಂದ್ರ ಲೋಕ ಸೇವಾ ಆಯೋಗವನ್ನು ಸ್ಥಾಪಿಸಲಾಗಿದ್ದು, ಒಬ್ಬ ಅಧ್ಯಕ್ಷ ಮತ್ತು ಹತ್ತು ಸದಸ್ಯರನ್ನು ಒಳಗೊಂಡಿದೆ. ಅಧ್ಯಕ್ಷ ಮತ್ತು ಸದಸ್ಯರನ್ನು ನೇಮಿಸುವ ಮತ್ತು ತೆಗೆದುಹಾಕುವ ಅಧಿಕಾರವನ್ನು ರಾಷ್ಟ್ರಪತಿಗಳು ಹೊಂದಿದ್ದಾರೆ.
- ಆಯೋಗದ ಅಧ್ಯಕ್ಷ ಮತ್ತು ಸದಸ್ಯರ ಅವಧಿ ಆರು ವರ್ಷ ಅಥವಾ 65 ವರ್ಷ ತುಂಬುವವರೆಗೆ ಅಥವಾ ಯಾವುದು ಮುಂಚಿತವೊ ಅದು ಆಗಿರುತ್ತದೆ.

**NTR ಆರೋಗ್ಯ ರಕ್ಷಾ ಯೋಜನೆಯನ್ನು ಜಾರಿಗೊಳಿಸಿದ ಆಂಧ್ರ ಪ್ರದೇಶ**

ಎಪಿಎಲ್ ರೇಖೆಗಿಂತ ಕೆಳಗಿರುವವರಿಗೆ ವಾರ್ಷಿಕ ರೂ 1200 ಪ್ರೀಮಿಯಂ ಪಾವತಿಯಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆ ನೀಡುವ ಸಲುವಾಗಿ ಆಂಧ್ರ ಪ್ರದೇಶ ಸರ್ಕಾರ NTR ಆರೋಗ್ಯ ರಕ್ಷಾ ಯೋಜನೆಯನ್ನು ಜಾರಿಗೊಳಿಸಿದೆ. ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ರವರು ಈ ಯೋಜನೆಗೆ ವಿಜಯವಾಡದಲ್ಲಿ ಚಾಲನೆ ನೀಡಿದರು. ಪ್ರಸ್ತುತ ರಾಜ್ಯದಲ್ಲಿ ಜಾರಿಯಲ್ಲಿರುವ ಆರೋಗ್ಯ ಯೋಜನೆಗಳ ಫಲಾನುಭವಿಗಳಾಗದವರು ಈ ಯೋಜನೆಯ ಉಪಯೋಗವನ್ನು ಪಡೆದುಕೊಳ್ಳಬಹುದಾಗಿದೆ.

**NTR ಆರೋಗ್ಯ ರಕ್ಷಾ ಯೋಜನೆ**:

- NTR ಆರೋಗ್ಯ ರಕ್ಷಾ ಯೋಜನೆಯ ವ್ಯಾಪ್ತಿಗೆ 1044 ಕಾಯಿಲೆಗಳನ್ನು ತರಲಾಗಿದ್ದು, ರೂ 2 ಲಕ್ಷದವರೆಗೆ ಉಚಿತ ಚಿಕಿತ್ಸೆಯನ್ನು ಪಡೆಯಬಹುದಾಗಿದೆ. ಈ ಯೋಜನೆಗೆ ನೋಂದಾಯಿಸಿಕೊಳ್ಳಲು ಬಯಸುವವರು "ಮೀ ಸೇವಾ ಸೆಂಟರ್" ನಲ್ಲಿ ಫೆಬ್ರುವರಿ 2017 ರವರೆಗೆ ನೋಂದಾಯಿಸಿಕೊಳ್ಳಬಹುದು.
- ಎಪಿಎಲ್ ರೇಖೆಗಿಂತ ಕೆಳಗಿರುವವರು ಯೋಜನೆಯ ಉಪಯೋಗವನ್ನು ಪಡೆಯಲು ವಾರ್ಷಿಕ ರೂ 1200 ಪ್ರೀಮಿಯಂ ಅನ್ನು ಪಾವತಿಸಬೇಕು. ಅಂದರೆ ಪ್ರತಿ ತಿಂಗಳಿಗೆ ಒಬ್ಬರಿಗೆ ರೂ 100.
- ಯೋಜನೆಯಡಿ 1044 ಕಾಯಿಲೆಗಳಿಗೆ ಕಾರ್ಪೋರೇಟ್ ಮತ್ತು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ವೈದ್ಯಕೀಯ ಚಿಕಿತ್ಸೆಯನ್ನು ನೀಡಲಾಗುವುದು.

**ಧರ್ಮ, ಭಾಷೆ ಆಧಾರದ ಮೇಲೆ ಮತಯಾಚನೆ ಅಕ್ರಮ: ಸುಪ್ರೀಂ ಕೋರ್ಟ್**



ಚುನಾವಣೆಯ ಸಂದರ್ಭದಲ್ಲಿ ಅಭ್ಯರ್ಥಿಗಳು ಧರ್ಮ, ಭಾಷೆ, ಜಾತಿ ಮತ್ತು ಸಮುದಾಯ ಆಧಾರದಲ್ಲಿ ಮತಯಾಚನೆ ಮಾಡಬಾರದೆಂದು ತೀರ್ಪು ನೀಡಿದೆ. ಸುಪ್ರೀಂಕೋರ್ಟ್ನ ಮುಖ್ಯನ್ಯಾಯಮೂರ್ತಿ ಜೆ.ಎಸ್.ಠಾಕೂರ್ ಅವರನ್ನು ಒಳಗೊಂಡ ಏಳು ನ್ಯಾಯಮೂರ್ತಿಗಳ ಪೀಠ 4:3 ಬಹುಮತದ ತೀರ್ಪು ನೀಡಿದೆ. ಸುಪ್ರೀಂಕೋರ್ಟ್ ಆದೇಶದ ವಿರುದ್ಧವಾಗಿ ಮತ ಯಾಚಿಸಿದರೆ ಅಂತವರನ್ನು ಚುನಾವಣೆಯಿಂದ ಸ್ಪರ್ಧಿಸದಂತೆ ಅನೂರ್ಜಿತಗೊಳಿಸಬಹುದು ಎಂದು ಸುಪ್ರೀಂಕೋರ್ಟ್ ಹೇಳಿದೆ.

**ಹಿನ್ನಲೆ**:

ಪ್ರಜಾಪ್ರಾತಿನಿಧ್ಯ ಕಾಯ್ದೆಯ -1951 ಸೆಕ್ಷನ್ 123 (3) ತಿದ್ದುಪಡಿ ತರುವಂತೆ ಸಲ್ಲಿಸಲಾಗಿದ್ದು ಅರ್ಜಿ ವಿಚಾರಣೆ ವೇಳೆ ಸುಪ್ರೀಂಕೋರ್ಟ್ ಈ ತೀರ್ಪು ನೀಡಿದೆ. ಈ ಸೆಕ್ಷನ್ ಪ್ರಕಾರ ಜಾತಿ, ಧರ್ಮ, ಸಮುದಾಯ ಅಥವಾ ಭಾಷೆ ಆಧಾರದ ಮೇಲೆ ಮತಯಾಚನೆ ಮಾಡುವುದು ಕಾನೂನು ಬಾಹಿರ. ಈ ಹಿಂದೆ ಸುಪ್ರೀಂಕೋರ್ಟ್ ಹಿಂದೂತ್ವ ಆಧಾರದ ಮೇಲೆ ಮತಯಾಚನೆ ಮಾಡುವುದು ತಪ್ಪಲ್ಲವೆಂದು ತೀರ್ಪು ನೀಡಿತ್ತು. ಏಕೆಂದರೆ ಹಿಂದೂತ್ವವೆನ್ನುವುದು ಜೀವನ ನಡೆಸುವ ಒಂದು ರೀತಿ ವಿನ್ಹಾ ಧರ್ಮವಲ್ಲ ಎಂದು ಕೋರ್ಟ್ ಹೇಳಿತ್ತು.

**ಕೋರ್ಟ್ ತೀರ್ಪಿನ ಪ್ರಮುಖಾಂಶಗಳು:**

- ಪ್ರಭುತ್ವವು ಜಾತ್ಯತೀತವಾಗಿರುವ ಕಾರಣ, ಅದು ಯಾವುದೇ ಧರ್ಮದ ಜೊತೆ ಗುರುತಿಸಿಕೊಳ್ಳಲಾಗದು. ದೇವರು ಮತ್ತು ವ್ಯಕ್ತಿಯ ನಡುವಿನ ಸಂಬಂಧ ವೈಯುಕ್ತಿಕ ಎಂದು ಹೇಳಿದೆ.
- ದೇಶದ ಆಡಳಿತದಲ್ಲಿ ಧರ್ಮವು ಯಾವುದೇ ಪಾತ್ರವನ್ನು ವಹಿಸುವುದಿಲ್ಲ. ಸರ್ಕಾರ ಎಲ್ಲಾ ಸಮಯದಲ್ಲೂ ಜ್ಯಾತ್ಯತೀತವಾಗಿರಬೇಕು.
- ಚುನಾವಣೆ ಎಂಬುದು ಸರ್ವ ಸ್ವತಂತ್ರ ಪ್ರಕ್ರಿಯೆ. ಇದು ಜಾತಿ-ಧರ್ಮಗಳ ಆಧಾರದಲ್ಲಿ ನಡೆಯಬಾರದು. ಚುನಾವಣಾ ಪ್ರತಿನಿಧಿಗಳು ಒಳಗೂ ಮತ್ತು ಹೊರಗೂ ಜ್ಯಾತ್ಯತೀತರಾಗಿರಬೇಕು.
- ಅಭ್ಯರ್ಥಿ ಅಥವಾ ಅಭ್ಯರ್ಥಿಯ ಏಜೆಂಟ್ 'ಆತನ' ಧರ್ಮ, ಜನಾಂಗ, ಜಾತಿ, ಸಮುದಾಯ ಅಥವಾ ಭಾಷೆಯ ನೆಲೆಯಲ್ಲಿ ಮತ ಯಾಚಿಸುವುದು ಅಥವಾ ಮತ ಚಲಾಯಿಸದಂತೆ ಮನವಿ ಮಾಡುವುದು ಚುನಾವಣಾ ಭ್ರಷ್ಟಾಚಾರ ಎಂದು ಸೆಕ್ಷನ್ 123(3)ಯಲ್ಲಿ ಹೇಳಲಾಗಿದೆ.

## <u>"ಉತ್ತಮ ಪರೋಪಕಾರಿ ನೀತಿ" ಜಾರಿಗೊಳಿಸಲಿರುವ ದೆಹಲಿ ಸರ್ಕಾರ</u>



ರಸ್ತೆ ಅಪಘಾತ ಸಂತ್ರಸ್ತರಿಗೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನೆರವಾಗುವಂತೆ ಜನರನ್ನು ಉತ್ತೇಜಿಸಲು ದೆಹಲಿ ಸರ್ಕಾರ "ಉತ್ತಮ ಪರೋಪಕಾರಿ ನೀತಿ (Good Samaritan Policy)"ಯನ್ನು ಅನುಮೋದಿಸಿದೆ. ದೆಹಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ನೇತೃತ್ವದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಈ ನೀತಿಯನ್ನು ಅಂಗೀಕರಿಸಲಾಯಿತು. ಅಪಘಾತ ಸಂದರ್ಭದಲ್ಲಿ ಸಂತ್ರಸ್ಥರಿಗೆ ನೆರವಾಗುವವರಿಗೆ ಸೂಕ್ತ ಪ್ರೋತ್ಸಾಹ ಧನವನ್ನು ನೀಡುವುದು ಹಾಗೂ ಕಾನೂನಿನ ಚೌಕಟ್ಟಿನಡಿ ರಕ್ಷಣೆ ನೀಡುವ ಅವಕಾಶವನ್ನು ನೀತಿಯಡಿ ಕಲ್ಪಿಸಲಾಗಿದೆ.

**ನೀತಿಯ ಪ್ರಮುಖಾಂಶಗಳು:**

- ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ ಅಪಘಾತ ಸಂದರ್ಭದಲ್ಲಿ ಸಂತ್ರಸ್ತರನ್ನು ಆಸ್ಪತ್ರೆಗೆ ಸಾಗಿಸಲು ನೆರವಾಗುವವರಿಗೆ ರೂ 2000 ಪ್ರೋತ್ಸಾಹ ಧನ ಹಾಗೂ ಪ್ರಶಂಸ ಪತ್ರವನ್ನು ನೀಡಲಾಗುವುದು.
- ಅಪಘಾತ ಸಂದರ್ಭದಂತಹ ತುರ್ತು ಪರಿಸ್ಥಿತಿಯಲ್ಲಿ ಸಂತ್ರಸ್ಥರಿಗೆ ಸೂಕ್ತ ಚಿಕಿತ್ಸೆ ಕೊಡಿಸಲು ಮುಂದಾಗುವಂತೆ ಜನರನ್ನು ಪ್ರೋತ್ಸಾಹಿಸಿ ಅಮೂಲ್ಯವಾದ ಜೀವವನ್ನು ಕಾಪಾಡುವ ಉದ್ದೇಶದಿಂದ ನೀತಿಯನ್ನು ಜಾರಿಗೆ ತರಲಾಗುತ್ತಿದೆ.
- ವಾಸ್ತವ ಸ್ಥಿತಿಯಲ್ಲಿ ಸಾಕಷ್ಟು ಜನರು ಕಾನೂನು ಭಯ ಅಥವಾ ಪೊಲೀಸರ ತನಿಖೆ ಭಯದಿಂದ ಅಪಘಾತ ಸಂತ್ರಸ್ತರನ್ನು ರಕ್ಷಿಸಲು ಹಿಂದೇಟ್ಟು ಹಾಕುತ್ತಿರುವುದು ಸಾಮಾನ್ಯವಾಗಿದೆ. ಈ ನೀತಿ ಜನರ ಮಾನಸಿಕ ಸ್ಥಿತಿಯನ್ನು ಬದಲಿಸಲು ಸಹಾಯವಾಗಲಿದೆ.

## <u>ದಡಾರ-ರುಬೆಲ್ಲಾ ಲಸಿಕೆಯನ್ನು ಪರಿಚಯಿಸಲಿರುವ ಕೇಂದ್ರ ಸರ್ಕಾರ</u>



ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ದಡಾರ-ರುಬೆಲ್ಲಾ ಲಸಿಕೆಯನ್ನು ಸಾರ್ವತ್ರಿಕ ಪ್ರತಿರಕ್ಷಣೆ ಕಾರ್ಯಕ್ರಮ (Universal Immunisation Programme)ದಡಿ ಫೆಬ್ರವರಿ 2017ರಿಂದ ಪರಿಚಯಿಸಲಿದೆ. ಅಲ್ಲದೇ ಸಾರ್ವತ್ರಿಕ ಪ್ರತಿರಕ್ಷಣೆ ಕಾರ್ಯಕ್ರಮದಡಿ ಮೂರು ರಾಜ್ಯಗಳಲ್ಲಿ "ನ್ಯೂಮೊಕಾಕಲ್ ಕಂಜುಗೇಟ್" ಲಸಿಕೆಯನ್ನು ಮಾರ್ಚ್ 2017ರಿಂದ ನೀಡಲಾಗುವುದು.

**ಪ್ರಮುಖಾಂಶಗಳು**:

- ದಡಾರ-ರುಬೆಲ್ಲಾ ಲಸಿಕೆಯನ್ನು ಐದು ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ಅಂದರೆ ಗೋವಾ, ಕರ್ನಾಟಕ, ಲಕ್ಷದ್ವೀಪ, ಪುದುಚೇರಿ ಮತ್ತು ತಮಿಳುನಾಡಿನಲ್ಲಿ ಪರಿಚಯಿಸಲಾಗುವುದು.
- ಸಾರ್ವತ್ರಿಕ ಪ್ರತಿರಕ್ಷಣೆ ಕಾರ್ಯಕ್ರಮದಡಿ ಈಗಾಗಲೇ ಹತ್ತು ಲಸಿಕೆಗಳನ್ನು ನೀಡಲಾಗುತ್ತಿದ್ದು, ದಡಾರ ಲಸಿಕೆ ಸಹ ಒಂದಾಗಿದೆ. ದಡಾರ-ರುಬೆಲ್ಲಾ ಲಸಿಕೆಯನ್ನು ಪರಿಚಯಿಸಿದ ಮೇಲೆ ಈಗಾಗಲೇ ನೀಡಲಾಗುತ್ತಿರುವ ಮೊನೊವೇಲೆಂಟ್ ದಡಾರ ಲಸಿಕೆಯನ್ನು ಸ್ಥಗಿತಗೊಳಿಸಲಾಗುವುದು.
- ರಾಷ್ಟ್ರೀಯ ಲಸಿಕೆ ಸಲಹಾ ಸಮಿತಿಯ ಶಿಫಾರಸ್ಸಿನಂತೆ ಈ ಲಸಿಕೆಯನ್ನು ಸಾರ್ವತ್ರಿಕ ಪ್ರತಿರಕ್ಷಣೆ ಕಾರ್ಯಕ್ರಮದಡಿ ಮೂರು ವರ್ಷಗಳ ವರೆಗೆ ನೀಡಲಾಗುವುದು.
- ನ್ಯೂಮೊಕಾಕಲ್ ಕಂಜುಗೇಟ್" ಲಸಿಕೆಯನ್ನು ಹಿಮಾಚಲ ಪ್ರದೇಶ ಮತ್ತು ಉತ್ತರ ಪ್ರದೇಶದ ಕೆಲವು ಭಾಗಗಳಲ್ಲಿ ಹಾಗೂ ಬಿಹಾರದಲ್ಲಿ ಪರಿಚಯಿಸಲಾಗುವುದು.

**ದಡಾರ-ರುಬೆಲ್ಲಾ ಕಾಯಿಲೆ**:

- ದಡಾರ-ರುಬೆಲ್ಲಾ ಕಾಯಿಲೆಯನ್ನು ಜರ್ಮನ್ ದಡಾರ ಎಂತಲೂ ಕರೆಯಲಾಗುತ್ತದೆ. ಈ ಕಾಯಿಲೆಯ ಗುಣಲಕ್ಷಣಗಳು ದಡಾರವನ್ನೇ ಹೋಲುತ್ತವೆ. ಗರ್ಭಿಣಿ ಸ್ತ್ರೀಯರಿಗೆ ಸೋಂಕು ತಗುಲಿದರೆ ಹುಟ್ಟುವ ಮಕ್ಕಳು ಅಸಹಜವಾಗಿ ಇರುತ್ತವೆ. ಸೋಂಕಿನಿಂದ ಮಕ್ಕಳಲ್ಲಿ ಅಂಧತ್ವ ಹಾಗೂ ಕಿವುಡುತನ ಉಂಟಾಗುತ್ತದೆ. ಅಲ್ಲದೇ ಮೆದುಳು ಹಾಗೂ ಹೃದಯದ ಮೇಲೂ ಪರಿಣಾಮ ಬೀರಲಿದೆ. ಭಾರತದಲ್ಲಿ ಪ್ರತಿ ವರ್ಷ ಸುಮಾರು 25,000ಕ್ಕೂ ಹೆಚ್ಚು ಮಕ್ಕಳು ಈ ಸೋಂಕಿಗೆ ತುತ್ತಾಗುತ್ತಿದ್ದಾರೆ.

**ಸಾರ್ವತ್ರಿಕ ಪ್ರತಿರಕ್ಷಣೆ ಕಾರ್ಯಕ್ರಮ:**

- ಸಾರ್ವತ್ರಿಕ ಪ್ರತಿರಕ್ಷಣೆ ಕಾರ್ಯಕ್ರಮ ಲಸಿಕೆಯಿಂದ ತಡೆಯಬಹುದಾದ ರೋಗಗಳ ವಿರುದ್ಧ ಉಚಿತ ಲಸಿಕೆ ನೀಡುವ ಕಾರ್ಯಕ್ರಮವಾಗಿದ್ದು, ಕೇಂದ್ರ ಸರ್ಕಾರ 1985 ರಲ್ಲಿ ಆರಂಭಿಸಿದೆ.
- ಪ್ರಸ್ತುತ ಇದು ರಾಷ್ಟ್ರೀಯ ಆರೋಗ್ಯ ಮಿಷನ್ ನ ಒಂದು ಭಾಗವಾಗಿದೆ.
- ಇದರಡಿ ಕ್ಷಯರೋಗ, ಡಿಫ್ತೀರಿಯಾ, ಧನುರ್ವಾಯು, ನಾಯಿಕೆಮ್ಮು, ಪೊಲಿಯೋ, ದಡಾರ, ಹೆಪಟೈಟಿಸ್ ಬಿ, ಡಯೋರಿಯಾ, ಜಪಾನೀಸ್ ಎನ್ಸೆಪಾಲಿಟಿಸ್ ಮತ್ತು ನ್ಯೂಮೋನಿಯಾ ಸೇರಿದಂತೆ ಹತ್ತು ರೋಗಗಳ ವಿರುದ್ಧ ಲಸಿಕೆಯನ್ನು ನೀಡಲಾಗುತ್ತಿದೆ.

## <u>ವಿಶ್ವದ ಅತಿದೊಡ್ಡ ಬೀದಿ ದೀಪ ಕಾರ್ಯಕ್ರಮಕ್ಕೆ ಕೇಂದ್ರ ಇಂಧನ ಸಚಿವಾಲಯದಿಂದ ಚಾಲನೆ</u>



ವಿಶ್ವದ ಅತಿದೊಡ್ಡ ಬೀದಿ ದೀಪ ಕಾರ್ಯಕ್ರಮಕ್ಕೆ ಕೇಂದ್ರ ಇಂಧನ ಸಚಿವಾಲಯ ಚಾಲನೆ ನೀಡಿದೆ. ದಕ್ಷಿಣ ಏಷ್ಯಾದ ಮುನಿಸಿಪಲ್ ಕಾರ್ಪೋರೇಶನ್ ವ್ಯಾಪ್ತಿಯಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿಲಾಯಿತು. ಎಲ್ಇಡಿ ಆಧರಿತ ಬೀದಿ ದೀಪ ರಾಷ್ಟ್ರೀಯ ಕಾರ್ಯಕ್ರಮದಡಿ ಇದನ್ನು ಅನುಷ್ಟಾನಗೊಳಿಸಲಾಗುತ್ತಿದ್ದು, ಇಂಧನ ಸಚಿವಾಲಯದಡಿ ಜಂಟಿ ನೇತೃತ್ವದಲ್ಲಿ ಎನರ್ಜಿ ಎಫಿಶಿಯೆನ್ಸಿ ಸರ್ವೀಸ್ ಲಿಮಿಟೆಡ್ (EESL) ಈ ಕಾರ್ಯಕ್ರಮವನ್ನು ಅನುಷ್ಟಾನಗೊಳಿಸುತ್ತಿದೆ.

**ಪ್ರಮುಖಾಂಶಗಳು**:

- ಬೀದಿ ದೀಪ ರಾಷ್ಟ್ರೀಯ ಕಾರ್ಯಕ್ರಮದಡಿ ದಕ್ಷಿಣ ದೆಹಲಿ ಮುನಿಸಿಪಾಲ್ ಕಾರ್ಪೋರೇಶನ್ ವ್ಯಾಪ್ತಿಯಲ್ಲಿ 2 ಲಕ್ಷ ಬೀದಿ ದೀಪಗಳನ್ನು ಎಲ್ಇಡಿ ದೀಪಗಳನ್ನಾಗಿ ಪರಿವರ್ತಿಸಲಾಗುವುದು. ಇದರಿಂದ ವಾರ್ಷಿಕ 2.65 ಕೋಟಿ ಕಿಲೋ ವ್ಯಾಟ್ ವಿದ್ಯುತ್ ಉಳಿತಾಯ, ಜೊತೆಗೆ 22,000 ಹಸಿರು ಮನೆ ಅನಿಲ ಹೊರಸೂಸುವಿಕೆ ತಗ್ಗಲಿದೆ.
- ಈ ಕಾರ್ಯಕ್ರಮದಿಂದ ದಕ್ಷಿಣ ದೆಹಲಿ ಮುನಿಸಿಪಾಲ್ ಕಾರ್ಪೋರೇಶನ್ ಪ್ರದೇಶದ ನಿವಾಸಿಗಳಿಗೆ ಕತ್ತಲೆಯಿಂದ ಮುಕ್ತಿದೊರೆಯಲಿದೆ. ಅಲ್ಲದೇ ಭದ್ರತೆ ಸಹ ಹೆಚ್ಚಾಗಲಿದೆ.
- ಮುಂದಿನ ಏಳು ವರ್ಷಗಳಲ್ಲಿ ರೂ 135 ಕೋಟಿ ಉಳಿತಾಯವಾಗಲಿದೆ. ಈ ಮೊತ್ತವನ್ನು ಇತರೆ ಸಾಮಾಜಿಕ ಅಭಿವೃದ್ಧಿಗೆ ಬಳಸಿಕೊಳ್ಳಬಹುದು.

**ಎಲ್ಇಡಿ ಆಧರಿತ ಬೀದಿ ದೀಪ ರಾಷ್ಟ್ರೀಯ ಕಾರ್ಯಕ್ರಮ**

- ಈ ಕಾರ್ಯಕ್ರಮದಡಿ ದೇಶದ ವಿವಿಧ ನಗರಗಳಲ್ಲಿನ ಬೀದಿ ದೀಪಗಳಲ್ಲಿ ಸಾಂಪ್ರದಾಯಿಕ ಬಲ್ಬ್ ಗಳ ಬದಲಿಗೆ ಎಲ್ಇಡಿ ಬಲ್ಬ್ ಗಳನ್ನು ಅಳವಡಿಸುವ ಉದ್ದೇಶವನ್ನು ಹೊಂದಲಾಗಿದೆ.

- ಈ ಕಾರ್ಯಕ್ರಮ ಕೇಂದ್ರ ಸರ್ಕಾರದ ಇಂಧನ ದಕ್ಷತೆ ಸಂದೇಶವನ್ನು ಸಾರುವ ಪ್ರಯತ್ನದ ಒಂದು ಉಪಕ್ರಮವಾಗಿದೆ. ಇದರಿಂದ ಇಂಧನ ಉಳಿತಾಯ ಹಾಗೂ ಹಸಿರು ಮನೆ ಅನಿಲ ಹೊರಸುಸುವಿಕೆ ಗಣನೀಯವಾಗಿ ತಗ್ಗಲಿದೆ.
- ಪ್ರಸ್ತುತ ಈ ಕಾರ್ಯಕ್ರಮ ಪಂಜಾಬ್, ಹಿಮಾಚಲ ಪ್ರದೇಶ, ಉತ್ತರ ಪ್ರದೇಶ, ಅಸ್ಸಾಂ, ತ್ರಿಪುರ, ಜಾರ್ಖಂಡ್, ಚತ್ತೀಸಘರ್, ತೆಲಂಗಣ, ಆಂಧ್ರ ಪ್ರದೇಶ, ಕೇರಳ, ಗೋವಾ, ಮಹಾರಾಷ್ಟ್ರ, ಗುಜರಾತ್ ಮತ್ತು ರಾಜಸ್ತಾನದಲ್ಲಿ ಜಾರಿಯಲ್ಲಿದೆ.

ಎಲ್ಇಡಿ ಬಲ್ಬ್ ಗಳು ದೀರ್ಘಕಾಲ ಬಾಳಿಕೆ ಬರುವ ಬಲ್ಬ್ ಗಳಾಗಿವೆ. ಎಲ್ಇಡಿ ಬಲ್ಬ್ ಸಾಮಾನ್ಯ ಬಲ್ಬ್ ಗಳಿಗಿಂತ 50 ಪಟ್ಟು ಹೆಚ್ಚು ಹಾಗೂ ಸಿಎಫ್ಎಲ್ ಬಲ್ಬ್ ಗಳಿಗಿಂತ 8-10 ಪಟ್ಟು ಹೆಚ್ಚು ಬಾಳಿಕೆ ಬರುತ್ತವೆ. ಇವುಗಳ ಬಳಕೆಯಿಂದ ಇಂಧನ ಉಳಿತಾಯ ಹಾಗೂ ವಿದ್ಯುತ್ ದರ ಉಳಿತಾಯ ಸಹ ಆಗಲಿದೆ.

**ಹಜ್ ಸಬ್ಸಿಡಿ ಕುರಿತು ಅಧ್ಯಯನಕ್ಕೆ ಸಮಿತಿ ರಚಿಸಲು ಕೇಂದ್ರ ಸರ್ಕಾರ ನಿರ್ಧಾರ**



ಹಜ್ ಸಬ್ಸಿಡಿ ಕುರಿತು ಅಧ್ಯಯನ ನಡೆಸಲು ಆರು ಸದಸ್ಯರನ್ನು ಒಳಗೊಂಡ ಸಮಿತಿಯನ್ನು ರಚಿಸಲು ಕೇಂದ್ರ ವಿದೇಶಾಂಗ ವ್ಯವಹಾರ ಸಚಿವಾಲಯ ನಿರ್ಧರಿಸಿದೆ. 2012ರಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಅನ್ವಯ ಸಮಿತಿಯನ್ನು ರಚಿಸಲು ನಿರ್ಧರಿಸಲಾಗಿದೆ. ಹಜ್ ಯಾತ್ರಿಗರಿಗೆ ನೀಡುತ್ತಿರುವ ಸಬ್ಸಿಡಿಯನ್ನು ಕಾಲಕ್ರಮೇಣ 2022ರೊಳಗೆ ರದ್ದುಗೊಳಿಸಬೇಕೆಂದು ಸುಪ್ರೀಂಕೋರ್ಟ್ 2012ರಲ್ಲಿ ತೀರ್ಪು ನೀಡಿತ್ತು.

**ಪ್ರಮುಖಾಂಶಗಳು:**

- ಸಬ್ಸಿಡಿ ಅನುಪಸ್ಥಿತಿಯಲ್ಲಿ ಹಜ್ ಯಾತ್ರಿಕರು ಸೌದಿ ಅರೇಬಿಯಾಗೆ ಕಡಿಮೆ ಪಾವತಿ ಮಾಡಿ ಹೇಗೆ ಪ್ರಯಾಣ ಬೆಳಸಬಹುದೆಂಬುದರ ಬಗ್ಗೆ ಅಧ್ಯಯನ ನಡೆಸಲಿದೆ.
- ಸಬ್ಸಿಡಿ ನೀಡುವುದರಿಂದ ಏನಾದರು ಪ್ರಯೋಜನವಿದೆಯ ಎಂಬುದರ ಬಗ್ಗೆ ಸಹ ಸಮಿತಿ ಅಧ್ಯಯನ ನಡೆಸಲಿದೆ. ಸಮಿತಿಯು ವರದಿಯನ್ನ ಸಲ್ಲಿಸುವ ಮುಂಚೆ ಸಂಬಂಧಿಸಿದ ಸಂಘಟನೆಗಳೊಂದಿಗೆ ಸಮಾಲೋಚನೆ ನಡೆಸಲಿದೆ.

**ಏನಿದು ಸಬ್ಸಿಡಿ ವಿವಾದ:**

- ಹಜ್ ಯಾತ್ರೆ ಕೈಗೊಳ್ಳುವ ಭಾರತೀಯ ಮುಸ್ಲಿಂರಿಗೆ ಕೇಂದ್ರ ಸರ್ಕಾರ ಹಜ್ ಸಬ್ಸಿಡಿಯನ್ನು ನೀಡುತ್ತಿದೆ. ಈ ಸಬ್ಸಿಡಿಯನ್ನು ವಿಮಾನಯಾನ ದರ ಹಾಗೂ ದೇಶದ ವಿವಿಧೆಡೆಯಿಂದ ಹಜ್ ಯಾತ್ರಿಕರು ನಿಗದಿತ ವಿಮಾನಯಾನ ತಲುಪಲು ಸಹಾಯಧನ ನೀಡುವ ಮೂಲಕ ನೀಡಲಾಗುತ್ತಿದೆ.
- 2012ರಲ್ಲಿ ಸುಪ್ರೀಂಕೋರ್ಟ್ ಹಜ್ ಸಬ್ಸಿಡಿಯನ್ನು ಕಾಲಕ್ರಮೇಣ ಕಡಿಮೆಗೊಳಿಸಲು ಹಾಗೂ 2022ರೊಳಗೆ ಸಂಪೂರ್ಣವಾಗಿ ನಿಲ್ಲಿಸುವಂತೆ ತೀರ್ಪು ನೀಡಿದೆ. ಅಲ್ಲದೇ ಈ ಸಬ್ಸಿಡಿ ಮೊತ್ತವನ್ನು ಮುಸ್ಲಿಂ ಸಮುದಾಯದವರ ಶಿಕ್ಷಣ ಮತ್ತು ಸಾಮಾಜಿಕ ಅಭಿವೃದ್ಧಿಗೆ ಬಳಸಿಕೊಳ್ಳುವಂತೆ ಕೇಂದ್ರ ಸರ್ಕಾರಕ್ಕೆ ಆದೇಶಿಸಿತ್ತು.

## ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಿದ ಸುಮಿತ್ ಭೋಸ್ ಸಮಿತಿ




ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ ಸಿದ್ಧಪಡಿಸಲು ರಚಿಸಲಾಗಿದ್ದ ಸುಮಿತ್ ಭೋಸ್ ನೇತೃತ್ವದ ತಜ್ಞರ ಸಮಿತಿ ತನ್ನ ವರದಿಯನ್ನು ಕೇಂದ್ರ ಗ್ರಾಮೀಣಭಿವೃದ್ದಿ ಸಚಿವಾಲಯಕ್ಕೆ ಸಲ್ಲಿಸಿದೆ. ಸಮಿತ್ ಭೋಸ್ ರವರು ಮಾಜಿ ಹಣಕಾಸು ಕಾರ್ಯದರ್ಶಿ. ರಾಜ್ಯಗಳಿಗೆ ಸಂಪನ್ಮೂಲಗಳ ಹಂಚಿಕೆ ಮಾಡುವುದು ಹಾಗೂ ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ ದತ್ತಾಂಶವನ್ನು ಆಧರಿಸಿ ವಿವಿಧ ಯೋಜನೆಗಳಿಗೆ ಫಲಾನುಭವಿಗಳನ್ನು ಗುರುತಿಸಲು ಸಮಿತಿಯನ್ನು ರಚಿಸಲಾಗಿತ್ತು. ಕೇಂದ್ರ ಗ್ರಾಮೀಣಭಿವೃದ್ದಿ ಸಚಿವಾಲಯ ಇನ್ನು ಮುಂದೆ ವಿವಿಧ ಯೋಜನೆಗಳಡಿ ಫಲಾನುಭವಿಗಳನ್ನು ಆಯ್ಕೆಮಾಡಲು ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ ದತ್ತಾಂಶವನ್ನು ಬಳಸಿಕೊಳ್ಳಲಿದೆ. ಪ್ರಮುಖವಾಗಿ ಪ್ರಧಾನ ಮಂತ್ರಿ ಆವಾಸ್ ಯೋಜನೆ ಹಾಗೂ ದೀನ್ ದಯಾಳ್ ಅಂತ್ಯೋದಯ ಯೋಜನೆ (ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ) ಫಲಾನುಭವಿಗಳ ಆಯ್ಕೆಗೆ ಮಾನದಂಡವಾಗಲಿದೆ.

**ಸಮಿತಿಯ ಪ್ರಮುಖ ವೀಕ್ಷಣೆ:**

- ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ ದತ್ತಾಂಶ ಹಾಗೂ ಟಿಐಎನ್ (TIN) ನಂಬರ್ ಬಳಕೆ ಸರ್ಕಾರದ ಪಾಲ್ಗೊಳ್ಳುವಿಕೆಯನ್ನು ಸುಧಾರಿಸಲಿದೆ ಹಾಗೂ ಇದರಿಂದ ಉತ್ತಮ ಫಲಿತಾಂಶ ಹೊರಬರಲಿದೆ.
- ಆದಾಗ್ಯೂ ದೀರ್ಘಾವದಿಯಲ್ಲಿ ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ ಒಂದನ್ನೆ ಅವಲಂಭಿಸಿವುದರಿಂದ ಸಾರ್ವಜನಿಕ ಸಂಪನ್ಮೂಲದ ಮೇಲೆ ಒತ್ತಡ ಬೀರುವ ಕಾರಣ ದತ್ತಾಂಶದ ಮೇಲೆ ನಿಯಮಿತವಾಗಿ ನಿಗಾವಹಿಸಬೇಕು.
- ಸಾಮಾಜಿಕ ವಲಯ ಯೋಜನೆಗಳ ಅನುಷ್ಠಾನಕ್ಕೆ ಸಾಮಾಜಿಕ ಆರ್ಥಿಕ ಮತ್ತು ಜಾತಿ ಜನಗಣತಿ ದತ್ತಾಂಶ ತುಂಬಾ ಸಹಕಾರಿಯಾಗಲಿದೆ.
- ಈ ದತ್ತಾಂಶದ ಬಳಕೆಯಿಂದ ಉತ್ತಮವಾದ ಬಜೆಟ್ ಯೋಜನೆ ಹಾಗೂ ವಿವಿಧ ಯೋಜನೆಗಳಿಗೆ ಸಮರ್ಪಕವಾಗಿ ಸಂಪನ್ಮೂಲಗಳ ಬಳಕೆ ಸಾಧ್ಯವಾಗಲಿದೆ.

## ರಾಷ್ಟ್ರಕವಿ ಗೋವಿಂದ ಪೈ ಅವರ "ಗಿಳಿವಿಂಡು" ಸ್ಮಾರಕ ಭವನ ಲೋಕಾರ್ಪಣೆ



ಕನ್ನಡದ ಮೊದಲ ರಾಷ್ಟ್ರಕವಿ ಮಹಾನ್ ಸಾಹಿತಿ ಮಂಜೇಶ್ವರ ಗೋವಿಂದ ಪೈ ಅವರ ನೆನಪಿನ ಸ್ಮಾರಕ ಗಿಳಿವಿಂಡು ವನ್ನು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿ ಸಿದ್ದರಾಮಯ್ಯ ಹಾಗೂ ಕೇರಳ ಸರಕಾರದ ಮುಖ್ಯ ಮಂತ್ರಿ ಪಿಣರಾಯಿ ವಿಜಯನ್ ಅವರು ಲೋಕಾರ್ಪಣೆ ಮಾಡಿದರು. ರಾಷ್ಟ್ರಕವಿ ಗೋವಿಂದ ಪೈ ಅವರ ಗೌರವಾರ್ಥ ಅವರ ಹುಟ್ಟೂರಾದ ಕಾಸರಗೋಡು ಜಿಲ್ಲೆಯ ಮಂಜೇಶ್ವರ ದಲ್ಲಿ ಕರ್ನಾಟಕ,ಕೇರಳ ಹಾಗೂ ಕೇಂದ್ರ ಸರಕಾರ ಮತ್ತು ಇತರ ದಾನಿಗಳ ಸಹಕಾರ, ಸಹಯೋಗದೊಂದಿಗೆ ಈ ಸ್ಮಾರಕವನ್ನು ನಿರ್ಮಿಸಲಾಗಿದೆ.

**ಮಂಜೇಶ್ವರ ಗೋವಿಂದ ಪೈ**:

- ಗೋವಿಂದ ಪೈಯವರು 1883ರಲ್ಲಿ ಆಗಿನ ಕರ್ನಾಟಕದ ಭಾಗವಾಗಿದ್ದ ಕಾಸರಗೋಡಿನ ಮಂಜೇಶ್ವರದಲ್ಲಿ ಜನಿಸಿದ್ದರು.

- ಗೋವಿಂದ ಪೈಗಳ ಪ್ರಾಥಮಿಕ ಶಿಕ್ಷಣ ಮಂಗಳೂರಿನಲ್ಲಿಯೇ ಆಯಿತು. ಅವರು ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ವಿನವರೆಗೆ ಶಿಕ್ಷಣ ಪಡೆದರು. ಖ್ಯಾತ ನವೋದಯ ಸಾಹಿತ್ಯದ ಆಚಾರ್ಯ ಪುರುಷರಾಗಿದ್ದ ಪಂಜೆ ಮಂಗೇಶರಾಯರು ಇವರಿಗೆ ಕನ್ನಡದ ಅಧ್ಯಾಪಕ ರಾಗಿದ್ದ ರು. ಹೆಚ್ಚಿನ ವ್ಯಾಸಂಗಕ್ಕಾಗಿ ಮದರಾಸಿಗೆ ತೆರಳಿದರು. ನಂತರ ಪೈಯವರು ಮದ್ರಾಸಿನ ಕ್ರಿಶ್ಚಿಯನ್ ಕಾಲೇಜು ಸೇರಿದರು. ಅಲ್ಲಿ ಡಾ.ಎಸ್. ರಾಧಾಕೃಷ್ಣನ್ ಅವರು ಇವರ ಸಹಪಾಠಿಯಾಗಿದ್ದರು.
- ಕನ್ನಡ ಸಾಹಿತ್ಯದಲ್ಲಿ ನಡುಗನ್ನಡ ಪ್ರಕಾರವನ್ನು ಬೆಳಕಿಗೆ ತಂದ ಮಂಜೇಶ್ವರ ಗೋವಿಂದ ಪೈಗಳು ಅಗಾಧ ಪಾಂಡಿತ್ಯವನ್ನು ಹೊಂದಿದ್ದವರು. ಸಂಸ್ಕೃತ, ಪಾಲಿ, ಗ್ರೀಕ್, ಲ್ಯಾಟಿನ್ ಭಾಷೆ ಸೇರಿದಂತೆ 23 ಭಾಷೆಗಳ ಬಗ್ಗೆ ಜ್ಞಾನ ಹೊಂದಿದ್ದ ಬಹು ಭಾಷಾ ಪಂಡಿತರಾಗಿದ್ದರು. ಮ್ಯಾಕ್ಸ್‌ಮ್ಯುಲ್ಲರ್ ರೀತಿಯ ಚಿಂತನೆಯನ್ನು ಹೊಂದಿದ್ದ ವ್ಯಕ್ತಿಯಾಗಿದ್ದರು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಗಾಂಧಿ ದಂಡಿ ಸತ್ಯಾಗ್ರಹಕ್ಕೆ ಹೊರಟಾಗ ಮಂಜೇಶ್ವರದ ಗೋವಿಂದ ಪೈಗಳ ಮೂಲಕ ಅವರಿಗೆ ಊರು ಗೋಲು ನೀಡಲಾಗಿತ್ತು ಎನ್ನುವ ವಿಷಯ ಹಲವರಿಗೆ ತಿಳಿದಿರಲಿಕ್ಕಿಲ್ಲ.
- ಪೈ ಅವರು ಮರಾಠಿ, ಜರ್ಮನ್ ಗ್ರೀಕ್ ಮೊದಲಾದ ಭಾಷೆಗಳನ್ನು ಕಲಿತು ಒಟ್ಟು 25 ಭಾಷೆಗಳಲ್ಲಿ ಪ್ರಾವಿಣ್ಯತೆ ಪಡೆದು ಕೊಂಡಿದ್ದರು. ಗೋವಿಂದ ಪೈಯವರು ನಂತರ ಮಂಜೇಶ್ವರದಲ್ಲಿ ನೆಲಸಿದ್ದರಿಂದ **ಮಂಜೇಶ್ವರ ಗೋವಿಂದ ಪೈ** ಎಂದೇ ಹೆಸರು ಗಳಿಸಿದರು.
- ಗೋವಿಂದ ಪೈಗಳು 'ಗಿಳಿವಿಂಡು', 'ನಂದಾದೀಪ' ಎಂಬ ಕಾವ್ಯ ಸಂಕಲನಗಳನ್ನು ಹೊರ ತಂದಿದ್ದಾರೆ. ‘ವೈಶಾಖಿ’ ಹಾಗು ‘ಗೊಲ್ಗೊಥಾ’ ಎನ್ನುವ ಎರಡು ಖಂಡಕಾವ್ಯಗಳನ್ನು ಬರೆದಿದ್ದಾರೆ ‘ಹೆಬ್ಬೆರಳು’ ಎನ್ನುವ ಪದ್ಯಗಳನ್ನು ಒಳಗೊಂಡ ಏಕಾಂಕ ನಾಟಕವನ್ನೂ, ‘ಚಿತ್ರಭಾನು’ ಎನ್ನುವ ಗದ್ಯನಾಟಕವನ್ನೂ ಬರೆದಿದ್ದಾರೆ. 'ತಾಯಿ‘, 'ಕಾಯಾಯ್ ಕೊಮಾಜಿ' ಎಂಬ ಸಾಮಾಜಿಕ ನಾಟಕಗಳನ್ನು ಬರೆದದ್ದಲ್ಲದೆ, ಜಪಾನಿನ ನೋ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

**ಪುರಸ್ಕಾರಗಳು:**

- 1949ರಲ್ಲಿ ಮದರಾಸು ಸರಕಾರವು (1949ರಲ್ಲಿ ಕರ್ನಾಟಕ ಏಕೀಕರಣಕ್ಕಿಂತ ಮೊದಲು ದಕ್ಷಿಣ ಕನ್ನಡ ಜಿಲ್ಲೆಯು ಆಗಿನ ಮದರಾಸು ರಾಜ್ಯದಲ್ಲಿ ಅಂದರೆ ಈಗಿನ ತಮಿಳುನಾಡಿನಲ್ಲಿದ್ದಿತು.) ಗೋವಿಂದ ಪೈಗಳಿಗೆ ರಾಷ್ಟ್ರ ಕವಿ ಎಂದು ಸನ್ಮಾನ ನೀಡಿ ಗೌರವಿಸಿತು.
- ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ- ೧೯೫೦ರಲ್ಲಿ ಮುಂಬಯಿಯಲ್ಲಿ ಜರುಗಿದ ೩೪ನೆಯ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಗೋವಿಂದ ಪೈಗಳು ಅಧ್ಯಕ್ಷರಾಗಿದ್ದರು.
- ಉಡುಪಿಯಲ್ಲಿ ಗೋವಿಂದ ಪೈ ಸಂಶೋಧನಾ ಕೇಂದ್ರವು ಎಂ.ಜಿ.ಎಂ ಕಾಲೇಜಿನ ಅಂಗಸಂಸ್ಥೆಯಾಗಿ 1965ರಲ್ಲಿ ಸ್ಥಾಪನೆಗೊಂಡಿತು.

**ಮರಣ:**

- 1963ರ ಸೆಪ್ಟೆಂಬರ್ 06 ರಂದು ಗೋವಿಂದ ಪೈಯವರು ನಿಧನ ಹೊಂದಿದರು.

## <u>ಸರ್ವ ಶಿಕ್ಷಣ ಅಭಿಯಾನದ ಪ್ರಗತಿ ಮೇಲೆ ನಿಗಾವಹಿಸಲು ಶಗುಣ್ ಪೋರ್ಟಲ್ ಆರಂಭ</u>



ಸರ್ವ ಶಿಕ್ಷಣ ಅಭಿಯಾನದ ಪ್ರಗತಿಯ ಮೇಲ್ವಿಚಾರಣೆ ನಡೆಸುವ ಸಲುವಾಗಿ ಕೇಂದ್ರ ಸರ್ಕಾರ ಶಗುಣ್ ಪೋರ್ಟಲ್ (http://ssashagun.nic.in) ಅನ್ನು ಆರಂಭಿಸಿದೆ. ವಿಶ್ವಬ್ಯಾಂಕ್ ಈ ಪೋರ್ಟಲ್ ಅನ್ನು ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಸಹಯೋಗದೊಂದಿಗೆ ಅಭಿವೃದ್ಧಿಪಡಿಸಿದೆ. ಶಗುಣ್ ಹೆಸರು ಶಾಲಾ (ಶಾಲೆಗಳು) ಮತ್ತು ಗುಣ್ (ಗುಣ ಅಥವಾ ಕ್ವಾಲಿಟಿ) ನಿಂದ ಬಂದಿದೆ.

**ಪ್ರಮುಖಾಂಶಗಳು**:

- ಸರ್ವ ಶಿಕ್ಷಣ ಅಭಿಯಾನದಡಿ ಶಾಲೆಗಳ ಮೇಲೆ ನಿಗಾವಹಿಸಲು ಹಾಗೂ ಈ ಶಾಲೆಗಳಲ್ಲಿ ನೀಡಲಾಗುತ್ತಿರುವ ಶಿಕ್ಷಣದ ಗುಣಮಟ್ಟವನ್ನು ತಿಳಿಯಲು ಶಗುಣ್ ಪೋರ್ಟಲ್ ಅನ್ನು ಆರಂಭಿಸಲಾಗಿದೆ.
- ಸರ್ವ ಶಿಕ್ಷಣ ಅಭಿಯಾನದ ಮೇಲೆ ನಿರಂತರವಾಗಿ ನಿಗಾವಹಿಸುವ ಮೂಲಕ ಭಾರತದ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿನ ನಾವೀನ್ಯತೆ ಹಾಗೂ ಪ್ರಗತಿಯನ್ನು ಎತ್ತು ತೋರಲು ಇದು ಸಹಾಯವಾಗಲಿದೆ.
- ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಸರ್ವ ಶಿಕ್ಷಣ ಅಭಿಯಾನದಡಿ ಆಗಿರುವ ಪ್ರಗತಿಯನ್ನು ಗುರುತಿಸುವ ಮೂಲಕ ಗುಣಮಟ್ಟದ ಶಿಕ್ಷಣವನ್ನು ನೀಡಲು ಹಾಗೂ ಯೋಜನೆ ರೂಪಿಸಲು ಸರ್ಕಾರಕ್ಕೆ ಸಹಾಯವಾಗಲಿದೆ.
- ಸರ್ವ ಶಿಕ್ಷಣ ಅಭಿಯಾನದಡಿ ಬಿಡುಗಡೆಯಾಗಿರುವ ಅನುದಾನದ ಬಳಕೆ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಸರ್ಕಾರ ಹಾಗೂ ಆಡಳಿತಾಧಿಕಾರಿಗಳಿಗೆ ವರದಿಯನ್ನು ಇದು ನೀಡಲಿದೆ.

**ಸರ್ವ ಶಿಕ್ಷಣ ಅಭಿಯಾನ:**

ಸರ್ವ ಶಿಕ್ಷಣ ಅಭಿಯಾನ ಕೇಂದ್ರ ಸರ್ಕಾರದ ಪ್ರಾಯೋಜಿತ ಯೋಜನೆ ಆಗಿದ್ದು, ವಿಶೇಷ ಸಾಮರ್ಥ್ಯವುಳ್ಳ ಮಕ್ಕಳೂ ಸೇರಿದಂತೆ 6 ರಿಂದ 14 ವರ್ಷಗಳ ನಡುವಿನ ಎಲ್ಲಾ ಮಕ್ಕಳಿಗೆ ಶಾಲೆಯ ಲಭ್ಯತೆ, ದಾಖಲಾತಿ ಮತ್ತು ಶಾಲೆಯಲ್ಲಿ ಉಳಿಸಿಕೊಳ್ಳುವುದು ಮತ್ತು ಗುಣಾತ್ಮಕ ಶಿಕ್ಷಣವನ್ನು ನೀಡುವುದರ ಮೂಲಕ ಸಾರ್ವತ್ರಿಕ ಮಾನವ ಮೌಲ್ಯಗಳನ್ನು ಬೆಳೆಸುವಂತೆ ಶಿಕ್ಷಕರಿಗೆ ಮಾರ್ಗದರ್ಶನ ನೀಡುವುದು ಹಾಗೂ ಸಮುದಾಯವನ್ನು ರಚನಾತ್ಮಕವಾಗಿ ತೊಡಗಿಸುವುದು ಇದರ ಗುರಿ.

## <u>ಐಎನ್ಎಸ್ ಖಾಂಡೇರಿ ಜಲಾಂತರ್ಗಾಮಿಗೆ ಚಾಲನೆ</u>



ಸ್ಕಾರ್ಪೀನ್ ಸರಣಿಯ ಎರಡನೆಯ ಜಲಾಂತರ್ಗಾಮಿ ನೌಕೆ 'ಖಾಂಡೇರಿ'ಯನ್ನು ಮಝಗಾನ್ ಡಾಕ್ ಶಿಪ್ ಬಿಲ್ಡರ್ ಲಿಮಿಟೆಡ್, ಮುಂಬೈ, ಮಹಾರಾಷ್ಟ್ರದಲ್ಲಿ ಉದ್ಘಾಟಿಸಲಾಯಿತು. ಸ್ಕಾರ್ಪೀನ್ ಸರಣಿಯ ಆರು ಜಲಾಂತರ್ಗಾಮಿಗಳ ಪೈಕಿ ಇದು ಎರಡನೇಯದಾಗಿದೆ. ಭಾರತೀಯ ನೌಕಪಡೆಯ "ಪ್ರಾಜೆಕ್ಟ್ 75"ರಡಿ ಮಝಗಾನ್ ಡಾಕ್ ಶಿಪ್ ಬಿಲ್ಡರ್ ಲಿಮಿಟೆಡ್ ಮತ್ತು ಫ್ರಾನ್ಸ್ ನ ಡಿಸಿಎನ್ಎಸ್ ಸಹಭಾಗಿತ್ವದಡಿ ಇದನ್ನು ಅಭಿವೃದ್ಧಿಪಡಿಸಲಾಗಿದೆ.

**ಖಾಂಡೇರಿ ಜಲಾಂತರ್ಗಾಮಿ ಪ್ರಮುಖಾಂಶಗಳು**:

- ಛತ್ರಪತಿ ಶಿವಾಜಿ ನಿಯಂತ್ರಣದಲ್ಲಿದ್ದ 'ಖಾಂಡೇರಿ' ಕೋಟೆಯ ಹೆಸರನ್ನೇ ಈ ಜಲಾಂತರ್ಗಾಮಿಗೆ ಇಡಲಾಗಿದೆ. ಸಮುದ್ರದ ನಡುವೆ ಇದ್ದ ಈ ಕೋಟೆಯ ಕಾರಣದಿಂದಾಗಿ ಶಿವಾಜಿಯ ನೌಕಾದಳ 17ನೇ ಶತಮಾನದಲ್ಲಿ ಪಾರಮ್ಯ ಸಾಧಿಸಿತ್ತು ಎನ್ನಲಾಗಿದೆ. ಖಾಂಡೇರಿ ಅನ್ನುವುದು ಟೈಗರ್ ಶಾರ್ಕಿನ ಹೆಸರು ಸಹ ಆಗಿದೆ.

- ಖಾಂಡೇರಿ ಜಲಾಂತರ್ಗಾಮಿಯು ರಹಸ್ಯವಾಗಿ ಕಾರ್ಯಾಚರಣೆ ನಡೆಸುವಸಾಮರ್ಥ್ಯವನ್ನು ಹೊಂದಿದೆ.ನಿಖರ ದಾಳಿ ನಡೆಸುವ ಶಸ್ತ್ರಾಸ್ತ್ರ ಬಳಸಿ ವೈರಿಗೆ ಭಾರಿ ಹಾನಿ ಉಂಟು ಮಾಡಲಿದೆ.
- ನೌಕೆಗಳನ್ನು ಧ್ವಂಸಗೊಳಿಸುವ ಕ್ಷಿಪಣಿ, ಸ್ಫೋಟಕ ಬಳಸುವ ಸಾಮರ್ಥ್ಯವನ್ನು ಸಹ ಹೊಂದಿದೆ. ಈ ಜಲಾಂತರ್ಗಾಮಿ ಎಲ್ಲಿದೆ ಎಂದು ಪತ್ತೆ ಮಾಡುವುದು ತೀರಾ ಕಷ್ಟ. ಶತ್ರು ದೇಶದ ಕಡೆಯಿಂದ ನುಗ್ಗುವ ಜಲಾಂತರ್ಗಾಮಿಗಳನ್ನು ಹಿಮ್ಮೆಟ್ಟಿಸಲು ಸಹ ಈ ಜಲಾಂತರ್ಗಾಮಿಗಳನ್ನು ಬಳಸಿಕೊಳ್ಳಬಹುದಾಗಿದೆ.

**ಹಿನ್ನಲೆ**:

ಭಾರತೀಯ ನೌಕಪಡೆ "ಪ್ರಾಜೆಕ್ಟ್ 75"ರಡಿ ಫ್ರಾನ್ಸ್ ನ ಡಿಸಿಎನ್ಎಸ್ ತಂತ್ರಜ್ಞಾನ ಸಹಾಯದಡಿ ಒಟ್ಟು ಆರು ಸ್ಕಾರ್ಪೀನ್ ಜಲಾಂತರ್ಗಾಮಿಗಳನ್ನು ನಿರ್ಮಿಸಲಾಗುತ್ತದೆ. ಈ ಒಪ್ಪಂದಕ್ಕೆ 2005ರಡಿ ಸಹಿ ಹಾಕಲಾಯಿತು. ಈ ಸರಣಿಯ ಮೊದಲ ಜಲಾಂತರ್ಗಾಮಿ "ಐಎನ್ಎಸ್ ಕಲ್ವರಿ" ಪ್ರಯೋಗಾರ್ಥ ಪರೀಕ್ಷೆಯನ್ನು ಪೂರ್ಣಗೊಳಿಸಿದ್ದು, ಶೀರ್ಘವೇ ಸೇನೆಗೆ ಸೇರ್ಪಡೆಗೊಳ್ಳಲಿದೆ. ಉಳಿದ ನಾಲ್ಕು ಜಲಾಂತರ್ಗಾಮಿಗಳನ್ನು ಐಎನ್ಎಸ್ ಖಾಂಡೇರಿ ನಂತರ ಒಂಬತ್ತು ತಿಂಗಳ ಅಂತರದಂತೆ ಕಾರ್ಯಗತಗೊಳಿಸಲಾಗುವುದು. ಪ್ರಸ್ತುತ **ಭಾರತದ ನೌಕಾಪಡೆಯ ಬಳಿ 13 ಸಂಪ್ರದಾಯಿಕ ನೌಕೆಗಳು ಹಾಗೂ ಎರಡು ಪರಮಾಣು ಜಲಾಂತರ್ಗಮಿಗಳಿವೆ.**

## ಪಂಜಾಬಿನ ಮಾಜಿ ಮುಖ್ಯಮಂತ್ರಿ ಸುರ್ಜಿತ್ ಸಿಂಗ್ ಬರ್ನಾಲಾ ನಿಧನ



ಪಂಜಾಬ್ನ ಮಾಜಿ ಮುಖ್ಯಮಂತ್ರಿ ಸುರ್ಜಿತ್ ಸಿಂಗ್ ಬರ್ನಾಲಾ ನಿಧನರಾದರು. ಅವರಿಗೆ 91 ವರ್ಷ ವಯಸ್ಸಾಗಿತ್ತು. 80ರ ದಶಕದಲ್ಲಿ ಪಂಜಾಬ್ನಲ್ಲಿ ಉಗ್ರಗಾಮಿ ಚಟುವಟಿಕೆಗಳು ಪರಾಕಾಷ್ಠೆಗೆ ತಲುಪಿದ್ದ ಸಂದರ್ಭದಲ್ಲಿ ಸುರ್ಜಿತ್ ಸಿಂಗ್ ಬರ್ನಾಲಾ ಆ ರಾಜ್ಯವನ್ನು ಮುನ್ನಡೆಸಿದ್ದರು. ಅವರು 1985 ರಿಂದ 1987ರವರೆಗೆ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು.

**ಪ್ರಮುಖಾಂಶಗಳು**:

- ಬರ್ನಾಲಾ, 1985ರಲ್ಲಿ ಉಗ್ರಗಾಮಿ ಚಟುವಟಿಕೆಗಳಿಂದ ಪೀಡಿತವಾಗಿದ್ದ ಪಂಜಾಬ್ನಲ್ಲಿ ಶಾಂತಿ ಸ್ಥಾಪನೆಯ ಉದ್ದೇಶದಿಂದ ಏರ್ಪಟ್ಟಿದ್ದ ರಾಜೀವ್-ಲೊಂಗೊವಾಲ ಒಪ್ಪಂದದ ಬಳಿಕ ಆ ರಾಜ್ಯದ ಮುಖ್ಯಮಂತ್ರಿಯಾಗಿ ನೇಮಕಗೊಂಡಿದ್ದರು. 1
- 991ರಲ್ಲಿ ಚಂದ್ರಶೇಖರ್ ಅಲ್ಪಾವಧಿಗೆ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಬರ್ನಾಲ ತಮಿಳುನಾಡು ರಾಜ್ಯಪಾಲರಾಗಿದ್ದರು.
- ಬರ್ನಾಲ ಅವರು ಉತ್ತರಾಖಂಡ, ಆಂಧ್ರಪ್ರದೇಶ, ಅಂಡಮಾನ್ ಹಾಗೂ ನಿಕೋಬಾರ್ ದ್ವೀಪಗಳ ರಾಜ್ಯಪಾಲರಾಗಿಯೂ ಕಾರ್ಯನಿರ್ವಹಿಸಿದ್ದರು.
- 1977ರಿಂದ 1978ರವರೆಗೆ ಅವರು ಮುರಾರ್ಜಿ ದೇಸಾಯಿ ಸರಕಾರದಲ್ಲಿ ಕೃಷಿ ಸಚಿವರಾಗಿದ್ದರು. ಅಟಲ್ಬಿಹಾರಿ ವಾಜಪೇಯಿ ನೇತೃತ್ವದ ಸಂಪುಟದಲ್ಲಿಯೂ ಅವರು ರಾಸಾಯನಿಕ ಹಾಗೂ ರಸಗೊಬ್ಬರ ಸಚಿವರಾಗಿದ್ದರು.

**<u>"ಜಲ್ಲಿಕಟ್ಟು" ತಮಿಳುನಾಡಿನ ಸುಗ್ರೀವಾಜ್ಞೆಗೆ ಸಮ್ಮತಿ ಸೂಚಿಸಿದ ಕೇಂದ್ರ ಸರ್ಕಾರ</u>**



ಗೂಳಿ ಪಳಗಿಸುವ ಕ್ರೀಡೆ ಜಲ್ಲಿಕಟ್ಟು ನಡೆಸಲು ಅವಕಾಶ ತಮಿಳುನಾಡು ಸರ್ಕಾರ ಸಿದ್ದಪಡಿಸಿರುವ ಸುಗ್ರೀವಾಜ್ಞೆ ಕರಡುವಿಗೆ ಕೇಂದ್ರ ಪರಿಸರ ಮತ್ತು ಕಾನೂನು ಸಚಿವಾಲಯ ಯಾವುದೇ ಬದಲಾವಣೆ ಸೂಚಿಸದೆ ಒಪ್ಪಿಗೆ ನೀಡಿದೆ. ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆಯಲ್ಲಿರುವ ಪಟ್ಟಿಯಿಂದ ಗೂಳಿಯನ್ನು ಕೈಬಿಡುವುದು ಸುಗ್ರೀವಾಜ್ಞೆಯಲ್ಲಿರುವ ಮುಖ್ಯ ಅಂಶವಾಗಿದೆ. ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆಯಲ್ಲಿರುವ ನಿರ್ಬಂಧಗಳನ್ನೆಲ್ಲ ಸೇರಿಸಿಕೊಂಡೇ ಸುಗ್ರೀವಾಜ್ಞೆಯ ಕರಡು ಸಿದ್ದಪಡಿಸಲಾಗಿದೆ.

**ಪ್ರಮುಖಾಂಶಗಳು:**

- ಇದು ಸಂವಿಧಾನದ ಸಹವರ್ತಿ ಪಟ್ಟಿಯಲ್ಲಿ ಬರುವ ವಿಷಯವಾಗಿರುವುದರಿಂದ ತಮಿಳುನಾಡು ಸರ್ಕಾರ ಕೇಂದ್ರ ಸರ್ಕಾರದಿಂದ ಅನುಮತಿ ಪಡೆಯುವುದು ಅನಿರ್ವಾಯವಾಗಿದೆ.
- ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆಯಲ್ಲಿರುವ ಪಟ್ಟಿಯಿಂದ ಗೂಳಿಯನ್ನು ಕೈಬಿಡುವುದು ಸುಗ್ರೀವಾಜ್ಞೆಯಲ್ಲಿರುವ ಮುಖ್ಯ ಅಂಶವಾಗಿದೆ. ಆದ್ದರಿಂದ ಪ್ರಾಣಿಗಳ ಮೇಲಿನ ಕ್ರೌರ್ಯ ತಡೆ ಕಾಯ್ದೆ-1960 ಗೂಳಿಗೆ ಅನ್ವಯಿಸುವುದಿಲ್ಲ.
- ಸುಪ್ರೀಂಕೋರ್ಟ್ ಮೇ 2014ರಲ್ಲಿ ಜಲ್ಲಿಕಟ್ಟುವಿನ ಮೇಲೆ ವಿಧಿಸಿದ ನಿಷೇಧವನ್ನು ತಪ್ಪಿಸುವ ಸಲುವಾಗಿ ಸುಗ್ರೀವಾಜ್ಞೆಯನ್ನು ಹೊರಡಿಸಲಾಗಿದೆ.

**<u>ರಾಜ್ಯಗಳ ಕಾರ್ಯಸಾಧನೆ ಅಳೆಯಲು "ಇಂಡಿಯಾ ಇನ್ನೋವೇಶನ್ ಇಂಡೆಕ್ಸ್"</u>**




ರಾಜ್ಯಗಳ ಕಾರ್ಯಸಾಧನೆಯನ್ನು ಅಳೆಯುವ ಸಲುವಾಗಿ ವಿಶ್ವ ಆರ್ಥಿಕ ವೇದಿಕೆ (WEF), ನೀತಿ ಆಯೋಗ, ವಿಶ್ವ ಭೌದ್ದಿಕ ಆಸ್ತಿ ಸಂಸ್ಥೆ (WIPO) ಮತ್ತು ಕಾರ್ನೆಲ್ ವಿಶ್ವವಿದ್ಯಾಲಯ ಇಂಡಿಯಾ ಇನ್ನೋವೇಶನ್ ಇಂಡೆಕ್ಸ್ ಅನ್ನು ಅಭಿವೃದ್ದಿಪಡಿಸಲಿವೆ. ವಿಶ್ವ ಭೌದ್ದಿಕ ಆಸ್ತಿ ಸಂಸ್ಥೆಯ ಗ್ಲೋಬಲ್ ಇನ್ನೋವೇಶನ್ ಇಂಡೆಕ್ಸ್ ಮಾದರಿಯಲ್ಲೆ ಈ ಇಂಡೆಕ್ಸ್ ಅನ್ನು ಅಭಿವೃದ್ದಿಪಡಿಸಲಿದ್ದು, ದೇಶದ ತಳಮಟ್ಟದ ಅಭಿವೃದ್ದಿ ಮೇಲೆ ಇದು ಬೆಳಕು ಚೆಲ್ಲಲಿದೆ.

**ಪ್ರಮುಖಾಂಶಗಳು**:

- ಇಂಡಿಯಾ ಇನ್ನೋವೇಶನ್ ಇಂಡೆಕ್ಸ್ ನಲ್ಲಿ ದೇಶದ ರಾಜ್ಯಗಳ ನಾವೀನ್ಯತೆ ಕಾರ್ಯಸಾಧನೆ ಅಳೆಯುವ ಮೂಲಕ ರಾಜ್ಯಗಳಿಗೆ ಶ್ರೇಯಾಂಕವನ್ನು ನೀಡಲಾಗುವುದು. ಆ ಮೂಲಕ ದೇಶವನ್ನು ನಾವೀನ್ಯತೆ ಆಧರಿತ ಆರ್ಥಿಕ ರಾಷ್ಟ್ರವನ್ನಾಗಿಸುವ ಗುರಿ ಹೊಂದಲಾಗಿದೆ.
- ಈ ಸೂಚ್ಯಂಕದ ಆಧಾರ ಸ್ತಂಭಗಳೆಂದರೆ ಮಾನವ ಸಂಪನ್ಮೂಲದ ಸಾಮರ್ಥ್ಯ ಮತ್ತು ಸಂಶೋಧನೆ, ಸಂಸ್ಥೆಗಳ ಬಲವರ್ಧನೆ, ಮೂಲಸೌಕರ್ಯಗಳ ಬೆಂಬಲ ಮತ್ತು ವ್ಯಾಪಾರ ಸಂಕೀರ್ಣತೆ.
- ಈ ಸೂಚ್ಯಂಕವನ್ನು ಅಭಿವೃದ್ದಿಡಿಸಲು ಪ್ರತಿಯೊಂದು ಪಾಲುದಾರಿಕೆ ಸಂಸ್ಥೆಗಳು ಕಾರ್ಯಪಡೆ ಸದಸ್ಯರನ್ನು ನಾಮನಿರ್ದೇಶನ ಮಾಡಲಿವೆ. ಮೊದಲ ಸೂಚ್ಯಂಕವನ್ನು ಅಕ್ಟೋಬರ್ 2017ರಲ್ಲಿ ನಡೆಯಲಿರುವ ಭಾರತ ಆರ್ಥಿಕ ಶೃಂಗಸಭೆಯಲ್ಲಿ ಬಿಡುಗಡೆಗೊಳಿಸಲಾಗುವುದು.
- ರಾಜ್ಯ ರಾಜ್ಯಗಳ ನಡುವೆ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸಲು ಇದು ಸಹಾಯವಾಗಲಿದೆ. ಆ ಮೂಲಕ ಸಮಗ್ರ ಬೆಳವಣಿಗೆಗೆ ನಿಯಮಗಳನ್ನು ರೂಪಿಸಲು ಅನುಕೂಲವಾಗಲಿದೆ.

**ವಿಕಲಚೇತನರ ಹಕ್ಕು ಕಾಯಿದೆ ಅನುಷ್ಠಾನಕ್ಕೆ ನಿಯಮ ರೂಪಿಸಲು ಸಮಿತಿ ರಚನೆ**



ವಿಕಲಚೇತನರ ಹಕ್ಕು ಕಾಯಿದೆ-2016 ಅನುಷ್ಠಾನದಲ್ಲಾಗುವ ವಿಳಂಬವನ್ನು ತಡೆಯುವ ಸಲುವಾಗಿ ದೇಶದಾದ್ಯಂತ ಏಕರೂಪ ನಿಯಮಗಳನ್ನು ರೂಪಿಸಲು ಕೇಂದ್ರ ಸರ್ಕಾರ ಸಮಿತಿಯೊಂದನ್ನು ರಚಿಸಿದೆ. ವಿಕಲಚೇತನರ ಸಬಲೀಕರಣ ಇಲಾಖೆಯ ಕಾರ್ಯದರ್ಶಿ ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಸಮಿತಿಯು ಮೂರು ತಿಂಗಳೊಳಗೆ ವರದಿಯನ್ನು ಸಲ್ಲಿಸಲಿದೆ.

**ಸಮಿತಿಯ ರಚನೆ:**

- ಕೇಂದ್ರ ಆರೋಗ್ಯ ಸಚಿವಾಲಯ, ಕಾರ್ಮಿಕ ಸಚಿವಾಲಯ, ಹಾಗೂ ಸರ್ಕಾರೇತರ ಸಂಸ್ಥೆ (NGO)ಗಳ ಪ್ರತಿನಿಧಿಗಳು ಸಮಿತಿಯ ಸದಸ್ಯರಾಗಿರಲಿದ್ದಾರೆ.
- ಅಲ್ಲದೇ ಕರ್ನಾಟಕ, ಗುಜರಾತ್, ಒಡಿಶಾ, ಅಸ್ಸಾಂ, ಮಧ್ಯ ಪ್ರದೇಶ ಮತ್ತು ಉತ್ತರ ಪ್ರದೇಶ ರಾಜ್ಯಗಳ ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು ಸಹ ಸದಸ್ಯರಾಗಿ ಇರಲಿದ್ದಾರೆ,

**ಸಮಿತಿಯ ಹೊಣೆಗಾರಿಕೆ:**

- ದೇಶದಾದ್ಯಂತ ಕಾಯಿದೆಯ ಅನುಷ್ಠಾನಕ್ಕೆ ಮಾದರಿ ಏಕರೂಪ ನಿಯಮಗಳನ್ನು ರೂಪಿಸುವುದು. ಆ ಮೂಲಕ ಕಾಯಿದೆಯ ಅನುಷ್ಠಾನದಲ್ಲಾಗುವ ವಿಳಂಬವನ್ನು ತಡೆಯುವುದು.

**ವಿಕಲಚೇತನರ ಹಕ್ಕು ಕಾಯಿದೆ-2016:**

- ವಿಕಲಚೇತನರ ಹಕ್ಕು ಕಾಯಿದೆ ರಾಷ್ಟ್ರಪತಿ ರವರಿಂದ ಅಂಕಿತ ಪಡೆದ ನಂತರ ಡಿಸೆಂಬರ್ 2016 ರಲ್ಲಿ ಅಧಿಸೂಚನೆ ಹೊರಡಿಸಲಾಗಿದೆ. ದೈಹಿಕ ಮತ್ತು ಮಾನಸಿಕ ನ್ಯೂನತೆ ಸೇರಿದಂತೆ ವಿವಿಧ ನ್ಯೂನತೆಗಳನ್ನು ಕಾಯಿದೆಯಡಿ ತರಲಾಗಿದೆ.
- ಈ ಕಾಯಿದೆಯಡಿ ಈ ಹಿಂದೆ ಇದ್ದ 7 ನ್ಯೂನತೆಗಳ ಬದಲಿಗೆ 21 ನ್ಯೂನತೆಗಳನ್ನು ಅಂಗವೈಕಲ್ಯತೆ ಎಂದು ಪರಿಗಣಿಸಲಾಗಿದೆ.

**ಐದು ಸಾಮಾನ್ಯ ಸಾಂಕ್ರಾಮಿಕವಲ್ಲದ ರೋಗಗಳ ನಿವಾರಣೆ, ತಪಾಸಣೆ ಮತ್ತು ನಿಯಂತ್ರಣ ಕಾರ್ಯಕ್ರಮ ಆರಂಭಿಸಲಿರುವ ಕೇಂದ್ರ ಸರ್ಕಾರ**



ಕೇಂದ್ರ ಆರೋಗ್ಯ ಸಚಿವಾಲಯ ಐದು ಸಾಮಾನ್ಯ ಸಾಂಕ್ರಾಮಿಕವಲ್ಲದ ರೋಗಗಳ ನಿವಾರಣೆ, ತಪಾಸಣೆ ಮತ್ತು ನಿಯಂತ್ರಣ ಕಾರ್ಯಕ್ರಮವನ್ನು ಜಾರಿಗೆ ತರಲಿದೆ. ವಿಶ್ವ ಕ್ಯಾನ್ಸರ್ ದಿನವಾದ ಫೆಬ್ರವರಿ 4 ರಂದು ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗುವುದು. ಅಧಿಕ ರಕ್ತದೊತ್ತಡ, ಮಧುಮೇಹ ಹಾಗೂ ಬಾಯಿ ಕುಳಿ, ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ಈ ಐದು ರೋಗಗಳಾಗಿವೆ. ಈ ಕಾರ್ಯಕ್ರಮವನ್ನು ರಾಷ್ಟ್ರೀಯ ಆರೋಗ್ಯ ಮಿಷನ್ ಅಂಗವಾಗಿ ಜಾರಿಗೊಳಿಸಲಾಗುವುದು.

**ಪ್ರಮುಖಾಂಶಗಳು**:

- ಈ ಕಾರ್ಯಕ್ರಮದಡಿ ಮೊದಲ ಹಂತದಲ್ಲಿ ರೋಗಗಳ ತಪಾಸಣೆಯನ್ನು 32 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ 100 ಜಿಲ್ಲೆಗಳಲ್ಲಿ ಮಾರ್ಚ್ 31, 2017 ಆರಂಭಿಸಲಾಗುವುದು.
- ಆಶಾ ಹಾಗೂ ಎಎನ್ಎಮ್ ಕಾರ್ಯಕರ್ತೆಯರಿಗೆ ಇದಕ್ಕಾಗಿ ತರಬೇತಿಯನ್ನು ನೀಡಲಾಗುವುದು.

- ಮುಂದಿನ ಹಂತಗಳಲ್ಲಿ ದೀರ್ಘಕಾಲದ ಪ್ರತಿರೋಧಕ ಉಸಿರಾಟ ಕಾಯಿಲೆಗಳನ್ನು ಸಹ ಸೇರ್ಪಡೆಗೊಳಿಸಲಾಗುವುದು ಹಾಗೂ ಕಾರ್ಯಕ್ರಮವನ್ನು ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಗುವುದು.

**ಸಾಂಕ್ರಾಮಿಕವಲ್ಲದ ರೋಗಗಳು:**

ಸಾಂಕ್ರಾಮಿಕವಲ್ಲದ ರೋಗಗಳು ಅಂದರೆ ಹೃದಯ ಸಂಬಂಧಿ ರೋಗಗಳಾದ ಹೃದಯಘಾತ ಮತ್ತು ಪಾರ್ಶ್ವವಾಯು, ಮಧುಮೇಹ, ದೀರ್ಘಕಾಲದ ಉಸಿರಾಟ ಸಂಬಂಧಿ ಕಾಯಿಲೆಗಳಾದ ಅಸ್ತಮಾ ಮತ್ತು ಕ್ಯಾನ್ಸರ್ ರೋಗಗಳು ದೇಶದ ಶೇ 60% ಸಾವಿಗೆ ಕಾರಣವಾಗಿವೆ. ಈ ರೋಗಗಳ ಲಕ್ಷಣಗಳು ಕಾಯಿಲೆ ಉಲ್ಬಣಗೊಂಡ ನಂತರ ಗೋಚರವಾಗುವುದರಿಂದ ರೋಗದ ಆರಂಭ ದಿನಗಳಲ್ಲಿ ತಪಾಸಣೆಯನ್ನು ನಡೆಸುವುದು ಅತ್ಯಂತ ಅಗತ್ಯ. ಸಾಂಕ್ರಾಮಿಕವಲ್ಲದ ರೋಗಗಳು ಕುಟುಂಬದ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿಗತಿಯ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ.

## ಕಲಿಕಾ ಫಲಿತಾಂಶಗಳ ವಿಷಯದಲ್ಲಿ ಕೇರಳವನ್ನು ಹಿಂದಿಕ್ಕಿದ ಹಿಮಾಚಲ ಪ್ರದೇಶ



ಇತ್ತೀಚೆಗೆ ಬಿಡುಗಡೆಗೊಂಡ ಶಿಕ್ಷಣ ಸ್ಥಿತಿ ವರದಿ-2016 ಪ್ರಕಾರ ಕಲಿಕಾ ಫಲಿತಾಂಶ ವಿಷಯದಲ್ಲಿ ಕೇರಳ ಹಾಗೂ ಇತರೆ ರಾಜ್ಯಗಳನ್ನು ಹಿಂದಿಕ್ಕಿ ಹಿಮಾಚಲ ಪ್ರದೇಶ ಮುಂಚೂಣಿ ಸ್ಥಾನದಲ್ಲಿ ಹೊರಹೊಮ್ಮಿದೆ. ಶಿಕ್ಷಣ ಸ್ಥಿತಿ ವರದಿ-2016 ಅತಿದೊಡ್ಡ ವಾರ್ಷಿಕ ಸಮೀಕ್ಷೆಯಾಗಿದ್ದು, ಶೈಕ್ಷಣಿಕ ಕ್ಷೇತ್ರದಲ್ಲಿ ಮಕ್ಕಳ ಕುರಿತ ಸಮೀಕ್ಷೆ ಇದಾಗಿದೆ.

**ವರದಿಯ ಪ್ರಮುಖಾಂಶಗಳು**:

- ವರದಿಯ ಪ್ರಕಾರ ಶಾಲೆಗೆ ದಾಖಲಾಗುವ 6 ರಿಂದ 14 ವಯಸ್ಸಿನ ಮಕ್ಕಳ ಪ್ರಮಾಣ ಹಿಮಾಚಲ ಪ್ರದೇಶದಲ್ಲಿ ಶೇ 99.8% ರಷ್ಟಿದೆ. ದೇಶದಾದ್ಯಂತ ಓದುವ ಮತ್ತು ಗಣಿತ ಕಲಿಕಾ ಫಲಿತಾಂಶ ವಿಷಯದಲ್ಲಿ ಹಿಮಾಚಲ ಪ್ರದೇಶ ಅಗ್ರಸ್ಥಾನದಲ್ಲಿದೆ.
- ಭಾಷೆ ವಿಭಾಗದಲ್ಲಿ ರಾಷ್ಟ್ರ ಮಟ್ಟದ ಪ್ರಮಾಣ ಶೇ 41.6% ರಷ್ಟಿದ್ದರೆ ಹಿಮಾಚಲ ಪ್ರದೇಶದ ಕಲಿಕಾ ಫಲಿತಾಂಶ ಶೇ 65.3% ರಷ್ಟಿದೆ.
- ಗಣಿತ ವಿಷಯದಲ್ಲಿ ಕಲಿಕಾ ಫಲಿತಾಂಶ ಹಿಮಾಚಲ ಪ್ರದೇಶ ಶೇ 47.4% ರಷ್ಟಿದೆ. ರಾಷ್ಟ್ರ ಮಟ್ಟದಲ್ಲಿ ಈ ಪ್ರಮಾಣ ಶೇ 21.1% ರಷ್ಟಿದೆ. ಗಣಿತ ವಿಷಯದಲ್ಲಿ ಸರ್ಕಾರಿ ಶಾಲೆಗಳು ಖಾಸಗಿ ಶಾಲೆಗಳಿಗಿಂತ ಉತ್ತಮವಾಗಿವೆ.
- ಇಂಗ್ಲೀಷ್ ಭಾಷೆ ಕಲಿಕೆಯಲ್ಲಿ ಹಿಮಾಚಲ ಪ್ರದೇಶ ದೇಶದಲ್ಲಿ ಐದನೇ ಸ್ಥಾನದಲ್ಲಿದೆ.

## 68ನೇ ಗಣರಾಜ್ಯೋತ್ಸವ ದೇಶದಾತ್ಯಂತ ಸಂಭ್ರಮದಿಂದ ಆಚರಣೆ




68ನೇ ಗಣರಾಜ್ಯೋತ್ಸವವನ್ನು ದೇಶದಾತ್ಯಂತ ಸಂಭ್ರಮ ಸಡಗರದಿಂದ ಆಚರಿಸಲಾಯಿತು. "ಸ್ಕಿಲ್ ಇಂಡಿಯಾ, ಬೇಟಿ ಬಚಾವೋ ಬೇಟಿ ಪಡಾವೊ" ಇದು 2017ನೇ ಗಣರಾಜ್ಯೋತ್ಸವದ ಧ್ಯೇಯವಾಕ್ಯ.

**ಪ್ರಮುಖಾಂಶಗಳು**:

- ಅಬುದಾಬಿಯ ಯುವರಾಜ ಹಾಗೂ ಯುನೈಟೆಡ್ ಅರಬ್ ಎಮಿರೆಟ್ಸ್ (ಯುಎಇ)ನ ಡೆಪ್ಯೂಟಿ ಸುಪ್ರೀಂ ಕಮಾಂಡರ್ ಆಗಿರುವ ಶೇಖ್ ಮೊಹಮ್ಮದ್ ಬಿನ್ ಝುಯೇದ್ ಅಲ್ ನಹ್ಯಾನ್" ರವರು ಈ ವರ್ಷದ ಗಣರಾಜ್ಯೋತ್ಸವ ದಿನದ ಮುಖ್ಯ ಅತಿಥಿ.

- ಗಣರಾಜ್ಯೋತ್ಸವ ದಿನದಂದು ದೆಹಲಿಯಲ್ಲಿ ನಡೆಯುವ ಫೆರೇಡ್ ನಲ್ಲಿ ದೇಶದ ವಿವಿಧ ಸಂಸ್ಕೃತಿ, ವಿವಿಧ ಕ್ಷೇತ್ರಗಳಲ್ಲಿ ದೇಶದ ಸಾಧನೆ ಹಾಗೂ ಮಿಲಿಟರಿ ಕಸರತ್ತನ್ನು ಪ್ರದರ್ಶಿಸಲಾಯಿತು.
- ಇದೇ ಮೊದಲ ಬಾರಿಗೆ ದೇಶದ "ರಾಷ್ಟ್ರೀಯ ಭದ್ರತಾ ಪಡೆ (NSG)"ಯ ತುಕಡಿಯಾದ ಬ್ಲಾಕ್ ಕ್ಯಾಟ್ ಕಮಾಂಡೋಸ್ ಫೆರೇಡ್ ನಲ್ಲಿ ಭಾಗವಹಿಸಿದ್ದರು. ಯುಎಇ ಮಿಲಿಟರಿ ಪಡೆ ಸಹ ಫೆರೇಡ್ ನಲ್ಲಿ ಭಾಗವಹಿಸಿತ್ತು.
- ದೇಶದ ಸುಮಾರು 17 ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿವಿಧ ಸ್ತಬ್ದ ಚಿತ್ರಗಳನ್ನು ಫೆರೇಡ್ ನಲ್ಲಿ ಪ್ರದರ್ಶಿಸಲಾಯಿತು.
- ರಾಷ್ಟ್ರಪತಿ ಪ್ರಣಭ್ ಮುಖರ್ಜಿ ಅವರು ದೇಶದ ಅತ್ಯುನ್ನತ ಶೌರ್ಯ ಪ್ರಶಸ್ತಿಯಾದ "ಅಶೋಕ ಚಕ್ರ"ವನ್ನು ಹವಾಲ್ದಾರ್ ಹಂಗ್ಪನ್ ದಾದಾ ಅವರಿಗೆ ಮರಣೋತ್ತರವಾಗಿ ಪ್ರಧಾನ ಮಾಡಿದರು.

**ಮಕ್ಕಳ ರಾಷ್ಟ್ರೀಯ ಕ್ರಿಯಾ ಯೋಜನೆ (National Action Plan for Children)-2016 ಬಿಡುಗಡೆ**



ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಮಕ್ಕಳ ರಾಷ್ಟ್ರೀಯ ಕ್ರಿಯಾ ಯೋಜನೆ, 2016 ಅನ್ನು ಬಿಡುಗಡೆಗೊಳಿಸಿದೆ. ರಾಷ್ಟ್ರೀಯ ಹೆಣ್ಣು ಮಗು ದಿನ (ಜನವರಿ 24) ಅಂಗವಾಗಿ ಬಿಡುಗಡೆಗೊಳಿಸಲಾಯಿತು. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಸಚಿವೆ ಮೇನಕ ಸಂಜಯ್ ಗಾಂಧಿ ರವರು ಯೋಜನೆಯನ್ನು ಬಿಡುಗಡೆಗೊಳಿಸಿದರು. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಸಚಿವಾಲಯ ಕ್ರಿಯಾಯೋಜನೆಯನ್ನು ಸಿದ್ದಪಡಿಸಿದೆ.

**NPAC 2016:**

- ಕ್ರಿಯಾ ಯೋಜನೆಯಲ್ಲಿ ನಾಲ್ಕು ಪ್ರಮುಖ ಕ್ಷೇತ್ರಗಳಿಗೆ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಅವುಗಳೆಂದರೆ ಆರೋಗ್ಯ ಮತ್ತು ಪೋಷಕಾಂಶ, ಶಿಕ್ಷಣ ಮತ್ತು ಅಭಿವೃದ್ದಿ, ಪಾಲ್ಗೊಳ್ಳುವಿಕೆ ಮತ್ತು ರಕ್ಷಣೆ ಹಾಗೂ ಬದುಕುಳಿಯುವಿಕೆ.
- ನಾಲ್ಕು ಪ್ರಮುಖ ಆದ್ಯತ ಕ್ಷೇತ್ರಗಳ ಅಡಿಯಲ್ಲಿ ಪ್ರಗತಿಯನ್ನು ಅಳೆಯಲು ಉದ್ದೇಶಗಳು, ಉಪ ಉದ್ದೇಶಗಳು, ತಂತ್ರಗಳು ಹಾಗೂ ಕ್ರಮಾಂಕಗಳನ್ನು ಹೇಳಲಾಗಿದೆ.
- ನೈಸರ್ಗಿಕವಾಗಿ ಮತ್ತು ಮಾನವ ನಿರ್ಮಿತ ವಿಪತ್ತುಗಳು, ಹವಾಮಾನ ಬದಲಾವಣೆ ಮತ್ತು ಆನ್ ಲೈನ್ ದುರುಪಯೋಗದಿಂದ ಮಕ್ಕಳನ್ನು ರಕ್ಷಿಸಲು ವಿಶೇಷ ಕಾಳಜಿಯನ್ನು ವಹಿಸಲಾಗಿದೆ.
- ವಿವಿಧ ಸಚಿವಾಲಯಗಳಡಿ ಜಾರಿಯಲ್ಲಿರುವ ಯೋಜನೆಗಳ ಆಧಾರದ ಮೇಲೆ ಈ ಕ್ರಿಯಾ ಯೋಜನೆಯ ಕಾರ್ಯತಂತ್ರ ಹಾಗೂ ಕ್ರಮಾಂಕಗಳನ್ನು ರೂಪಿಸಲಾಗಿದೆ.

**ಹಿನ್ನಲೆ**:

ಮಕ್ಕಳ ರಾಷ್ಟ್ರೀಯ ಕ್ರಿಯಾ ಯೋಜನೆ-2016 ಅನ್ನು ರಾಷ್ಟ್ರೀಯ ಮಕ್ಕಳ ನೀತಿ-2013 ಪ್ರಕಾರ ತಯಾರಿಸಲಾಗಿದೆ. ರಾಷ್ಟ್ರೀಯ ಮಕ್ಕಳ ನೀತಿಯು ಕೇಂದ್ರ ಮಹಿಳಾ ಮತ್ತು ಮಕ್ಕಳ ಸಚಿವಾಲಯದಡಿ ನ್ಯಾಷನಲ್ ಕೋ-ಆರ್ಡಿನೇಷನ್ ಅಂಡ್ ಆಕ್ಷನ್ ಗ್ರೂಫ್ (NCAG) ಸ್ಥಾಪಿಸಲು ಅವಕಾಶ ಕಲ್ಪಿಸಿದೆ.

## ಗ್ರಾಮೀಣ ವಸತಿ ಸೌಲಭ್ಯಕ್ಕೆ ಹೊಸ ಯೋಜನೆಯನ್ನು ಅನುಮೋದಿಸಿದ ಕೇಂದ್ರ ಸರ್ಕಾರ



ದೇಶದಲ್ಲಿ ಗ್ರಾಮೀಣ ವಸತಿ ಸೌಲಭ್ಯವನ್ನು ಪ್ರೋತ್ಸಾಹಿಸುವುದಕ್ಕಾಗಿ ಕೇಂದ್ರ ಸರ್ಕಾರ ಹೊಸ ಯೋಜನೆಯನ್ನು ಅನುಮೋದಿಸಿದೆ. ಈ ಯೋಜನೆಯಡಿ ಗ್ರಾಮೀಣ ಭಾಗದ ಜನರು ವಸತಿ ರಹಿತರು ಹೊಸ ಮನೆಯನ್ನು ನಿರ್ಮಿಸಿಕೊಳ್ಳಬಹುದಾಗಿದೆ ಅಥವಾ ಕಚ್ಚಾ ಮನೆಯನ್ನು ವಾಸಕ್ಕೆ ಯೋಗ್ಯವಾಗುವಂತೆ ಅಭಿವೃದ್ಧಿಪಡಿಸಿಕೊಳ್ಳಬಹುದಾಗಿದೆ. ಇದರಡಿ ಪ್ರಧಾನ ಮಂತ್ರಿ ಆವಾಸ್ ಯೋಜನೆ (ಗ್ರಾಮೀಣ)-ಜಿ ರಡಿ ಫಲಾನುಭವಿಗಳಾಗದವರಿಗೆ ಸರ್ಕಾರ ಬಡ್ಡಿ ಸಬ್ಸಿಡಿಯನ್ನು ನೀಡಲಿದೆ.

**ಯೋಜನೆಯ ಪ್ರಮುಖಾಂಶಗಳು:**

- ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಈ ಯೋಜನೆಯನ್ನು ಅನುಷ್ಠಾನಗೊಳಿಸಲಿದೆ. ಇದರಡಿ ವಸತಿ ನಿರ್ಮಾಣಕ್ಕೆ ಫಲಾನುಭವಿಗಳಿಗೆ ರೂ 2 ಲಕ್ಷ ಸಾಲದ ವರೆಗೆ ಬಡ್ಡಿ ಸಬ್ಸಿಡಿಯನ್ನು ನೀಡಲಾಗುವುದು.
- ಒಟ್ಟು ನಿವ್ವಳ ಬಡ್ಡಿ ಮೊತ್ತದ ಶೇ 3% ರಷ್ಟನ್ನು ಸರ್ಕಾರ ನ್ಯಾಷನಲ್ ಹೌಸಿಂಗ್ ಬ್ಯಾಂಕಿಗೆ ನೀಡಲಿದೆ. ಆ ನಂತರ ನ್ಯಾಷನಲ್ ಹೌಸಿಂಗ್ ಬ್ಯಾಂಕ್ ಪ್ರಾಥಮಿಕ ಸಾಲ ಸಂಸ್ಥೆಗಳಿಗೆ ಈ ಮೊತ್ತವನ್ನು ರವಾನಿಸಲಿದೆ.
- ಯೋಜನೆಯನ್ನು ಪ್ರಧಾನ ಮಂತ್ರಿ ಆವಾಸ್ ಯೋಜನೆ-ಜಿ ಯಡಿ ಒಗ್ಗೂಡಿಸುವುದು ಸೇರಿದಂತೆ ಸರ್ಕಾರ ಫಲಾನುಭವಿಗಳಿಗೆ ಅಗತ್ಯ ತಾಂತ್ರಿಕ ಸಹಾಯವನ್ನು ಒದಗಿಸಲಿದೆ.
- ಹೊಸ ಯೋಜನೆಯು ಗ್ರಾಮೀಣ ಭಾಗದಲ್ಲಿ ವಸತಿ ಸೌಕರ್ಯ ಸೇರಿದಂತೆ ಉದ್ಯೋಗವನ್ನು ಸೃಷ್ಟಿಸಲು ನೆರವಾಗಲಿದೆ.

## ಸ್ಪರ್ಶಿತ ಕುಷ್ಠರೋಗ ಜಾಗೃತಿ ಅಭಿಯಾನಕ್ಕೆ ಚಾಲನೆ




ಕುಷ್ಠರೋಗ ವಿರೋಧಿ ದಿನದ ಅಂಗವಾಗಿ ಕೇಂದ್ರ ಸರ್ಕಾರ ರಾಷ್ಟ್ರವ್ಯಾಪ್ತಿ ಸ್ಪರ್ಶಿತ ಕುಷ್ಠರೋಗ ಜಾಗೃತಿ ಅಭಿಯಾನ (Sparsh Leprosy Awareness Campaign)ಕ್ಕೆ ಚಾಲನೆ ನೀಡಿದೆ. ಕುಷ್ಠ ರೋಗ ವಿರೋಧಿ ದಿನವನ್ನು ಪ್ರತಿ ವರ್ಷ ಜನವರಿ 30 ರಂದು ಆಚರಿಸಲಾಗುತ್ತದೆ. ಜನವರಿ 30 ಮಹಾತ್ಮ ಗಾಂಧಿ ಅವರು ಹುತಾತ್ಮರಾದ ದಿನ. ಮಹಾತ್ಮ ಗಾಂಧಿ ಅವರು ಕುಷ್ಠರೋಗಿಗಳಿಗೆ ನೀಡಿದ ನಿಸ್ವಾರ್ಥ ಸೇವೆಯನ್ನು ಸ್ಮರಿಸಲು ಈ ದಿನದಂದು ಆಚರಿಸಲಾಗುತ್ತಿದೆ.

**ಅಭಿಯಾನದ ಪ್ರಾಮುಖ್ಯತೆ:**

- ಕುಷ್ಠರೋಗವು "ಮೈಕೋಬ್ಯಾಕ್ಟೀರಿಯಂ ಲೆಪ್ರೇ" ಎಂಬ ಸೂಕ್ಷ್ಮ ಜೀವಾಣುವಿನಿಂದ ಬರುವ ರೋಗ. ಇದು ಮುಖ್ಯವಾಗಿ ಚರ್ಮ ಮತ್ತು ನರಗಳ ಮೇಲೆ ಪ್ರಭಾವ ಬೀರುತ್ತದೆ. ಲಿಂಗ, ವಯಸ್ಸಿನ ಭೇದಭಾವವಿಲ್ಲದೆ ಯಾರಿಗಾದರೂ ಬರಬಹುದು. ಸಕಾಲದಲ್ಲಿ ಚಿಕಿತ್ಸೆ ನೀಡದಿದ್ದರೆ ಒಬ್ಬರಿಂದ ಒಬ್ಬರಿಗೆ ಹರಡುತ್ತದೆ. ಆರಂಭದಲ್ಲಿಯೇ ರೋಗ ಪತ್ತೆ ಹಚ್ಚಿ ಸೂಕ್ತ ಚಿಕಿತ್ಸೆ ನೀಡಿದರೆ ಅಂಗವೈಕಲ್ಯವನ್ನು ತಡೆಗಟ್ಟಬಹುದು.
- ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರ ಜಗತ್ತಿನಾದ್ಯಂತ ವಾರ್ಷಿಕವಾಗಿ 2,12,000 ಜನರು ಈ ಕಾಯಿಲೆಗೆ ತುತ್ತಾಗುತ್ತಿದ್ದಾರೆ. ಭಾರತ ಒಂದರಲ್ಲೆ 1,27, 356 ಪ್ರಕರಣಗಳು ದಾಖಲಾಗಿದ್ದು, ಜಗತ್ತಿನ ಶೇ 60% ಪ್ರಕರಣಗಳು ನಮ್ಮ ದೇಶದಲ್ಲಿ ಪತ್ತೆಯಾಗಿವೆ.
- ವಿಶ್ವದಲ್ಲಿ ಅತಿ ಹೆಚ್ಚು ಕುಷ್ಠರೋಗ ಭಾಧಿತ 22 ರಾಷ್ಟ್ರಗಳಲ್ಲಿ ಭಾರತ ಸಹ ಒಂದಾಗಿದೆ. ಬ್ರೆಜಿಲ್ ಮತ್ತು ಇಂಡೋನೇಷಿಯಾ ಅಧಿಕ ಕುಷ್ಠರೋಗ ಪೀಡಿತ ದೇಶಗಳಾಗಿವೆ.

**ಸ್ಪರ್ಶಿತ ಕುಷ್ಠರೋಗ ಜಾಗೃತಿ ಅಭಿಯಾನ:**

- ಕುಷ್ಠರೋಗ ರೋಗದ ಪ್ರಾಥಮಿಕ ಹಂತದಲ್ಲೇ ರೋಗವನ್ನು ಪರೀಕ್ಷಿಸಲು ಹಾಗೂ ಚಿಕಿತ್ಸೆ ಪಡೆಯಲು ಸಮುದಾಯವವನ್ನು ಪ್ರೇರೆಪಿಸುವುದು ಹಾಗೂ ರೋಗದ ಬಗ್ಗೆ ಅರಿವು ಮೂಡಿಸುವುದು ಅಭಿಯಾನದ ಮುಖ್ಯ ಉದ್ದೇಶ.
- ರೋಗದ ವಿರುದ್ಧ ಹೋರಾಡಲು ಪ್ರಸ್ತುತ ಜಾರಿಯಲ್ಲಿರುವ ಕೇಂದ್ರೀಕೃತ ಮೇಲಿನಿಂದ ಕೆಳಗೆ ವಿತರಣಾ ಚಾಲಿತ ವಿಧಾನದ ಬದಲಿಗೆ ವಿಕೇಂದ್ರೀಕೃತ ಸಮುದಾಯ ಆಧರಿತ ಬೇಡಿಕೆ ಚಾಲಿತ ವಿಧಾನವನ್ನು ಪ್ರೋತ್ಸಾಹಿಸುವುದು ಅಭಿಯಾನದ ಗುರಿ.
- ಅಲ್ಲದೇ ಕುಷ್ಠರೋಗಿಗಳ ಬಗ್ಗೆ ಸಮಾಜದಲ್ಲಿರುವ ಕೀಳು ಮನೋಭಾವವನ್ನು ಹೋಗಲಾಡಿಸಲು ಸಮುದಾಯವನ್ನು ಬಲಗೊಳಿಸುವುದು ಆಗಿದೆ.

## ವಿಜ್ಞಾನ-ತಂತ್ರಜ್ಞಾನ

**ಅಗ್ನಿ-4 ಖಂಡಾಂತರ ಕ್ಷಿಪಣಿ ಅಂತಿಮ ಪರೀಕ್ಷೆ ಯಶಸ್ವಿ**



ಸ್ವದೇಶಿ ನಿರ್ಮಿತ ಖಂಡಾಂತರ ಕ್ಷಿಪಣಿ ಅಗ್ನಿ-4ರ ಅಂತಿಮ ಪರೀಕ್ಷೆಯನ್ನು ಒಡಿಶಾ ಕರಾವಳಿಯಲ್ಲಿರುವ ಅಬ್ದುಲ್ ಕಲಾಂ ದ್ವೀಪದಲ್ಲಿ ನಡೆಸಲಾಗಿದ್ದು, ಯಶಸ್ವಿಯಾಗಿದೆ. ಅಗ್ನಿ-4 ಕ್ಷಿಪಣಿಗೆ ಅಳವಡಿಸಲಾಗಿರುವ ಹೊಸ ತಂತ್ರಜ್ಞಾನವನ್ನು ಮರುಪರೀಕ್ಷಿಸುವ ಸಲುವಾಗಿ ಪರೀಕ್ಷೆಗೆ ಒಳಪಡಿಸಲಾಗಿತ್ತು.

**ಅಗ್ನಿ-4 ಕ್ಷಿಪಣಿ ಬಗ್ಗೆ**:

- ಅಗ್ನಿ-4 ಕ್ಷಿಪಣಿ ಎರಡು ಹಂತದ ಭೂಮಿಯಿಂದ ಭೂಮಿಗೆ ಹಾರಬಲ್ಲ ಖಂಡಾಂತರ ಕ್ಷಿಪಣಿಯಾಗಿದೆ.
- ಈ ಕ್ಷಿಪಣಿಯನ್ನು ಭಾರತೀಯ ರಕ್ಷಣಾ ಮತ್ತು ಸಂಶೋಧನಾ ಸಂಸ್ಥೆ (ಡಿಆರ್‌ಡಿಒ) ವಿನ್ಯಾಸಗೊಳಿಸಿ ಅಭಿವೃದ್ದಿಪಡಿಸಿದೆ.
- ಅಗ್ನಿ-4 ಕ್ಷಿಪಣಿ 20ಮೀ ಉದ್ದವಿದ್ದು, 17 ಟನ್ ತೂಕವಿದೆ. ಅತ್ಯಾಧುನಿಕ ತಂತ್ರಜ್ಞಾನಗಳನ್ನು ಹೊಂದಿರುವ ಈ ಕ್ಷಿಪಣಿ ಅಮೆರಿಕದ ಪರ್ಶಿಂಗ್ ಕ್ಷಿಪಣಿ ಸೇರಿದಂತೆ ಜಾಗತಿಕ ಕ್ಷಿಪಣಿಗಳ ಗುಣಮಟ್ಟಕ್ಕೆ ಸಮನಾಗಿದೆ.
- ರಿಂಗ್ ಲೇಸರ್ ಜೈರೊ ಬೇಸ್ಡ್ ಇನರ್ಷಿಯಲ್ ನೇವಿಗೇಷನ್ ಸಿಸ್ಟಮ್ (ಆರ್‌ಐಎನ್‌ಎಸ್) ಮತ್ತು ಸೂಕ್ಷ್ಮಪಥದರ್ಶಕ ವ್ಯವಸ್ಥೆಗಳನ್ನು (ಎಂಐಎಸ್‌ಎಸ್) ಅಳವಡಿಸಲಾಗಿದ್ದು, ನಿಖರವಾಗಿ ಗುರಿ ತಲುಪಬಲ್ಲದು.
- **ಮಿತಿ**: ಒಂದು ಟನ್ ಅಣ್ವಸ್ತ್ರ, ಸಿಡಿತಲೆಗಳನ್ನು 4 ಸಾವಿರ ಕಿ.ಮೀ ವ್ಯಾಪ್ತಿಗೆ ಹೊತ್ತೊಯ್ಯುವ ಸಾಮರ್ಥ್ಯವನ್ನು ಇದು ಹೊಂದಿದೆ.
- ಇದು ಈ ಕ್ಷಿಪಣಿಯ ಆರನೇ ಪರೀಕ್ಷೆಯಾಗಿದ್ದು, ಇದರ 5ನೇ ಪರೀಕ್ಷೆ 2015ರ ನವೆಂಬರ್ 9 ರಂದು ನಡೆದಿತ್ತು.

**ಉಪಗ್ರಹ ಉಡಾವಣೆ ತಂತ್ರಜ್ಞಾನಕ್ಕೆ ಇಸ್ರೋ ಮತ್ತು ಫ್ರೆಂಚ್ ಬಾಹ್ಯಕಾಶ ಏಜೆನ್ಸಿ ಒಪ್ಪಂದ**



ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮತ್ತು ಫ್ರೆಂಚ್ ಸ್ಪೇಸ್ ಏಜೆನ್ಸಿ (CNES) ಸಂಸ್ಥೆಯು ಉಪಗ್ರಹ ಉಡಾವಣೆ ತಂತ್ರಜ್ಞಾನ ಪಾಲುದಾರಿಕೆ ಒಪ್ಪಂದಕ್ಕೆ ಸಹಿ ಹಾಕಿವೆ. ಇಸ್ರೋದ ಅಧ್ಯಕ್ಷ ಕಿರಣ್ ಕುಮಾರ್ ಮತ್ತು CNESನ ಅಧ್ಯಕ್ಷ ಜೀನ್ ಯ್ವೆಸ್ ಲೆ ಗಾಲ್ ನಡುವೆ ಬೆಂಗಳೂರಿಗೆ ಭೇಟಿ ನೀಡಿದ್ದ ಫ್ರೆಂಚ್ ವಿದೇಶಾಂಗ ವ್ಯವಹಾರ ಸಚಿವ ಜೀನ್ ಮಾರ್ಕ್ ಐರಾಲ್ಟ್ ರವರ ಸಮ್ಮುಖದಲ್ಲಿ ಒಪ್ಪಂದಕ್ಕೆ ಸಹಿ ಹಾಕಲಾಯಿತು.

**ಪ್ರಮುಖಾಂಶಗಳು:**

- ಭಾರತ ಮತ್ತು ಫ್ರೆಂಚ್ ನಡುವಿನ ಪಾಲುದಾರಿಕೆ ಕ್ಷೇತ್ರದಲ್ಲಿ ಬಾಹ್ಯಕಾಶ ಸಹಕಾರ ಅತ್ಯಂತ ಮಹತ್ವದಾಗಿದೆ. ಬಾಹ್ಯಕಾಶ ಕ್ಷೇತ್ರದಲ್ಲಿ ಉಭಯ ದೇಶಗಳ ನಡುವೆ ಸುಮಾರು 50 ವರ್ಷಗಳ ಸುದೀರ್ಘ ಅವಧಿಯ ಸಂಬಂಧವನ್ನು ಹೊಂದಲಾಗಿದೆ. ನಾಸಾ ನಂತರ CNES ಜೊತೆ ಒಪ್ಪಂದಕ್ಕೆ ಸಹಿ ಹಾಕಿದ ಎರಡನೇಯ ಸಂಸ್ಥೆ ಇಸ್ರೋ.
- ಈ ಒಪ್ಪಂದ ಫ್ರಾನ್ಸ್ CNES ಮತ್ತು ಇಸ್ರೋ ನಡುವಿನ ಪಾಲುದಾರಿಕೆಯನ್ನು ಮತ್ತಷ್ಟು ಗಟ್ಟಿಗೊಳಿಸಲಿದೆ. ಅಲ್ಲದೇ ಬಾಹ್ಯಕಾಶ ವೆಚ್ಚವನ್ನು ಸರಳೀಕರಿಸುವ ಭಾರತೀಯ ಮಾದರಿಯ ಪ್ರಯೋಜನವನ್ನು ಪಡೆದುಕೊಳ್ಳಲು ಫ್ರಾನ್ಸ್ ಗೆ ಸಹಕಾರಿಯಾಗಲಿದೆ.

**10 ಉಪಗ್ರಹಗಳನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದ ಸ್ಪೇಸ್ ಎಕ್ಸ್ ಫಾಲ್ಕನ್ ರಾಕೆಟ್-9**



ಅಮೆರಿಕ ಮೂಲದ ರಾಕೆಟ್ ತಯಾರಿಕೆ ಸಂಸ್ಥೆ ಸ್ಪೇಸ್ ಎಕ್ಸ್ (SpaceX) ತನ್ನ ಫಾಲ್ಕನ್ ರಾಕೆಟ್-9 ಮೂಲಕ 10 ಉಪಗ್ರಹಗಳ ಸಮೂಹವನ್ನು ಕಕ್ಷೆಗೆ ಯಶಸ್ವಿಯಾಗಿ ಸೇರ್ಪಡೆಗೊಳಿಸಿದೆ. ಈ ಉಪಗ್ರಹಗಳನ್ನು ಎರಡು ಹಂತದ ಫಾಲ್ಕನ್ ರಾಕೆಟ್-9 ಮೂಲಕ ಕ್ಯಾಲಿಫೋರ್ನಿಯಾದ ವಂಡೆನ್ಬರ್ಗ್ ಏರ್ ಫೋರ್ಸ್ ಬೇಸ್ ನಿಂದ ಯಶಸ್ವಿಯಾಗಿ ಉಡಾಯಿಸಲಾಗಿದೆ. ರಾಕೆಟ್ ಹಾರಿಬಿಟ್ಟ ಅರ್ಧ ಗಂಟೆ ಅವಧಿಯಲ್ಲಿ ಉಪಗ್ರಹಗಳನ್ನು ನಿಗಧಿತ ಕಕ್ಷೆಗೆ ಸೇರಿಸಲಾಯಿತು.

**ಪ್ರಮುಖಾಂಶಗಳು**:

- ಈ ಉಪಗ್ರಹಗಳ ಸಮೂಹವನ್ನು ಮ್ಯಾಕ್ ಲೀನ್ (McLean), ವರ್ಜೀನಿಯಾ ಮೂಲದ ಇರಿಡಿಯಂ ಯೋಜನೆಯ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಉಪಗ್ರಹಗಳ ಸಮೂಹದ ಬದಲಾಗಿ ಹಾರಿಸಲಾಗಿದೆ. ಜಾಗತಿಕವಾಗಿ ವಾಯ್ಸ್ ಮತ್ತು ಡಾಟಾ ಸಂಪರ್ಕವನ್ನು ಇದು ಒದಗಿಸಲಿದೆ.
- ಸೆಪ್ಟೆಂಬರ್ 2016ರಲ್ಲಿ ಫ್ಲೋರಿಡಾ ಉಡಾವಣಾ ಕೇಂದ್ರದಿಂದ ಉಡಾಯಿಸಿದ ರಾಕೆಟ್ ವಿಫಲವಾದ ನಂತರ ಸ್ಪೇಸ್ ಎಕ್ಸ್ ಯಶಸ್ವಿಯಾಗಿ ನಿರ್ವಹಿಸಿದ ಮೊದಲ ಯೋಜನೆ ಇದಾಗಿದೆ.

**ಸ್ಪೇಸ್ ಎಕ್ಸ್:**

- ಸ್ಪೇಸ್ ಎಕ್ಸ್ (Space Exploration Technologies Corporation) ಒಂದು ಏರೋಸ್ಪೇಸ್ ಉತ್ಪಾದನೆ ಹಾಗೂ ಸ್ಪೆಸ್ ಟ್ರಾನ್ಸ್ ಪೋರ್ಟ್ ಸರ್ವೀಸ್ ಸಂಸ್ಥೆಯಾಗಿದೆ. ಇದರ ಕೇಂದ್ರ ಕಚೇರಿ ಹಥೋರ್ನೆ, ಕ್ಯಾಲಿಫೋರ್ನಿಯಾದಲ್ಲಿದೆ.
- ಸ್ಪೇಸ್ ಎಕ್ಸ್ ಅನ್ನು 2002ರಲ್ಲಿ ಟೆಲ್ಸ ಮೋಟಾರ್ ಸಿಇಓ ಹಾಗೂ ಮಾಜಿ ಪೇಪಾಲ್ ಉದ್ಯಮಿ ಎಲೋನ್ ಮಸ್ಕ ರವರು ಸ್ಥಾಪಿಸಿದರು. ಬಾಹ್ಯಕಾಶ ಯಾನ ವೆಚ್ಚವನ್ನು ಕಡಿಮೆಗೊಳಿಸುವುದು ಹಾಗೂ

ಮಂಗಳಗ್ರಹದ ಮೇಲೆ ವಸಾಹತುಗಾರಿಕೆಯನ್ನು ಶಕ್ತಗೊಳಿಸುವ ಉದ್ದೇಶದೊಂದಿಗೆ ಸಂಸ್ಥೆಯನ್ನು ಸ್ಥಾಪಿಸಲಾಗಿದೆ.

- ಸ್ಪೇಸ್ ಎಕ್ಸ್ ಸಂಸ್ಥೆ ಫಾಲ್ಕಾನ್ ರಾಕೆಟ್-1 ಹಾಗೂ ಫಾಲ್ಕಾನ್ ರಾಕೆಟ್-9 ಅನ್ನು ಅಭಿವೃದ್ಧಿಪಡಿಸಿದ್ದು, ಈ ಎರಡು ರಾಕೆಟ್ ಗಳು ಮರುಬಳಕೆ ಮಾಡಬಹುದಾಗಿದೆ. ಅಲ್ಲದೇ ಅಂತಾರಾಷ್ಟ್ರೀಯ ಬಾಹ್ಯಕಾಶ ಕೇಂದ್ರಕ್ಕೆ ಸರಕು ಪೂರೈಕೆ ಮಾಡಲು ಡ್ರಾಗನ್ ಬಾಹ್ಯಕಾಶ ನೌಕೆಯನ್ನು ಸಹ ಇದು ಅಭಿವೃದ್ಧಿಪಡಿಸಿದೆ.

## ಕಬ್ಬಿಣ ಭರಿತ ಕ್ಷುದ್ರಗ್ರಹ "16 ಸೈಕ್" ಅಧ್ಯಯನಕ್ಕೆ ಮಿಷನ್ ಆರಂಭಿಸಲಿರುವ ನಾಸಾ



ನ್ಯಾಷನಲ್ ಏರೋನಾಟಿಕ್ಸ್ ಅಂಡ್ ಸ್ಪೇಸ್ ಅಡ್ಮಿನಿಸ್ಟ್ರೇಷನ್ (ನಾಸಾ) ಕಬ್ಬಿಣ ಭರಿತ ಕ್ಷುದ್ರಗ್ರಹ "16 ಸೈಕ್ (16 Psyche)" ಬಗ್ಗೆ ಅಧ್ಯಯನ ನಡೆಸಲು ಮಿಷನ್ ಆರಂಭಿಸಲಿದೆ. ಈ ಮಿಷನ್ ನ ಅಂಗವಾಗಿ ನಾಸಾ 2023ರ ವೇಳಗೆ ನೌಕೆಯೊಂದನ್ನು ಉಡಾಯಿಸಲಿದ್ದು, 2030ರ ವೇಳೆಗೆ ಸೈಕ್ ಕ್ಷುದ್ರಗ್ರಹವನ್ನು ಈ ನೌಕೆ ತಲುಪಲಿದೆ. ಈ ಕ್ಷುದ್ರಗ್ರಹದಲ್ಲಿರುವ ಖನಿಜ ಸಂಪತ್ತು ವಿಶ್ವದ ಆರ್ಥಿಕತೆ ಮೌಲ್ಯಗಿಂತ 100 ಸಾವಿರ ಪಟ್ಟು ಹೆಚ್ಚು ಎನ್ನಲಾಗಿದೆ.

**ಪ್ರಮುಖಾಂಶಗಳು**:

- ಸೈಕ್ ಕ್ಷುದ್ರಗ್ರಹ ಸುಮಾರು 125 ಮೈಲಿಯಷ್ಟು ವ್ಯಾಸವನ್ನು ಹೊಂದಿದ್ದು, ಕಬ್ಬಿಣ ಮತ್ತು ನಿಕ್ಕಲ್ ಲೋಹಗಳಿಂದ ಹೇರಳವಾಗಿದೆ.
- ನಾಸಾ ಕಳುಹಿಸಲಿರುವ ಬಾಹ್ಯಕಾಶ ನೌಕೆಯು ಕ್ಷುದ್ರಗ್ರಹದ ಮೇಲೆ 16 ಪರೀಕ್ಷಾರ್ಥ ಪ್ರಯೋಗಗಳನ್ನು ನಡೆಸಲಿದೆ. ಆ ಮೂಲಕ ಕ್ಷುದ್ರಗ್ರಹದ ಇತಿಹಾಸ ಮತ್ತು ಸಂಯೋಜನೆಯ ಬಗ್ಗೆ ಸಂಪೂರ್ಣವಾಗಿ ಅಧ್ಯಯನ ನಡೆಸಲಿದೆ.
- ಇದರಿಂದ ದೊರೆಯಲಿರುವ ಮಾಹಿತಿಯಿಂದ ಖಗೋಳಶಾಸ್ತ್ರಜ್ಞರಿಗೆ ಗ್ರಹಗಳ ರಚನೆ ಹಾಗೂ ಗ್ರಹಗಳ ಆರಂಭಿಕ ಕಾಲದ ಬಗ್ಗೆ ಮತ್ತಷ್ಟು ಅಧ್ಯಯನ ನಡೆಸಲು ಸಾಧ್ಯವಾಗಲಿದೆ.
- ವಿಜ್ಞಾನಿಗಳ ಪ್ರಕಾರ ಸೈಕ್ ಕ್ಷುದ್ರಗ್ರಹ ಒಂದು "ಪ್ರೊಟೊಪ್ಲಾನೆಟ್" ಎಂದು ಭಾವಿಸಲಾಗಿದ್ದು, ಮುಂದೊಂದು ದಿನ ಹೊಸ ಗ್ರಹವೆಂದು ಪರಿಗಣಿಸಬಹುದು ಎನ್ನಲಾಗಿದೆ.

## ಯುರೋಪಿಯನ್ ಆರ್ಗನೈಸೇಶನ್ ಫಾರ್ ನ್ಯೂಕ್ಲಿಯರ್ ರಿಸರ್ಚ್ ಸಹ ಸದಸ್ಯ ರಾಷ್ಟ್ರವಾದ ಭಾರತ

ಯುರೋಪಿಯನ್ ಆರ್ಗನೈಸೇಶನ್ ಫಾರ್ ನ್ಯೂಕ್ಲಿಯರ್ ರಿಸರ್ಚ್ (CERN) ಸದಸ್ಯ ರಾಷ್ಟ್ರವಾಗಲು ನವೆಂಬರ್ 2016 ರಂದು ಸಹಿ ಹಾಕಿದ್ದ ಒಪ್ಪಂದಕ್ಕೆ ಅಗತ್ಯವಿದ್ದ ಆಂತರಿಕ ಪ್ರಕ್ರಿಯೆ ಸರ್ಕಾರ ಪೂರ್ಣಗೊಳಿಸಿದ್ದು, ಸರ್ನ್ ನ ಸಹ ಸದಸ್ಯ ರಾಷ್ಟ್ರವಾಗಿ ಭಾರತ ಅಧಿಕೃತವಾಗಿ ಸೇರ್ಪಡೆಗೊಂಡಿದೆ. ಸೆಪ್ಟೆಂಬರ್ 2016ರಲ್ಲಿ ಸರ್ನ್ (CERN) ಆಡಳಿತ ಮಂಡಳಿ ಭಾರತಕ್ಕೆ 2004 ರಿಂದ ಇದ್ದ ವೀಕ್ಷಣಾ ಸ್ಥಾನಮಾನಕ್ಕೆ ಬದಲಾಗಿ ಸದಸ್ಯ ರಾಷ್ಟ್ರ ಸ್ಥಾನಮಾನ ನೀಡಲು ನಿರ್ಣಯವನ್ನು ಕೈಗೊಂಡಿತ್ತು.

**ಭಾರತಕ್ಕೆ ಅನುಕೂಲಗಳೇನು**?

- ಯುರೋಪಿಯನ್ ಆರ್ಗನೈಸೇಶನ್ ಫಾರ್ ನ್ಯೂಕ್ಲಿಯರ್ ರಿಸರ್ಚ್ (CERN)ನ ಮಂಡಳಿ ಹಾಗೂ ಸಮಿತಿಗಳ (ವೈಜ್ಞಾನಿಕ ನೀತಿ ಸಮಿತಿ ಮತ್ತು ಹಣಕಾಸು ಸಮಿತಿ) ಸಭೆಯಲ್ಲಿ ಭಾರತ ಈಗ ಭಾಗವಹಿಸಬಹುದು. ಆದರೆ ಮಂಡಳಿಯಲ್ಲಿ ಕೈಗೊಳ್ಳಲಾಗುವ ನಿರ್ಣಯಗಳಿಗೆ ಮತ ಚಲಾಯಿಸುವ ಅಧಿಕಾರವನ್ನು ಭಾರತ ಹೊಂದಿಲ್ಲ.
- ಭಾರತದ ಯುವ ಸಂಶೋಧಕರು ಹಾಗೂ ವಿಜ್ಞಾನಿಗಳು ಸರ್ನ್ ನ ವಿವಿಧ ಯೋಜನೆಗಳಲ್ಲಿ ಭಾಗವಹಿಸಬಹುದಾಗಿದೆ. ಆ ಮೂಲಕ ದೇಶಿಯ ಯೋಜನೆಗಳಿಗೆ ಅಗತ್ಯವಿರುವ ಜ್ಞಾನ ನಿಯೋಜನೆಗೆ ಅವಕಾಶ ಸೃಜನೆಯಾಗಲಿದೆ.
- ಭೌತಶಾಸ್ತ್ರ ಮತ್ತು ಎಂಜನಿಯರಿಂಗ್ ಕ್ಷೇತ್ರದಲ್ಲಿ ಭಾರತೀಯ ವಿಜ್ಞಾನಿಗಳು ಸಂಶೋಧನೆ ಕೈಗೊಳ್ಳಲು ಹೊಸ ನಾಂದಿಯಾಗಲಿದೆ.
- ಇದರ ಜೊತೆಗೆ ಸರ್ನ್ ನ ವಿವಿಧ ಯೋಜನೆಗಳ ಗುತ್ತಿಗೆಗಾಗಿ ಭಾರತೀಯ ಸಂಸ್ಥೆಗಳು ಪ್ರಸ್ತಾವನೆ ಸಲ್ಲಿಸಬಹುದಾಗಿದೆ. ಇದರಿಂದ ಸುಧಾರಿತ ತಂತ್ರಜ್ಞಾನ ಕ್ಷೇತ್ರದಲ್ಲಿ ಕೈಗಾರಿಕ ಸಹಯೋಗಕ್ಕಾಗಿ ಅವಕಾಶಗಳು ತೆರೆದುಕೊಳ್ಳಲಿವೆ.

**ಸರ್ನ್ ಬಗ್ಗೆ**:

- ಯುರೋಪಿಯನ್ ಆರ್ಗನೈಸೇಶನ್ ಫಾರ್ ನ್ಯೂಕ್ಲಿಯರ್ ರಿಸರ್ಚ್ ವಿಶ್ವದ ಅತಿದೊಡ್ಡ ಪರಮಾಣು ಹಾಗೂ ಭೌತಕಣ ಪ್ರಯೋಗಾಲಯವಾಗಿದೆ. ಫ್ರಾನ್ಸ್ ಮತ್ತು ಸ್ವಿಸ್ ಗಡಿ ಭಾಗದ ವಾಯುವ್ಯ ಜಿನೀವಾ ನಗರದಲ್ಲಿ ನೆಲೆಗೊಂಡಿದೆ. ಸರ್ನ್ ಅನ್ನು 1954ರಲ್ಲಿ ಸ್ಥಾಪಿಸಲಾಯಿತು.

**ಸದಸ್ಯ ರಾಷ್ಟ್ರಗಳು**:

- ಸರ್ನ್ ಒಟ್ಟು 22 ಸದಸ್ಯ ರಾಷ್ಟ್ರಗಳು, ನಾಲ್ಕು ಸಹ ಸದಸ್ಯ ರಾಷ್ಟ್ರಗಳು ಹಾಗೂ ಮೂರು ಅಂತಾರಾಷ್ಟ್ರೀಯ ಸಂಸ್ಥೆಗಳು ವೀಕ್ಷಣಾ ಸ್ಥಾನಗಳನ್ನು ಹೊಂದಿವೆ.
- ಭಾರತ, ಪಾಕಿಸ್ತಾನ, ಟರ್ಕಿ ಮತ್ತು ಉಕ್ರೇನ್ ಸರ್ನ್ ನ ಸಹ ಸದಸ್ಯ ರಾಷ್ಟ್ರಗಳು.

**ಸರ್ನ್ ನ ಕಾರ್ಯಗಳೇನು?**

- ವಿಜ್ಞಾನಿಗಳು ಮತ್ತು ಎಂಜನಿಯರ್ ಗಳಿಗೆ ಅತ್ಯಾಧುನಿಕ ವೈಜ್ಞಾನಿಕ ಉಪಕರಣ ಮತ್ತು ಸುಧಾರಿತ ಕಂಪ್ಯೂಟಿಂಗ್ ವ್ಯವಸ್ಥೆಗಳ ಮೂಲಕ ವಿಶ್ವದ ಮೂಲಭೂತ ರಚನೆಯ ಬಗ್ಗೆ ಅಧ್ಯಯನ ನಡೆಸಲು ಸಹಾಯ ಮಾಡುತ್ತಿದೆ. ಅಲ್ಲದೇ ಕಣ ವೇಗವರ್ಧಕಗಳು ಸೇರಿದಂತೆ ಉನ್ನತ ಶಕ್ತಿ ಭೌತವಿಜ್ಞಾನ ಸಂಶೋಧನೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತಿದೆ.

**ಸರ್ನ್ ಸಾಧನೆ:**

- ದೇವ ಕಣ ಸಂಶೋಧನೆಗೆ ಸಂಬಂಧಿಸಿದ ಹಿಗ್ಸ್ ಬೊಸನ್ ಸಂಶೋಧನೆ ನಡೆಸಲು "ಲಾರ್ಜ್ ಹಾಡ್ರನ್ ಕೊಲೈಡರ್ (Large Hadron Collider)" ಸ್ಥಾಪಿಸಿ ಸಂಶೋಧನೆ ನಡೆಸುತ್ತಿರುವುದು ಸರ್ನ್ ಮಹತ್ವದ ಸಂಶೋಧನೆಗಳಲ್ಲಿ ಒಂದಾಗಿದೆ.

**ಭಾರತ-ಸರ್ನ್:**

- ಭಾರತ ಮತ್ತು ಸರ್ನ್ ನ ಸ್ನೇಹ ಸುಮಾರು 50 ವರ್ಷಗಳಷ್ಟು ಹಳೆಯದು. ಸರ್ನ್ ನ ವಿವಿಧ ಯೋಜನೆಗಳಲ್ಲಿ ಭಾರತದ ವಿಜ್ಞಾನಿಗಳು, ಎಂಜನಿಯರ್ ಗಳು ಮತ್ತು ತಂತ್ರಜ್ಞನರು ಸಕ್ರಿಯವಾಗಿ ಪಾಲ್ಗೊಂಡಿದ್ದು, ಯೋಜನೆಗಳ ಯಶಸ್ವಿಗೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.
- 1991 ರಲ್ಲಿ ಭಾರತ-ಸರ್ನ್ ಸಹಕಾರ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ವೈಜ್ಞಾನಿಕ ಸಹಕಾರಕ್ಕೆ ಮುನ್ನಡೆ ಬರೆದವು. ಅಂದಿನಿಂದ ಭಾರತ ಮತ್ತು ಸರ್ನ್ ಅನೇಕ ಸಹಕಾರ ಒಪ್ಪಂದಗಳಿಗೆ ಸಹಿ ಹಾಕಿವೆ.

- ಲಾರ್ಜ್ ಹಾಡ್ರನ್ ಕೊಲೈಡರ್ (Large Hadron Collider)" ಸ್ಥಾಪನೆ ಹಾಗೂ ಅದಕ್ಕೆ ಬೇಕಾದ ಬಿಡಿ ಉಪಕರಣಗಳ ಪೂರೈಕೆಗೆ ಭಾರತದ ವಿಜ್ಞಾನಿಗಳ ಆಗಾಧವಾದ ಕೊಡುಗೆಯನ್ನು ನೀಡಿದ್ದಾರೆ.

**ಪಿನಾಕ ರಾಕೆಟ್ ಉಡಾವಣೆ ಯಶಸ್ವಿಯಾಗಿ ನಡೆಸಿದ ಡಿಆರ್ಡಿಒ**



ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್ಡಿಒ) ನಿಖರವಾಗಿ ಗುರಿ ತಲುಪುವ ಸಾಮರ್ಥ್ಯ ಹೊಂದಿರುವ ಗೈಡೆಡ್ ಪಿನಾಕ ರಾಕೆಟ್ ಉಡಾವಣಾ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಿದೆ. ಒಡಿಶಾದ ಚಂಡಿಪುರ್‌ನ ಸಮಗ್ರ ಪರೀಕ್ಷಾ ವಲಯ-ಐಟಿಆರ್‌ನಿಂದ ಪಿನಾಕ ರಾಕೆಟ್ ಹೊಸ ನಮೂನೆ ಉಡಾವಣೆ ಹಾರಾಟ ಪರೀಕ್ಷೆಯನ್ನು ಯಶಸ್ವಿಯಾಗಿ ನಡೆಸಲಾಯಿತು. ಪರೀಕ್ಷೆ ಸಮಯದಲ್ಲಿ ನಿಖರವಾಗಿ ಗುರಿ ತಲುಪುವ ಮೂಲಕ ಕ್ಷಿಪಣಿ ಸಮರ್ಥವಾಗಿದೆ.

**ನಿಖರ ಗುರಿ ತಲುಪುವ ಪಿನಾಕ:**

- ಪಿನಾಕ ರಾಕೆಟ್ ಮಾರ್ಕ್-II ನ ಪರಿವರ್ತಿತ ಆವೃತ್ತಿಯೆ ಗೈಡೈಡ್ ಪಿನಾಕ ಅಥವಾ ನಿಖರ ಗುರಿ ತಲುಪುವ ಪಿನಾಕ. ಪಿನಾಕ ರಾಕೆಟ್ ಅನ್ನು ಡಿಆರ್ಡಿಒ, ಎಡ್ರಿಇ ಪುಣೆ ಹಾಗೂ ಆರ್ ಸಿಐ ಹೈದ್ರಾಬಾದ್ ಜಂಟಿಯಾಗಿ ಅಭಿವೃದ್ಧಿಪಡಿಸಿವೆ.
- ಪಿನಾಕ ರಾಕೆಟ್ ವಾಯುಮಾರ್ಗ, ಮಾರ್ಗದರ್ಶನ ಮತ್ತು ನಿಯಂತ್ರಣ ಕಿಟ್‌ಗಳನ್ನು ಒಳಗೊಂಡಿದ್ದು ಗುರಿ ತಲುಪುವ ನಿಖರತೆಯನ್ನು ಹೆಚ್ಚಿಸಿದೆ.

**ಹಿರಿಯ ಖಭೌತ ವಿಜ್ಞಾನಿ ಸಿ. ವಿ. ವಿಶ್ವೇಶ್ವರ ನಿಧನ**



ಹಿರಿಯ ಖಭೌತ (ಆಸ್ಟ್ರೋಫಿಸಿಕ್ಸ್) ವಿಜ್ಞಾನಿ, ಕನ್ನಡದ ಸಿ.ವಿ. ವಿಶ್ವೇಶ್ವರ (78) ಮರಣ ಹೊಂದಿದರು. ವಿಶ್ವೇಶ್ವರ ರವರು ಕಪ್ಪು ರಂಧ್ರಗಳ ಕುರಿತ ಸಂಶೋಧನೆ ನಡೆಸುವ ಮೂಲಕ ಗುರುತ್ವದ ಅಲೆಗಳ ಪತ್ತೆಗೆ ಚಾಲನೆ ನೀಡಿದವರಲ್ಲಿ ಒಬ್ಬರಾಗಿದ್ದರು.

**ವಿ.ವಿ. ವಿಶ್ವೇಶ್ವರ ಬಗ್ಗೆ:**

- ವಿಶ್ವೇಶ್ವರ ಅವರು, ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಅಧ್ಯಯನ ಮಾಡಿದರು. ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಪದವಿ ವ್ಯಾಸಂಗ ಮಾಡಿದ್ದ ಅವರು, ಮೇರಿಲ್ಯಾಂಡ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಪೂರೈಸಿದ್ದರು.
- ಪಿಎಚ್.ಡಿ ಸಂಶೋಧನೆ ಸಂದರ್ಭದಲ್ಲಿ ತಮ್ಮ ಮಾರ್ಗದರ್ಶಕರಾಗಿದ್ದ ಪ್ರೊ. ಚಾರ್ಲ್ಸ್ ಮಿಸ್ನರ್ ಅವರ ಸೂಚನೆಯಂತೆ ಕಪ್ಪು ರಂಧ್ರಗಳ ಕುರಿತು ಸಂಶೋಧನೆ ನಡೆಸಿದ್ದರು. ನಮಗೆ ದೊರಕುವ, ಕಪ್ಪು ರಂಧ್ರದ ಕಡೆಯಿಂದ ಬರುತ್ತಿರುವ ಅಲೆಗಳು ಸ್ಥಿರ ಕಂಪನಾಂಕವನ್ನು ಹೊಂದಿದ್ದು, ಅವುಗಳ ಪಾರ (ಆಯಂಪ್ಲಿಟ್ಯೂಡ್) ಮಾತ್ರ ಕಡಿಮೆ ಆಗುತ್ತಾ ಹೋಗುತ್ತದೆ (ಕ್ವಾಸಿ ನಾರ್ಮಲ್ ಮೋಡ್ಸ್) ಎಂಬುದನ್ನು ನಿರೂಪಿಸಿದ್ದರು.
- ರಾಮನ್ ರಿಸರ್ಚ್ ಇನ್ಸಿಟ್ಯೂಟ್ ಹಾಗೂ ಇಂಡಿಯನ್ ಇನ್ಸಿಟ್ಯೂಟ್ ಆಫ್ ಆಸ್ಟ್ರೋಫಿಸಿಕ್ಸ್‌ನಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಅವರು, ಹಲವು ವಿಶ್ವವಿದ್ಯಾಲಯಗಳಿಗೆ ಸಂದರ್ಶಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು.

- ಜವಾಹರಲಾಲ್ ನೆಹರೂ ತಾರಾಲಯದ ಸಂಸ್ಥಾಪಕ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು. ಶಾಸ್ತ್ರೀಯ ಸಂಗೀತದ ಬಗೆಗೂ ಅವರಿಗೆ ಆಳವಾದ ಜ್ಞಾನವಿತ್ತು. 'ಐನ್‌ಸ್ಟೈನ್ಸ್ ಎನಿಗ್ಮಾ' (ಬ್ಲ್ಯಾಕ್ ಹೋಲ್ಸ್ ಇನ್ ಮೈ ಬಬಲ್ ಬಾತ್) ಸೇರಿದಂತೆ ಹಲವು ಕೃತಿಗಳನ್ನು ಬರೆದಿದ್ದರು. ಕನ್ನಡದಲ್ಲೂ ಅವರು ವಿಜ್ಞಾನ ಸಾಹಿತ್ಯವನ್ನು ಕಟ್ಟಿಕೊಟ್ಟಿದ್ದರು.

## ಇಸ್ರೋದಿಂದ ಏಕಕಾಲಕ್ಕೆ ಒಂದೇ ರಾಕೆಟ್ ನಲ್ಲಿ 103 ಉಪಗ್ರಹಗಳ ಉಡಾವಣೆ



ಏಕಕಾಲಕ್ಕೆ ಒಂದೇ ರಾಕೆಟ್ ಮೂಲಕ 103 ಉಪಗ್ರಹಗಳನ್ನು ಉಡಾಯಿಸಲು ಭಾರತೀಯ ಬಾಹ್ಯಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಸಜ್ಜಾಗಿದೆ. ಫೆಬ್ರವರಿ ಮೊದಲ ವಾರದಲ್ಲಿ ಇಸ್ರೋ ಈ ಐತಿಹಾಸಿಕ ಸಾಧನೆಯನ್ನು ಕೈಗೊಳ್ಳಲಿದೆ. ಪಿಎಸ್ಎಲ್ವಿ-37 ರಾಕೆಟ್ ಬಳಸಿ ಸತೀಶ್ ದವನ್ ಬಾಹ್ಯಕಾಶ ಕೇಂದ್ರದಿಂದ ಈ ಉಪಗ್ರಹಗಳನ್ನು ಉಡಾಯಿಸಲಾಗುವುದು. ಭಾರತದ ಉಪಗ್ರಹ ಸೇರಿದಂತೆ ವಿವಿಧ ರಾಷ್ಟ್ರಗಳ ಉಪಗ್ರಹಗಳನ್ನು ಈ ಮಿಷನ್ ಅಡಿ ಉಡಾಯಿಸಲಾಗುವುದು.

**ಪ್ರಮುಖಾಂಶಗಳು:**

- ಭಾರತದ ಅತ್ಯಂತ ಯಶಸ್ವೀ ಉಡಾವಣಾ ನೌಕೆ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್(ಪಿಎಸ್ಎಲ್ವಿ)-ಸಿ37 ಉಡಾವಣಾ ವಾಹಕದಿಂದ 103 ಉಪಗ್ರಹಗಳ ಉಡಾವಣೆ ಮಾಡಲಾಗುವುದು.
- ಉಪಗ್ರಹಗಳು ಒಮ್ಮೆ ಉಡಾವಣಾ ಕಕ್ಷೆಯ ಸ್ಥಿತಿ ತಲುಪುತ್ತಿದ್ದಂತೆ, ವಿವಿಧ ದಿಕ್ಕುಗಳಲ್ಲಿ ಉಡಾವಣಾ ವಾಹನದಿಂದ ಬೇರ್ಪಡೆಗೊಳ್ಳಲಿವೆ. ಪ್ರತ್ಯೇಕತೆಯ ಕೋನ ಮತ್ತು ಸಮಯ ಪ್ರತಿ ಉಪಗ್ರಹಗಳಿಗೂ ಬೇರೆ ಬೇರೆ ಆಗಿರಲಿದೆ.
- ಇಸ್ರೇಲ್, ಕಜಕಿಸ್ತಾನ್, ನೆದರ್ಲ್ಯಾಂಡ್, ಸ್ವೀಜರ್ಲ್ಯಾಂಡ್ ಮತ್ತು ಅಮೆರಿಕ ಜರ್ಮನಿ ಸೇರಿದಂತೆ ಮೂರು ಸ್ವದೇಶಿ ಉಪಗ್ರಹಗಳಾದ ಕಾರ್ಟೋಸ್ಯಾಟ್-2 ಸಿರೀಸ್, 730 ಕೆಜಿ, ಐಎನ್ಎಸ್-1ಎ ಮತ್ತು ಐಎನ್ಎಸ್-1ಬಿ 30 ಕೆಜಿಯ ಉಪಗ್ರಹಗಳನ್ನು ಏಕಕಾಲಕ್ಕೆ ಇಸ್ರೋ ಉಡಾವಣೆ ಮಾಡಲಿದೆ.
- ಈ ಹಿಂದೆ ಒಂದೇ ರಾಕೆಟ್‌ನಲ್ಲಿ ಅತಿ ಹೆಚ್ಚು ಸಂಖ್ಯೆಯ ಉಪಗ್ರಹಗಳ ಉಡಾವಣೆ ಮಾಡಿದ ದಾಖಲೆ ರಷ್ಯಾ ಹೆಸರಲ್ಲಿದ್ದು, ರಷ್ಯಾದ ಡ್ನೆಪರ್ ಸಿಲೋ ರಾಕೆಟ್ ಮೂಲಕ 2014ರ ಜೂನ್ 19 ರಂದು 33 ಉಪಗ್ರಹಗಳನ್ನು ಒಂದೇ ಬಾರಿ ಉಡಾವಣೆ ಮಾಡಲಾಗಿತ್ತು
- ಇದೀಗ ಏಕಕಾಲದಲ್ಲಿ 103 ಉಪಗ್ರಹಗಳನ್ನು ಯಶಸ್ವಿಯಾಗಿ ಉಡಾಯಿಸಿದ್ದೆ ಆದರೆ ಏಕಕಾಲಕ್ಕೆ ಅತೀ ಹೆಚ್ಚು ಉಪಗ್ರಹಗಳನ್ನು ಉಡಾಯಿಸಿದ ರಾಷ್ಟ್ರಗಳ ಪಟ್ಟಿಯಲ್ಲಿ ಭಾರತ ಅಗ್ರಸ್ಥಾನಕ್ಕೇರಲಿದೆ.

## ಅಬಾಬೀಲ್ ಖಂಡಾಂತರ ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಿದ ಪಾಕಿಸ್ತಾನ



ಮೇಲ್ಮೈಯಿಂದ ಮೇಲ್ಮೈಗೆ ಸಾಗುವ ಮಧ್ಯಮ ಶ್ರೇಣಿಯ ಖಂಡಾಂತರ ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಿರುವುದಾಗಿ ಪಾಕಿಸ್ತಾನ ಹೇಳಿದೆ. ಪರಮಾಣು ಸಿಡಿತಲೆ ಹಾಗೂ ಸಾಂಪ್ರದಾಯಿಕ ಸಿಡಿಲತಲೆಗಳನ್ನು ಹೊತ್ತೊಯ್ಯುವ ಹಾಗೂ ಹಲವು ಗುರಿಗಳನ್ನು ಕರಾರುವಕ್ಕಾಗಿ ತಲುಪಬಲ್ಲ ಕ್ಷಿಪಣಿ, ಶತ್ರುಗಳ ರಾಡಾರ್‌ಗಳನ್ನು ಹೊಡೆದುರುಳಿಸಬಲ್ಲ ಸಾಮರ್ಥ್ಯವನ್ನು ಇದು ಹೊಂದಿರುವುದಾಗಿ ಹೇಳಲಾಗಿದೆ.

**ಪ್ರಮುಖಾಂಶಗಳು:**

- ಮಲ್ಟಿಪಲ್ ಇಂಡಿಪೆಂಡೆಂಟ್ ರೀ ಎಂಟ್ರಿ ವೆಹಿಕಲ್ (MIRV) ತಂತ್ರಜ್ಞಾನವನ್ನು ಹೊಂದಿರುವ ಈ ಕ್ಷಿಪಣಿ ಸುಮಾರು 2,200 ಕಿ.ಮೀ ದೂರದವರೆಗೆ ಸಾಗಬಲ್ಲದು. ಎಐಆರ್ ವಿ ತಂತ್ರಜ್ಞಾನವನ್ನು ಅಳವಡಿಸಿಕೊಂಡಿರುವ ಪಾಕಿಸ್ತಾನದ ಮೊದಲ ಕ್ಷಿಪಣಿ ಇದಾಗಿದೆ.
- ಭಾರತದ ಪೃಥ್ವಿ ಹಾಗೂ ಅಶ್ವಿನ್ ಕ್ಷಿಪಣಿ ವ್ಯವಸ್ಥೆಗೆ ಪ್ರತಿರೋಧವಾಗಿ ಪಾಕಿಸ್ತಾನ ಈ ಕ್ಷಿಪಣಿ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲಾಗಿದೆ.

**ಡೆಂಗ್ಯೂ, ಚಿಕನ್ ಗೂನ್ಯಾ, ಮತ್ತು ಜಿಕಾ ರೋಗಗಳನ್ನು ನಿಯಂತ್ರಿಸಲು ಕುಲಾಂತರಿ ಸೊಳ್ಳೆ**



ಡೆಂಗ್ಯೂ, ಚಿಕನ್ ಗೂನ್ಯಾ ಹಾಗೂ ಜಿಕಾ ದಂತಹ ಮಾರಕ ರೋಗಗಳನ್ನು ನಿಯಂತ್ರಿಸಲು ಕುಲಾಂತರಿ ಸೊಳ್ಳೆಗಳನ್ನು ಅಭಿವೃದ್ಧಿಪಡಿಸಲಾಗಿದ್ದು, ಈ ತಂತ್ರಜ್ಞಾನದ ಸಾಮರ್ಥ್ಯವನ್ನು ಪರೀಕ್ಷಿಸುವ ಸಲುವಾಗಿ ಮಹಾರಾಷ್ಟ್ರದ ದವಲ್ವಾಡಿ, ಬದ್ನಪುರ ಹಾಗೂ ಜಲ್ನ ಜಿಲ್ಲೆಗಳಲ್ಲಿ ಈ ಸೊಳ್ಳೆಗಳನ್ನು ಪ್ರಾಯೋಗಿಕವಾಗಿ ಬಿಡುಗಡೆ ಮಾಡಲಾಗಿದೆ. ಆಕ್ಸಿಟೆಕ್ ಸಂಸ್ಥೆ ಈ ಪ್ರಯೋಗವನ್ನು ಕೈಗೊಳ್ಳಲಿದ್ದು, ಪ್ರಬಲ ಮಾರಕ ವಂಶವಾಹಿನಿಗಳನ್ನು (Release of insects carrying dominant lethal genes (RIDL)) ಒಳಗೊಂಡಿರುವ ಸೊಳ್ಳೆಗಳನ್ನು ಬಿಡುಗಡೆ ಮಾಡಲಿದೆ.

**ಪ್ರಮುಖಾಂಶಗಳು**:

- ಪ್ರಬಲ ಮಾರಕ ವಂಶವಾಹಿನಿಗಳನ್ನು ಒಳಗೊಂಡಿರುವ ಕುಲಾಂತರಿ ಗಂಡು ಸೊಳ್ಳೆಗಳನ್ನು ಈ ತಂತ್ರಜ್ಞಾನದಲ್ಲಿ ಬಳಸಲಾಗುವುದು. ಈ ಗಂಡು ಸೊಳ್ಳೆಗಳು ಹೆಣ್ಣು ಸೊಳ್ಳೆಗಳೊಂದಿಗೆ ಕೂಡಿದ ಮಾರಕ ವಂಶವಾಹಿನಿಗಳು ಮರಿ ಸೊಳ್ಳೆಗಳಿಗೆ ವರ್ಗಾವಣೆಗೊಳ್ಳಲಿವೆ.
- ಈ ವಂಶವಾಹಿನಿಗಳನ್ನು ಒಳಗೊಂಡಿರುವ ಸೊಳ್ಳೆಗಳು ದೊಡ್ಡದಾಗುವ ಹೊತ್ತಿಗೆ ಸಾಯುತ್ತವೆ. ಗಂಡು ಸೊಳ್ಳೆಗಳು ಮನುಷ್ಯರಿಗೆ ಕಚ್ಚದೆ ಇರುವ ಕಾರಣ ಡೆಂಗ್ಯೂ, ಚಿಕನ್ ಗುನ್ಯಾ ಹಾಗೂ ಜಿಕಾ ಕಾಯಿಲೆಗಳು ಹರಡುವ ಪ್ರಮಾಣ ತೀರಾ ಕಡಿಮೆ.
- ಆಕ್ಸಿಟೆಕ್ ಸೊಳ್ಳೆಗಳನ್ನು ಮೊದಲು ಬ್ರೆಜಿಲ್ ನಲ್ಲಿ ಬಿಡುಗಡೆಗೊಳಿಸಲಾಗಿತ್ತು. ಸ್ಥಳೀಯ ಸೊಳ್ಳೆಗಳ ಪ್ರಮಾಣವನ್ನು ಶೇ 90 ರಷ್ಟು ನಾಶಗೊಳಿಸಲು ಯಶಸ್ವಿಯಾಗಿದ್ದವು. ಕ್ರಿಮಿನಾಶಕದಿಂದ ಶೇ 30% ರಷ್ಟು ಸೊಳ್ಳೆಗಳನ್ನು ನಾಶಗೊಳಿಸಲು ಮಾತ್ರ ಸಾಧ್ಯವಾಗಿತ್ತು.
- **ಉಪಯೋಗ**: ಈ ತಂತ್ರಜ್ಞಾನ ಪರಿಸರ ಸ್ನೇಹಿಯಾಗಿದ್ದು, ಮಾರಕ ರೋಗ ತರುವ ಸೊಳ್ಳೆಗಳಂತಹ ಕ್ರಿಮಿಗಳನ್ನು ನಾಶಪಡಿಸುವಲ್ಲಿ ಪರಿಣಾಮಕಾರಿಯಾಗಿದೆ. ಅಲ್ಲದೇ ಈ ತಂತ್ರಜ್ಞಾನದಿಂದ ಯಾವುದೇ ವಿಷಕಾರಿ ವಸ್ತುಗಳು ಉಳಿಯುವುದಿಲ್ಲ. ಶೇ 99% ಮರಿಗಳನ್ನು ಇದರಿಂದ ನಾಶಪಡಿಸಬಹುದಾಗಿದೆ.

**"ಕಿರಮೆಕಿ-2" ಪ್ರಪ್ರಥಮ ಮಿಲಿಟರಿ ಸಂವಹನ ಉಪಗ್ರಹವನ್ನು ಉಡಾಯಿಸಿದ ಭಾರತ**



ಜಪಾನ್ ತನ್ನ ಮೊದಲ ಮಿಲಿಟರಿ ಸಂವಹನ ಉಪಗ್ರಹ "ಕಿರಮೆಕಿ-2 (Kirameki-2)" ಅನ್ನು ಯಶಸ್ವಿಯಾಗಿ ಉಡಾಯಿಸಿದೆ. ದಕ್ಷಿಣ ಜಪಾನಿನ ತನೆಗಶಿಮ ಬಾಹ್ಯಕಾಶ ಕೇಂದ್ರದಿಂದ H-2A ರಾಕೆಟ್ ಬಳಸಿ ಈ ಉಪಗ್ರಹವನ್ನು ಕಕ್ಷೆಗೆ ಸೇರಿಸಲಾಯಿತು. ಉಡಾವಣೆಗೊಂಡ ನಂತರ ರಾಕೆಟ್ ನಿಂದ ಬೇರ್ಪಡೆಗೊಂಡು ನಿಗದಿತ ಕಕ್ಷೆಗೆ ಉಪಗ್ರಹ ಸೇರ್ಪಡೆಗೊಂಡಿತು.

**ಪ್ರಮುಖಾಂಶಗಳು**:

- ಚೀನಾ ಹಾಗೂ ಉತ್ತರ ಕೊರಿಯಾದ ಕ್ಷಿಪಣಿ ಹಾವಳಿ ಹೆಚ್ಚುತ್ತಿರುವ ಹಿನ್ನಲೆಯಲ್ಲಿ ಜಪಾನ್ ತನ್ನ ಪ್ರಸ್ತುತ ಮಿಲಿಟರಿ ಸಂವಹನ ಜಾಲವನ್ನು ಉತ್ತಮಪಡಿಸಲು ಈ ಉಪಗ್ರಹವನ್ನು ಅಭಿವೃದ್ದಿಪಡಿಸಿದೆ.
- ಪ್ರಸ್ತುತ ಕಾರ್ಯನಿರ್ವಹಣೆಯಲ್ಲಿರುವ ಮೂರು ಉಪಗ್ರಹಗಳನ್ನು ಬದಲಿಸಲು ಉಡಾಯಿಸಲಾದ ಮೊದಲ ಉಪಗ್ರಹ ಇದಾಗಿದ್ದು, ಮಿಲಿಟರಿ ಘಟಕಗಳ ನಡುವೆ ವೇಗವಾಗಿ ಸಂವಹನ ನಡೆಸಲು ಸಾಧ್ಯವಾಗಲಿದೆ.
- ಉತ್ತರ ಕೊರಿಯಾದಿಂದ ಎದುರಾಗುವ ಕ್ಷಿಪಣಿ ದಾಳಿ ಭೀತಿ, ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾದ ಮಿಲಿಟರಿ ಕಾರ್ಯಾಚರಣೆ ಸೇರಿದಂತೆ ನೈಸರ್ಗಿಕ ವಿಕೋಪ ಸಂದರ್ಭದಲ್ಲಿ ವೇಗವಾಗಿ ಸಂವಹನ ಸಾಧಿಸಲು ಇದು ಬಳಕೆಯಾಗಲಿದೆ.
- ಅಲ್ಲದೇ ಜಪಾನಿನಿಂದ ಹೊರಗಡೆ ಅಂದರೆ ಸೊಮಾಲಿ ತೀರಾ ಪ್ರದೇಶ ಹಾಗೂ ದಕ್ಷಿಣ ಸೂಡಾನ್ ನಲ್ಲಿ ಕಾರ್ಯನಿರ್ವಹಿಸುತ್ತಿರುವ ಜಪಾನಿ ಮಿಲಿಟರಿ ಪಡೆಗಳು ಸಹ ಇದರ ಉಪಯೋಗವನ್ನು ಪಡೆದುಕೊಳ್ಳಬಹುದಾಗಿದೆ.

**<u>ಸೌರ ವಿದ್ಯುತ್ ನೀತಿ 2014-2021ಕ್ಕೆ ತಿದ್ದುಪಡಿ ತರಲು ರಾಜ್ಯ ಸರ್ಕಾರ ಒಪ್ಪಿಗೆ</u>**



ರಾಜ್ಯ ಸರ್ಕಾರ ಸೌರ ವಿದ್ಯುತ್ ನೀತಿ 2014-2021ಕ್ಕೆ ತಿದ್ದುಪಡಿ ತರಲು ಸಮ್ಮತಿ ಸೂಚಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ರವರ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಕೆಲವು ತಿದ್ದುಪಡಿ ತರಲು ಒಪ್ಪಿಗೆ ಸೂಚಿಸಲಾಗಿದೆ.

**ತಿದ್ದುಪಡಿಯ ಪ್ರಮುಖಾಂಶಗಳು**:

- ಈಗಿರುವ 2 ಸಾವಿರ ಮೆಗಾವಾಟ್ ಗುರಿಯನ್ನು 6 ಸಾವಿರ ಮೆಗಾವಾಟ್ಗೆ ಹೆಚ್ಚಿಸಲು ನೀತಿಯಡಿ ಆದ್ಯತೆ ನೀಡಲಾಗಿದೆ. ಪ್ರಸ್ತುತ ರಾಜ್ಯದಲ್ಲಿ 24,700 ಮೆಗಾವಾಟ್ ಸೌರವಿದ್ಯುತ್ ಉತ್ಪಾದನೆ ಸಾಮರ್ಥ್ಯವಿದ್ದು, ಇದನ್ನು ಸದ್ಬಳಕೆ ಮಾಡಿಕೊಳ್ಳುವುದು ಇದರ ಉದ್ದೇಶ.
- ಸೌರ ಮೇಲ್ಛಾವಣಿ ಯೋಜನೆ ಹೊರತುಪಡಿಸಿ ಒಂದು ತಾಲ್ಲೂಕಿಗೆ ಗರಿಷ್ಠ 200 ಮೆಗಾವಾಟ್ ಉತ್ಪಾದನಾ ಸಾಮರ್ಥ್ಯದ ಘಟಕಗಳಿಗೆ ಮಾತ್ರ ಒಪ್ಪಿಗೆ.
- ಘಟಕ ಸ್ಥಾಪನೆಗೆ ಖಾಸಗಿಯವರಿಗೆ ಭೂಮಿ ಒದಗಿಸಲು ಖಾಸಗಿ ಭೂ ಬ್ಯಾಂಕ್ ಸ್ಥಾಪನೆ ಮಾಡಲು ಹಿಂದೆ ನಿರ್ಧರಿಸಲಾಗಿತ್ತು. ರೈತರು, ರೈತರ ಗುಂಪು ಭೂಮಿ ಬ್ಯಾಂಕ್ ಮಾಡಿ 30 ವರ್ಷ ಗುತ್ತಿಗೆ ಆಧಾರದ ಮೇಲೆ ನೀಡಲು ಅವಕಾಶ ನೀಡಲಾಗಿತ್ತು. ತಿದ್ದುಪಡಿ ನೀತಿಯಲ್ಲಿ ಭೂಮಿ ಬ್ಯಾಂಕ್ ಯೋಜನೆ ಕೈಬಿಡಲಾಗಿದೆ.
- ಕೋಲಾರ, ತುಮಕೂರಿಗೆ ಅಲ್ಲದೇ, ಎಲ್ಲಾ ತಾಲ್ಲೂಕುಗಳಲ್ಲಿಯೂ ಸೌರವಿದ್ಯುತ್ ಉತ್ಪಾದನಾ ಘಟಕ ಸ್ಥಾಪನೆಗೆ ಪ್ರೋತ್ಸಾಹ.
- 'ಸೋಲಾರ್ ಎನರ್ಜಿ ಸೆಂಟರ್ ಆಫ್ ಎಕ್ಸಲೆನ್ಸ್ ಅಂಡ್ ಇನ್ಕ್ಯುಬೇಶನ್ ಸೆಂಟರ್' ಸ್ಥಾಪಿಸಲು ಒಪ್ಪಿಗೆ. ಈ ಕೇಂದ್ರದ ಮೂಲಕ ಸೌರವಿದ್ಯುತ್ ಕ್ಷೇತ್ರದ ತಂತ್ರಜ್ಞಾನ, ಕೌಶಲ ಅಭಿವೃದ್ಧಿ, ಸಂಶೋಧನೆ ಪ್ರೋತ್ಸಾಹಿಸಲಾಗುವುದು.
- 100 ಎಕರೆಗಿಂತ ಹೆಚ್ಚಿನ ಪ್ರದೇಶದಲ್ಲಿ ಖಾಸಗಿ ಮತ್ತು ಸಾರ್ವಜನಿಕ ಸಹಭಾಗಿತ್ವದಲ್ಲಿ ಯೋಜನೆ ಅನುಷ್ಠಾನ ಮಾಡುವವರಿಗೆ ₹1 ಕೋಟಿ ಹಣಕಾಸು ನೆರವು ನೀಡುವ ಯೋಜನೆಯನ್ನು ಸರ್ಕಾರ ವಾಪಸು ಪಡೆಯಲು ನಿರ್ಧಾರ.

- ಸೌರಶಕ್ತಿ ಪಾರ್ಕ್ ಆರಂಭಿಸಲು ಅರ್ಜಿ ಶುಲ್ಕ ₹ 1 ಲಕ್ಷ, ಸೌಲಭ್ಯ ಒದಗಿಸಲು 1 ಮೆಗಾವಾಟ್ಗೆ ₹ 25 ಸಾವಿರ ಶುಲ್ಕ ವಿಧಿಸಲು ತಿದ್ದುಪಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಹೊಲಗದ್ದೆಗಳಲ್ಲಿ ಸೌರವಿದ್ಯುತ್ ಉತ್ಪಾದಿಸುವ ರೈತರಿಗೆ ಪ್ರೋತ್ಸಾಹ ನೀಡುವ ಯೋಜನೆಯನ್ನು ಕೈಬಿಡಲಾಗಿದೆ.

## ಕ್ರೀಡೆ

### ಪಾಕಿಸ್ತಾನದ ಹಿರಿಯ ಕ್ರಿಕೆಟಿಗ ಇಮ್ತಿಯಾಜ್ ಅಹ್ಮದ್ ನಿಧನ



ಪಾಕಿಸ್ತಾನದ ಅತ್ಯಂತ ಹಿರಿಯ ಕ್ರಿಕೆಟಿಗ ಎನಿಸಿದ್ದ ಇಮ್ತಿಯಾಜ್ ಅಹ್ಮದ್ ಅವರು ಕೊನೆಯುಸಿರೆಳದರು. ಅಹ್ಮದ್ ಅವರು ಹತ್ತು ವರ್ಷಗಳ ಕಾಲ ರಾಷ್ಟ್ರೀಯ ತಂಡವನ್ನು ಪ್ರತಿನಿಧಿಸಿದ್ದರು.

- ಇಮ್ತಿಯಾಜ್ ಅಹ್ಮದ್ ರವರು 41 ಟೆಸ್ಟ್ ಮತ್ತು 180 ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯಗಳನ್ನು ಆಡಿದ್ದಾರೆ.
- 1952ರ ಅಕ್ಟೋಬರ್ 16ರಂದು ಪಾಕಿಸ್ತಾನ ತಂಡ ತನ್ನ ಮೊದಲ ಟೆಸ್ಟ್ ಪಂದ್ಯವನ್ನು ದೆಹಲಿಯ ಫಿರೋಜ್ ಷಾ ಕೋಟ್ಲಾ ಕ್ರೀಡಾಂಗಣ ದಲ್ಲಿ ಆಡಿದ್ದ ತಂಡದಲ್ಲಿ ಇಮ್ತಿಯಾಜ್ ಅವರು ತಂಡದಲ್ಲಿದ್ದರು.
- ಇಮ್ತಿಯಾಜ್ ಅವರು 1944–45ರಿಂದ 1972–73ರವರೆಗೆ ಪ್ರಥಮ ದರ್ಜೆ ಕ್ರಿಕೆಟ್ ಟೂರ್ನಿಗಳಲ್ಲಿ ಆಡಿದ್ದರು.
- ವಿಕೆಟ್ ಕೀಪರ್ ಆಗಿದ್ದ ಇಮ್ತಿಯಾಜ್ ಟೆಸ್ಟ್‌ನಲ್ಲಿ ಒಟ್ಟು 2079 ರನ್ ಕಲೆ ಹಾಕಿದ್ದರು. ಮೂರು ಶತಕ ಹಾಗೂ 11 ಅರ್ಧಶತಕಗಳನ್ನು ಬಾರಿಸಿದ್ದಾರೆ. ಪ್ರಥಮ ದರ್ಜೆಯಲ್ಲಿ 10391 ರನ್ ಗಳಿಸಿದ್ದರು.

### ಬಿಸಿಸಿಐ ನಿಂದ ಅನುರಾಗ್ ಠಾಕೂರ್ ರವರನ್ನು ವಜಾಗೊಳಿಸಿದ ಸುಪ್ರೀಂಕೋರ್ಟ್



ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಅಧ್ಯಕ್ಷ ಸ್ಥಾನದಿಂದ ಅನುರಾಗ್ ಠಾಕೂರ್ ಬಿಸಿಸಿಐನ ಕಾರ್ಯದರ್ಶಿ ಸ್ಥಾನದಿಂದ ಅಜಯ್ ಶಿರ್ಕೆ ಅವರನ್ನು ಸುಪ್ರೀಂಕೋರ್ಟ್ ವಜಾಗೊಳಿಸಿದೆ. ಲೋಧಾ ಸಮಿತಿ ವರದಿಯನ್ನು ಅನುಷ್ಠಾನಗೊಳಿಸಲು ವಿಫಲರಾದ ಕಾರಣ ಸುಪ್ರೀಂಕೋರ್ಟ್ ಈ ಕಠಿಣ ನಿರ್ಣಯವನ್ನು ಕೈಗೊಂಡಿದೆ. ಮುಖ್ಯ ನ್ಯಾಯಮೂರ್ತಿ ಟಿ.ಎಸ್. ಠಾಕೂರ್ ಅವರ ನೇತೃತ್ವದ ನ್ಯಾಯಪೀಠ ಈ ಆದೇಶ ನೀಡಿದ್ದು ಅನುರಾಗ್ ಠಾಕೂರ್ ಮತ್ತು ಅಜಯ್ ಶಿರ್ಕೆ ಈ ಹುದ್ದೆಯಲ್ಲಿ ಮುಂದುವರೆಯಲು ಯೋಗ್ಯತೆಯನ್ನು ಹೊಂದಿಲ್ಲ ಎಂದು ಕೋರ್ಟ್ ತಿಳಿಸಿದೆ.

**ತೀರ್ಪಿನ ಮುಖ್ಯಾಂಶಗಳು:**

- ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯ ವ್ಯವಹಾರಗಳಿಂದ ದೂರ ಉಳಿಯುವಂತೆ ಈ ಇಬ್ಬರಿಗೂ ಸೂಚಿಸಲಾಗಿದೆ. ಆ ಮೂಲಕ ಭಾರತ ಕ್ರಿಕೆಟ್ ಆಟದ ಅತ್ಯುನ್ನತ ಸಂಸ್ಥೆಯಾದ ಬಿಸಿಸಿಐಯನ್ನು ಪುನರ್ ರಚಿಸಲು ಕೋರ್ಟ್ ಸಿದ್ಧತೆ ನಡೆಸಿದೆ.
- ಬಿಸಿಸಿಐನ ಆಡಳಿತವನ್ನು ನಡೆಸಲು ಆಡಳಿತ ಸಮಿತಿಯನ್ನು ರಚಿಸುವುದಾಗಿ ಕೋರ್ಟ್ ಹೇಳಿದೆ. ಜನವರಿ 19ರಂದು ಈ ಬಗ್ಗೆ ನಿರ್ಧಾರ ಪ್ರಕಟಿಸುವುದಾಗಿ ತಿಳಿಸಿದೆ.

- ಸಮಿತಿ ರಚನೆಯಾಗುವವರೆಗೆ ಬಿಸಿಸಿಐನ ಹಿರಿಯ ಉಪಾಧ್ಯಕ್ಷರು ಅಧ್ಯಕ್ಷರಾಗಿ ಕಾರ್ಯನಿರ್ವಹಿಸಲಿದ್ದಾರೆ.
- ಆಡಳಿತ ಸಮಿತಿ ರಚನೆಯಾದ ಮೇಲೆ ಸುಪ್ರೀಂಕೋರ್ಟ್ ರಚಿಸಿದ್ದ ಲೋಧಾ ಸಮಿತಿಯ ಶಿಫಾರಸ್ಸಿನಂತೆ ಬಿಸಿಸಿಐ ನಿಯಮಾವಳಿಗಳನ್ನು ರಚಿಸಲಾಗುವುದು.
- ಬಿಸಿಸಿಐನ ಪದಾಧಿಕಾರಿಗಳ ಆಯ್ಕೆಗಾಗಿ ಹಿರಿಯ ವಕೀಲರಾದ ಫಾಲಿ ನಾರಿಮನ್ ಮತ್ತು ಗೋಪಾಲ್ ಸುಬ್ರಮಣಿಯನ್ ಅವರನ್ನು ಸುಪ್ರೀಂಕೋರ್ಟ್ ಅಮಿಕಸ್ ಕ್ಯೂರಿಗಳನ್ನಾಗಿ ನೇಮಿಸಿದೆ.

**ಲೋಧಾ ಸಮಿತಿ:**

ಸುಪ್ರೀಂ ಕೋರ್ಟ್ ಜನವರಿ, 2015ರಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಯ ಆಡಳಿತ ಮಂಡಳಿಗೆ ವ್ಯಾಪಕ ಸುಧಾರಣೆ ತರಲು ಹಾಗೂ ಮೌದ್ಗಿಲ್ ಸಮಿತಿ ವರದಿಯಲ್ಲಿ ಉಲ್ಲೇಖಿಸಿದ್ದ ಐಪಿಲ್ ಮ್ಯಾಚ್ ಫಿಕ್ಸಿಂಗ್ ತಪ್ಪಿತಸ್ಥರಿಗೆ ಶಿಕ್ಷೆ ಪ್ರಮಾಣ ನಿಗದಿಪಡಿಸಲು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಾಧೀಶರಾದ ಆರ್ ಎಂ ಲೋಧಾರವರ ನೇತೃತ್ವದಲ್ಲಿ ಸಮಿತಿಯನ್ನು ರಚಿಸಿತ್ತು. ಅದರಂತೆ ಸಮಿತಿಯು ತನ್ನ ವರದಿಯಲ್ಲಿ ಬಿಸಿಸಿಐ ಆಡಳಿತದಲ್ಲಿ ಸುಧಾರಣೆ ತರಲು ಮಹತ್ವದ ಶಿಫಾರಸ್ಸುಗಳನ್ನು ನೀಡಿತ್ತು. ರಾಜಕೀಯ ವ್ಯಕ್ತಿಗಳು, ಅಧಿಕಾರಿಗಳು ಬಿಸಿಸಿಐ ಹುದ್ದೆಯಲ್ಲಿ ಇರಬಾರದು ಹಾಗೂ 70 ವರ್ಷ ಮೀರಿದವರು ಹುದ್ದೆಯಲ್ಲಿ ಮುಂದುವರೆಯಬಾರದೆಂದು ಶಿಫಾರಸ್ಸು ಮಾಡಿತ್ತು. ಅಲ್ಲದೇ ಬಿಸಿಸಿಐಗೆ ಒಂಬುಡ್ಸಮನ್ ನೇಮಕಾತಿ ಮಾಡುವಂತೆ ಸಹ ಶಿಫಾರಸ್ಸು ಮಾಡಿದೆ.

**<u>ರಾಷ್ಟ್ರೀಯ ಕ್ರೀಡಾ ನೀತಿ ರೂಪಿಸಲು ಇಂಜೇತಿ ಶ್ರೀನಿವಾಸ್ ಸಮಿತಿ ರಚಿಸಿದ ಕೇಂದ್ರ ಸರ್ಕಾರ</u>**




ಸಮಗ್ರ ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ನೀತಿಯನ್ನು ರೂಪಿಸುವ ಸಲುವಾಗಿ ಕೇಂದ್ರ ಕ್ರೀಡಾ ಸಚಿವಾಲಯವು ಸಮಿತಿಯೊಂದನ್ನು ರಚಿಸಿದೆ. ಕ್ರೀಡಾ ಸಚಿವಾಲಯದ ಕಾರ್ಯದರ್ಶಿ ಇಂಜೇತಿ ಶ್ರೀನಿವಾಸ್ ರವರು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಪ್ರಸ್ತುತ ಜಾರಿಯಲ್ಲಿರುವ ಕ್ರೀಡಾ ಆಡಳಿತ ಚೌಕಟ್ಟು, ಕ್ರೀಡಾ ಆಡಳಿತಕ್ಕೆ ಸಂಬಂಧಿಸಿದಂತೆ ವಿಷಯಗಳು ಹಾಗೂ ಕ್ರೀಡಾ ಆಡಳಿತದಲ್ಲಿ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ಸಮಿತಿಯು ಅಧ್ಯಯನ ನಡೆಸಲಿದೆ. ಅಲ್ಲದೇ ಸಮಗ್ರ ಕ್ರೀಡಾ ನೀತಿಯನ್ನು ರೂಪಿಸಲು ನ್ಯಾಯಾಲಗಳ ತೀರ್ಪು ಹಾಗೂ ಅತ್ಯುತ್ತಮ ಅಂತಾರಾಷ್ಟ್ರೀಯ ಕಾರ್ಯಾಚರಣೆಗಳ ಬಗ್ಗೆಯು ಅಧ್ಯಯನ ನಡೆಸಲಿದೆ.

**ಸಮಿತಿಯ ಸದಸ್ಯರು:**

- ಅಭಿನವ್ ಬಿಂದ್ರಾ (ಒಲಂಪಿಯನ್), ಅಂಜು ಬಾಬ್ಬಿ (ಒಲಂಪಿಯನ್), ಪ್ರಕಾಶ್ ಪಡುಕೋಣೆ (ಖ್ಯಾತ ಕ್ರೀಡಾ ಪಟು), ನರೀಂದರ್ ಬಾತ್ರ (ಹಾಕಿ ಫೆಡರೇಷನ್ ಅಧ್ಯಕ್ಷರು), ನಂದನ್ ಕಾಮತ್ (ವಕೀಲರು), ಬಿಶ್ವೇಶ್ವರ್ ನಂದಿ (ತರಭೇತುದಾರ) ಮತ್ತು ವಿಜಯ್ ಲೋಕಪಲ್ಲಿ (ಕ್ರೀಡಾ ಬರಹಗಾರ).

**ಸಮಿತಿಯ ಹೊಣೆಗಾರಿಕೆ:**

- ಅಂತಾರಾಷ್ಟ್ರೀಯ ಒಲಂಪಿಕ್ ಸಮಿತಿ ಚಾರ್ಟರ್ ನಂತೆ ಅತ್ಯುತ್ತಮ ಅಂತಾರಾಷ್ಟ್ರೀಯ ಕಾರ್ಯಾಚರಣೆ ಆಧರಿತ ನೀತಿಗಳನ್ನು ಹಾಗೂ ಉತ್ತಮ ಆಡಳಿತ ಮತ್ತು ಮೂಲಭೂತ ಸಾರ್ವತ್ರಿಕ ತತ್ವಗಳನ್ನು ಗುರುತಿಸುವುದು.
- ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ಕರಡು ಮಸೂದೆ, ರಾಷ್ಟ್ರೀಯ ಕ್ರೀಡಾ ಅಭಿವೃದ್ಧಿ ನೀತಿ-2011, ಹಾಗೂ ಕ್ರೀಡಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್ ನೀಡಿರುವ ತೀರ್ಪುಗಳನ್ನು ಪರಿಶೀಲಿಸಿ ಉತ್ತಮ ಕ್ರೀಡಾ ಆಡಳಿತ ವ್ಯವಸ್ಥೆಯನ್ನು ಜಾರಿಗೆ ತರುವುದು.

- ರಾಷ್ಟ್ರೀಯ ಕ್ರೀಡಾ ಒಕ್ಕೂಟ ಮತ್ತು ರಾಷ್ಟ್ರೀಯ ಒಲಂಪಿಕ್ ಸಮಿತಿ ಆಡಳಿತಕ್ಕೆ ಸಂಬಂಧಿಸಿದಂತೆ ಸಮಗ್ರ ರಾಷ್ಟ್ರೀಯ ಕ್ರೀಡಾ ನೀತಿಯನ್ನು ಜಾರಿಗೆ ತರಲು ಶಿಫಾರಸ್ಸು ಮಾಡುವುದು.

**<u>ಮಲೇಷ್ಯಾ ಮಾಸ್ಟರ್ ಪ್ರಶಸ್ತಿ ಗೆದ್ದ ಸೈನಾ ನೆಹ್ವಾಲ್</u>**



ಭಾರತದ ಬ್ಯಾಡ್ಮಿಂಟನ್ ತಾರೆ ಸೈನಾ ನೆಹ್ವಾಲ್ ಅವರು ಮಲೇಷ್ಯಾ ಮಾಸ್ಟರ್ ಗ್ರ್ಯಾನ್ ಪ್ರಿ ಗೋಲ್ಡ್ ಬ್ಯಾಡ್ಮಿಂಟನ್ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

- ಟೂರ್ನಿಯ ಫೈನಲ್ ಪಂದ್ಯದಲ್ಲಿ ಥಾಯ್ಲೆಂಡ್ ನ ಪೋರ್ನ್ಪಾವಿ ಚೊಚುವಾಂಗ್ ಅವರನ್ನು ಅವರನ್ನು ಮಣಿಸಿ ಕಿರೀಟ ಮುಡಿಗೇರಿಸಿಕೊಂಡಿದ್ದಾರೆ.
- ಚೊಚುವಾಂಗ್ ಅವರಿಗೆ ತೀವ್ರವಾಗಿ ಪೈಪೋಟಿ ನೀಡಿದ ಸೈನಾ ಅವರು 22-20,22-20 ಗೇಮ್ಗಳಿಂದ ಸೋಲಿಸಿದರು.
- ಕಳೆದ ವರ್ಷ ಆಸ್ಟ್ರೇಲಿಯನ್ ಓಪನ್ ಗೆದ್ದಿದ್ದ ಸೈನಾ ಅವರು 7 ತಿಂಗಳ ಬಳಿಕ ಟೈಟಲ್ ಮುಡಿಗೇರಿಸಿಕೊಂಡಿದ್ದಾರೆ.

**<u>ಟಾರ್ಗೆಟ್ ಒಲಂಪಿಕ್ ಪೋಡಿಯಂ ಯೋಜನೆಯಡಿ ಕ್ರೀಡಾಪಟುಗಳ ಆಯ್ಕೆಗೆ ಸಮಿತಿ ರಚನೆ</u>**



ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ ಟಾರ್ಗೆಟ್ ಒಲಂಪಿಕ್ ಪೋಡಿಯಂ (TOP) ಸಮಿತಿಯನ್ನು ಪುನರ್ ರಚಿಸಿದೆ. 2020 ಹಾಗೂ 2024 ರಲ್ಲಿ ನಡೆಯಲಿರುವ ಒಲಂಪಿಕ್ಸ್ ನಲ್ಲಿ ಪದಕ ಗೆಲ್ಲುವ ಸಂಭಾವ್ಯ ಕ್ರೀಡಾಪಟುಗಳನ್ನು ಗುರುತಿಸುವುದು ಈ ಸಮಿತಿಯ ಮುಖ್ಯ ಉದ್ದೇಶ. ಒಲಂಪಿಕ್ ಚಿನ್ನದ ಪದಕ ವಿಜೇತ ಅಭಿನವ್ ಬಿಂದ್ರಾ ಅವರು ಸಮಿತಿಯ ಅಧ್ಯಕ್ಷರಾಗಿದ್ದಾರೆ. ಅನಿಲ್ ಖನ್ನಾ, ಪ್ರಕಾಶ್ ಪಡುಕೋಣೆ, ಕರ್ಣಂ ಮಲ್ಲೇಶ್ವರಿ, ಪಿ.ಟಿ.ಉಷಾ, ಮುರಳಿಧರ್ ರಾಜಾ, ಅಂಜಲಿ ಭಾಗವತ್, ರೇಖಾ ಯಾದವ್, ಡಾ.ಎಸ್.ಎಸ್ ರಾಯ್ ಹಾಗೂ ಇಂದರ್ ಧಮಿಜ ಸಮಿತಿಯ ಸದಸ್ಯರಾಗಿದ್ದಾರೆ.

**ಪ್ರಮುಖಾಂಶಗಳು**:

- ವಿಶ್ವದರ್ಜೆಯ ಸೌಲಭ್ಯಗಳನ್ನು ಹೊಂದಿರುವ ಸಂಸ್ಥೆಗಳಲ್ಲಿ ತರಭೇತಿ ನೀಡಲು ಹಣಕಾಸು ನೆರವು ನೀಡಲು ಹಾಗೂ ಇತರೆ ಅಗತ್ಯ ಬೆಂಬಲ ನೀಡಲು ಕ್ರೀಡಾಪಟುಗಳನ್ನು ಆಯ್ಕೆಯನ್ನು ಸಮಿತಿ ಮಾಡಲಿದೆ.
- ಸಮಿತಿಯು ಒಂದು ವರ್ಷ ಆರಂಭಿಕ ಅವಧಿಯನ್ನು ಹೊಂದಿದ್ದು, ಅಗತ್ಯವಿದ್ದಾಗ ವಿಷಯ ತಜ್ಞರನ್ನು ಆಮಂತ್ರಿಸುವ ಹಾಗೂ ತನ್ನದೇ ಆದ ಸ್ವಂತ ವಿಧಾನಗಳಿಂದ ನಿರ್ಣಯವನ್ನು ಕೈಗೊಳ್ಳುವ ಅಧಿಕಾರವನ್ನು ಹೊಂದಿದೆ.

**ಟಾರ್ಗೆಟ್ ಒಲಂಪಿಕ್ ಪೋಡಿಯಂ:**

ಕೇಂದ್ರ ಯುವಜನ ವ್ಯವಹಾರ ಹಾಗೂ ಕ್ರೀಡಾ ಸಚಿವಾಲಯ ಟಾರ್ಗೆಟ್ ಒಲಂಪಿಕ್ ಪೋಡಿಯಂ ಯೋಜನೆಯನ್ನು ರೂಪಿಸಿದ್ದು, ರಾಷ್ಟ್ರೀಯ ಕ್ರೀಡಾ ಅಭಿವೃದ್ದಿ ನಿಧಿ ವ್ಯಾಪ್ತಿಯಲ್ಲಿ ಇದನ್ನು ಜಾರಿಗೆ ತರಲಾಗಿದೆ. 2020 ಹಾಗೂ 2024 ರಲ್ಲಿ ನಡೆಯಲಿರುವ ಒಲಂಪಿಕ್ ಕ್ರೀಡಾ ಕೂಟದಲ್ಲಿ ಅತಿ ಹೆಚ್ಚು ಪದಕಗಳನ್ನು ಗೆಲ್ಲಲ್ಲು ಕ್ರೀಡಾಪಟುಗಳನ್ನು ಸಿದ್ದಪಡಿಸುವುದು ಯೋಜನೆಯ ಉದ್ದೇಶ. ಯೋಜನೆಯಡಿ ಆಯ್ಕೆಯಾಗುವ ಕ್ರೀಡಾಪಟುಗಳಿಗೆ ವಿಶ್ವದರ್ಜೆ ತರಭೇತಿ ಸಂಸ್ಥೆಗಳಲ್ಲಿ ತರಭೇತಿ ಪಡೆಯಲು ಹಣಕಾಸು ನೆರವನ್ನು ನೀಡಲಾಗುವುದು.

**<u>ಸೈಯದ್ ಮೋದಿ ಗ್ರ್ಯಾನ್ ಪ್ರಿ ಗೋಲ್ಡ್ ಬ್ಯಾಡ್ಮಿಂಟನ್ ಟೂರ್ನಿ: ಸಿಂಧು. ವರ್ಮಾಗೆ ಗೆಲುವು</u>**




ಭಾರತದ ಪಿ.ವಿ ಸಿಂಧು ಮತ್ತು ಸಮೀರ್ ವರ್ಮಾ ಸೈಯದ್ ಮೋದಿ ಗ್ರ್ಯಾನ್ ಪ್ರಿ ಗೋಲ್ಡ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ವಿಜೇತರಾಗುವ ಮೂಲಕ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

**ಮಹಿಳಾ ಸಿಂಗಲ್ಸ್:**

- ಭಾರತದ ಸಿಂಧು 21–13, 21–14ರಲ್ಲಿ ಇಂಡೊನೇಷ್ಯಾದ ಗ್ರೆಗೊರಿಯಾ ಮರಿಸ್ಕಾ ಅವರನ್ನು ಮಣಿಸಿದರು. ಇದು ಸಿಂಧು ಅವರಿಗೆ ಸಂದ ಮೊದಲ ಪ್ರಶಸ್ತಿ.

**ಪುರುಷರ ಸಿಂಗಲ್ಸ್:**

- ಪುರುಷರ ವಿಭಾಗದ ಸಿಂಗಲ್ಸ್‌ನಲ್ಲಿ ಸಮೀರ್ 21–19, 21–16ರಲ್ಲಿ ಭಾರತದವರೇ ಆದ ಸಾಯಿ ಪ್ರಣೀತ್ ಅವರನ್ನು ಮಣಿಸಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡರು.

**ಮಿಶ್ರ ಡಬಲ್ಸ್:**

- ಮಿಶ್ರ ಡಬಲ್ಸ್‌ನಲ್ಲಿ ಪ್ರಣವ್ ಚೋಪ್ರಾ ಮತ್ತು ಎನ್. ಸಿಕ್ಕಿ ರೆಡ್ಡಿ ಪ್ರಶಸ್ತಿ ಗೆದ್ದರು. ಫೈನಲ್‌ನಲ್ಲಿ ಈ ಜೋಡಿ 22–20, 21–10ರಲ್ಲಿ ಅಶ್ವಿನಿ ಪೊನ್ನಪ್ಪ ಹಾಗೂ ಬಿ. ಸುಮೀತ್ ರೆಡ್ಡಿ ಅವರನ್ನು ಸೋಲಿಸಿದರು.

**ಮಹಿಳೆಯರ ಡಬಲ್ಸ್:**

- ಮಹಿಳೆಯರ ಡಬಲ್ಸ್‌ನಲ್ಲಿ ಕಮಿಲಾ ಜುಹಲ್ ಮತ್ತು ಕ್ರಿಸ್ಟಿನಾ ಪೆಡರ್ಸನ್ ಜೋಡಿ ಅಶ್ವಿನಿ ಪೊನ್ನಪ್ಪ ಹಾಗೂ ಎನ್.ಸಿಕ್ಕಿ ರೆಡ್ಡಿ ಮಣಿಸಿ ಪ್ರಶಸ್ತಿ ಗೆದ್ದುಕೊಂಡರು.

**<u>ಆಸ್ಟ್ರೇಲಿಯಾ ಓಪನ್ ಟೆನ್ನಿಸ್ ಟೂರ್ನಿ: ಇತಿಹಾಸ ಬರೆದ ಸೆರೆನಾ ವಿಲಿಯಮ್ಸ್</u>**



ಅಮೆರಿಕಾದ ಸೆರೆನಾ ವಿಲಿಯಮ್ಸ್ ಅವರು ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್‌ನಲ್ಲಿ ಟ್ರೋಫಿ ಗೆಲ್ಲುವ ಮೂಲಕ ಗ್ರ್ಯಾಂಡ್ ಸ್ಲಾಮ್ ಟೂರ್ನಿಗಳಲ್ಲಿ ಹೆಚ್ಚು ಪ್ರಶಸ್ತಿ ಗೆದ್ದ ಹಿರಿಮೆಗೆ ಪಾತ್ರರಾಗಿದ್ದಾರೆ. ಫೈನಲ್‌ನಲ್ಲಿ ಸೆರೆನಾ 6–4, 6–4ರಲ್ಲಿ ಅಕ್ಕ ವೀನಸ್ ವಿಲಿಯಮ್ಸ್ ಅವರನ್ನು ಸೋಲಿಸಿ ವಿಜೇತರಾದರು.

- ಸೆರೆನಾ 23ನೇ ಗ್ರ್ಯಾಂಡ್ ಸ್ಲಾಮ್ ಪ್ರಶಸ್ತಿ ಜಯಿಸಿ ಜರ್ಮನಿಯ ಸ್ಟೆಫಿಗ್ರಾಫ್ ಹೆಸರಿನಲ್ಲಿದ್ದ ದಾಖಲೆ ಅಳಿಸಿ ಹಾಕಿದರು. ಅಲ್ಲದೇ ವಿಶ್ವ ಕ್ರಮಾಂಕ ಪಟ್ಟಿಯಲ್ಲಿ ಮತ್ತೆ ಅಗ್ರಸ್ಥಾನಕ್ಕೇರಿದರು.
- ಸೆರೆನಾ ಅವರು 1999 ರಲ್ಲಿ ಮೊದಲ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಯನ್ನು ಗೆದ್ದುಕೊಂಡಿದ್ದರು. ಕಳೆದ ವರ್ಷ ನಡೆದ ವಿಂಬಲ್ಡನ್ ಟೂರ್ನಿಯಲ್ಲಿ ಟ್ರೋಫಿಗೆ ಮುತ್ತಿಕ್ಕಿ ಸ್ಟೆಫಿ ಗ್ರಾಫ್ ಹೆಸರಿನಲ್ಲಿದ್ದ (22 ಪ್ರಶಸ್ತಿ) ದಾಖಲೆ ಸರಿಗಟ್ಟಿದ್ದರು.

**ಪುರುಷರ ಸಿಂಗಲ್ಸ್ ಫೆಡರರ್ ಗೆ ಜಯ:**

ಸ್ವಿಟ್ಜರ್ಲ್ಯಾಂಡ್ ನ ವೃತ್ತಿಪರ ಟೆನ್ನಿಸ್ ಆಟಗಾರ ರೋಜರ್ ಫೆಡರರ್ ರವರು 2017 ಆಸ್ಟ್ರೇಲಿಯಾ ಓಪನ್ ಟೆನ್ನಿಸ್ ನಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು. ಫೈನಲ್ ಪಂದ್ಯದಲ್ಲಿ ಫೆಡರರ್ ಅವರು ರಫೆಲ್ ನಡಾಲ್ ಅವರನ್ನು 6-4, 3-6, 6-1, 3-6, 6-3 ಸೆಟ್ ಗಳಿಂದ ಮಣಿಸಿ ಪ್ರಶಸ್ತಿಗೆ ಮುತ್ತಿಕ್ಕಿದರು. ಫೆಡರರ್ ಗೆ ಇದು ಐದನೇ ಆಸ್ಟ್ರೇಲಿಯಾ ಓಪನ್ ಪ್ರಶಸ್ತಿ ಹಾಗೂ ಒಟ್ಟಾರೆಯಾಗಿ 18ನೇ ಗ್ರಾಂಡ್ ಸ್ಲಾಮ್ ಪ್ರಶಸ್ತಿ.